ಹೊಸ ಮನುಷ್ಯ


ಬೆಲೆ : ರೂ ೨೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೮ ಅಕ್ಟೋಬರ್ -೨೦೧೭ ಸಂಚಿಕೆ - ೩



ಜನಪದ ವಿಚಾರದಲ್ಲಿ

ಅಕ್ಟೋಬರ್ - ೨೦೧೬

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಅಕ್ಟೋಬರ್- ೨೦೧೭
ಸಂಪುಟ - ೧೮
ಸಂಚಿಕೆ - ೩

ಸಂಚಿಕೆಯ ಸಂಪಾದಕರು
ಕೆ.ಪಿ.ಸುರೇಶ
ಸಂತೋಷ್ ಕೌಲಗಿ

ಚಂದಾ ವಿವರ
ವಾರ್ಷಿಕ : ರೂ ೨೦೦/-
ಬಿಡಿ ಸಂಚಿಕೆ : ರೂ ೨೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 9141700812
08236 - 299854
email :
janapada@yahoo.com
Web: janapada.org

ಗಾಂಧಿಯವರ ಸ್ಮಾರಕ

ನಿನ್ನ ಪ್ರತಿಮೆಯ ನಿಲಿಸಿ
ನಾವು ಮೆರೆವುದು ವ್ಯರ್ಥ.
ನಮ್ಮ ಹೃದಯದೊಳಿರಲಿ
ನಿನ್ನ ಮರಣದ ಅರ್ಥ.

ನಿನ್ನ ಭಸ್ಮಕೆ ಕಾಶಿ
ಗೋಕರ್ಣ ಬೇಕಿಲ್ಲ.
ನಿನ್ನ ಬೂದಿಯ ತ್ರಾಣ
ಪುಣ್ಯಕ್ಷೇತ್ರಕ್ಕಿಲ್ಲ.

ನಿನ್ನ ಕರ್ಮದ ಕಲ್ಪ-
ವೃಕ್ಷ ಅಜರಾಮರವು.
ನಿನಗೇಕೆ ಪುಣ್ಯ ತಿಥಿ-
ಗಳ ಬಾಹ್ಯ ಜಂಜಡವು?

ಹುಟ್ಟಿದವರಿಗೆ ಹಬ್ಬ,
ಸತ್ತವರಿಗೇ ತಿಥಿಯು.
ನಿನಗೆ ಎರಡೂ ಇಲ್ಲ,
ಯಾವುದೂ ಇತಿಮಿತಿಯು

ಸುಳಿದ ಬಳಿಸ್ವರ್ಗವನು ಸುರಿದ
ಸಿರಿಪಾದವೇ,
ಪಾರ್ಥಿವ ಪರಂಜ್ಯೋತಿಯಾದ ಬದುಕೇ,
ಮಾನವತೆಯಿಂದ ಅಂಬರ ತುಂಬಿದ ಉಸಿರೆ,
ಇಹವೆಲ್ಲ ತನ್ನದೆಂದಾಳಿದೊಲವೇ,

ಕಂಬನಿಯ ಅರ್ಘ್ಯದಲಿ ನಾಡೆಲ್ಲ ತಲೆಬಾಗಿ
ಕಲ್ಲಾಯ್ತು; ಸದ್ಗತಿಯ ತೋರು, ತಂದೆ!
ಕಡಲು, ಕತ್ತಲೆ; ಹಡಗು
ಒಡೆದೀತು! - ಬೆಳಕಾಗಿ
ಭಾರತವ ಕೈಹಿಡಿದು ನಡಸು ಬಾ, ತಂದೆ!

- ಕೆ ಎಸ್ ನರಸಿಂಹಸ್ವಾಮಿ

ನಿಮ್ಮೊಂದಿಗೆ

ಮತ್ತೆ ಅಕ್ಟೋಬರ್ ಮಾಹೆ ಬಂದಿದೆ. ಈ ತಿಂಗಳ ಸಂಚಿಕೆಯನ್ನು ಗಾಂಧಿಯ ನೆನಪಲ್ಲಿ ರೂಪಿಸಬೇಕೆಂದುಕೊಂಡೆವು. ಗಾಂಧಿ ತನ್ನನ್ನು ಪ್ರೀತಿಸುವವರಿಗೂ ಇಷ್ಟವಾಗುತ್ತಾನೆ. ತನ್ನನೂ ಹಳಿಯುವವರಿಗೂ ಅನಿವಾರ್ಯವಾಗುತ್ತಿದ್ದಾನೆ.

ಆದರೆ ಈ ಸಂಚಿಕೆಯು ಮತ್ತೆ ಗಾಂಧಿ ಎಂಬ ವ್ಯಕ್ತಿಯ ಜೀವನ ಚರಿತ್ರೆಯ ಸುತ್ತ ಸುತ್ತಬಾರದು ಎಂದು ಕೊಂಡೆವು. ಹಾಗಾದರೆ ? ಗಾಂಧಿ ಎಂಬ ವಿಚಾರದ ಸುತ್ತ ಪತ್ರಿಕೆ ರೂಪುಗೊಳ್ಳಬೇಕು ಎಂದು ತೀರ್ಮಾನಿಸಿದೆವು. ಅದಕ್ಕಾಗಿ ಹಲವು ಲೇಖಕರನ್ನು ಸಂಪರ್ಕಿಸಿದೆವು.

ಹಿರಿಯ ಸಾಹಿತಿ ಶ್ರೀ ಶ್ರೀನಿವಾಸ ಉಡುಪರು ಗಾಂಧಿಯವರು ಸೂಚಿಸಿದ ಏಕಾದಶ ವ್ರತಗಳಿಗೆ ಸಂಬಂಧಿಸಿದ ಲೇಖನ ಒಂದನ್ನು ಕಳುಹಿಸಿದರು.

ಗೆಳೆಯ ರಾಜು ಅವರು ತಾವು ಅನುವಾದಿಸಿದ ಗಾಂಧಿಯೊಡನೆ ನಾಲ್ಕು ದಶಕಗಳ ಒಡನಾಟದಲ್ಲಿದ್ದ ನಾಸ್ತಿಕ ಕುಟುಂಬದಿಂದ ಬಂದ ಲವಣಂ ಅವರು ಬರೆದ ಲೇಖನವನ್ನು ಪ್ರೀತಿಯಿಂದ ಕಳುಹಿಸಿಕೊಟ್ಟರು.

ರಾಜ್ಯದ ಹಿರಿಯ ಸಮಾಜವಾದಿ ಚಿಂತಕ ಶ್ರೀ. ಡಿ.ಎಸ್.ನಾಗಭೂಷಣ ಅವರು ಗಾಂಧಿಯವರ ಬಗ್ಗೆ ಒಶೋ ಬರೆದಿರುವ ಪುಸ್ತಕಕ್ಕೆ ತಾವು ಬರೆದಿರುವ ವಿಮರ್ಶೆಯೊಂದನ್ನು ಕಳುಹಿಸಿದರು.

ಕನ್ನಡದ ಹೊಸ ತಲೆಮಾರಿನ ಚಿಂತಕ ಸಮರ್ಥೇಶ ಕರ್ಣಾವತಿ ಈ ಸಂಚಿಕೆಗಾಗಿಯೇ ಗಾಂಧಿಯ ಬಗ್ಗೆ ಒಂದು ಪ್ರಬುದ್ಧ ಲೇಖನವನ್ನು ಬರೆದು ಕೊಟ್ಟರು.

ಸುಘೋಷ ಕೌಲಗಿಯವರು ತಾವು ಇತ್ತೀಚಿಗೆ ಭೇಟಿ ಮಾಡಿದ ಗಾಂಧಿ ತಲೆಮಾರಿನ ಆದರ್ಶ ಮಹಿಳೆ ಮೀರಾ ಕೊಪ್ಪೀಕರ ಅವರ ಬಗ್ಗೆ ಮನ ಮುಟ್ಟುವಂತೆ ಲೇಖನವನ್ನು ಬರೆದು ಕೊಟ್ಟರು. ಉತ್ತರ ಕರ್ನಾಟಕದಲ್ಲಿ ಮದ್ಯಪಾನ ನಿಷೇಧಕ್ಕೆ ಹೋರಾಟ ನಡೆಸಿರುವ ಹೋರಾಟಗಾರ್ತಿ ಶ್ರೀಮತಿ ಸ್ವರ್ಣಾ ಭಟ್ ತಮ್ಮ ಚಳುವಳಿಯ ಅನುಭವವನ್ನು ಕಳುಹಿಸಿದ್ದು ಸಮಯೋಚಿತವಾಗಿ ಒದಗಿ ಬಂತು.

ಹೀಗೆ ಈ ಎಲ್ಲ ಲೇಖಕರ ಪ್ರೀತಿಯಿಂದ ಗಾಂಧಿ ಮಾಹೆಯ ಈ ಸಂಚಿಕೆ ಅರ್ಥಪೂರ್ಣವಾಗಿ ಹೊರಬರಲು ಸಾಧ್ಯವಾಯಿತು.

ಸುರೇಂದ್ರ ಕೌಲಗಿಯವರ ನಿಧನದ ನಂತರ ಹೊರ ಬರುತ್ತಿರುವ ಎರಡನೇ ಸಂಚಿಕೆ ಇದು. ಈ ಹೊತ್ತಿನಲ್ಲಿ ಗಾಂಧಿಯಷ್ಟೇ ಕೌಲಗಿಯವರು ನಮ್ಮ ಮನಸ್ಸಿನಲ್ಲಿದ್ದಾರೆ. ಅವರಿಗೂ ನಮ್ಮ ಈ ಪ್ರಯತ್ನ ಇಷ್ಟವಾಗುತ್ತಿತ್ತು ಎಂಬ ಭಾವನೆ ನಮ್ಮದಾಗಿದೆ.

ಮುಂದಿನ ಸಂಚಿಕೆ ಕನ್ನಡ ಭಾಷೆ, ಸಂಸ್ಕೃತಿ, ಪರಿಸರ, ಅಭಿವೃದ್ಧಿಯನ್ನು ಕೇಂದ್ರವಾಗಿಟ್ಟು ಕೊಂಡು ರೂಪಿಸುತ್ತಿದ್ದೇವೆ. ಎಂದಿನಂತೆ ನಿಮ್ಮ ಬೆಂಬಲ ನಮಗಿರಲಿ.

ವಿಚಾರ ರಶ್ಮಿ

– ಎನ್. ಶ್ರೀನಿವಾಸ ಉಡುಪ

ಅಪರಿಗ್ರಹ

ಆಧುನಿಕ ಜಗತ್ತು ಕಾಲಹತ (outdated) ಎಂದು ಭಾವಿಸಿ, ದೂರವಿಟ್ಟಿರುವ ಪರಿಕಲ್ಪನೆಗಳಲ್ಲಿ 'ಅಪರಿಗ್ರಹ'ವೆಂಬುದೂ ಒಂದು. ನಮ್ಮ ಹಿರಿಯರಲ್ಲಿ ಕೆಲವರಾದರೂ ಅಪರಿಗ್ರಹ ಪರಿಪಾಲನೆಯನ್ನು ಒಂದು ವ್ರತವೆಂದು ಪರಿಗಣಿಸುತ್ತಿದ್ದರೆಂಬುದು ಸುಳ್ಳಲ್ಲ. 'ಪರಿಗ್ರಹ'ವೆಂದರೆ ಇತರರಿಂದ ಏನನ್ನಾದರೂ ಪಡೆಯುವುದು ಮಾತ್ರವೇ ಅಲ್ಲ; ಹಾಗೆ ಪಡೆದುದನ್ನು ಭವಿಷ್ಯದ ಉಪಯೋಗಕ್ಕಾಗಿ ಸಂಗ್ರಹಿಸಿ ಇಟ್ಟುಕೊಳ್ಳುವುದೂ ಕೂಡ. ಅಪರಿಗ್ರಹವೆಂದರೆ ಅನಿವಾರ್ಯ ಸಂದರ್ಭದಲ್ಲಿ, ನಮ್ಮ ಅಗತ್ಯಕ್ಕೆ ಬೇಕಾದಷ್ಟನ್ನು ಮಾತ್ರ ಇತರರಿಂದ ಪಡೆದು, ಹಾಗೆ ಪಡೆದುದನ್ನು ಕೂಡಿಡದೇ ತಕ್ಷಣ ಉಪಯೋಗಿಸಿಕೊಳ್ಳುವುದು. ಅಪರಿಗ್ರಹವೆಂಬುದನ್ನು ವ್ರತವಾಗಿ ಸ್ವೀಕರಿಸಿರುವಾತ ನಾಳೆಯ ಚಿಂತೆ ಮಾಡುವುದಿಲ್ಲ. ಆತನಿಗೆ ಈ ದಿನದ ಅಗತ್ಯ ಪೂರೈಸಿದರಷ್ಟೇ ಸಾಕು. ಭವಿಷ್ಯಕ್ಕಾಗಿ ಕೂಡಿಡಬೇಕೆಂಬ ಹಂಬಲ ದುರಾಶೆಯನ್ನು ಹುಟ್ಟುಹಾಕುತ್ತದೆ, ಇಡೀ ಪರಿವಾರಕ್ಕೆ ಮಾತ್ರವಲ್ಲ, ಮುಂದಿನ ತಲೆಮಾರುಗಳ ಸಲುವಾಗಿಯೂ ಕೂಡಿಡಬೇಕೆಂಬ ತುಡಿತ ತೀವ್ರವಾಗಿ ಕಾಣಿಸಿಕೊಂಡು, ಮನುಷ್ಯ ಗರಿಷ್ಠಮಟ್ಟದ ಸ್ವಾರ್ಥಿಯಾಗುತ್ತಾನೆ; ಪರಿಣಾಮವಾಗಿ ಬೇರೊಬ್ಬರ ಅನ್ನವನ್ನೂ, ಸುಖ ಸಮಾಧಾನಗಳನ್ನೂ ಕಸಿದುಕೊಳ್ಳುತ್ತಾನೆ. ಆದ್ದರಿಂದಲೇ ಗಾಂಧೀಜಿ ಸಂಗ್ರಹಿಸಿ, ಕೂಡಿಡುವ ಪ್ರವೃತ್ತಿಯನ್ನು ಕಳ್ಳತನಕ್ಕೆ ಸಮಾನವೆಂದು ಪರಿಗಣಿಸಿದ್ದರು. ಅನಗತ್ಯವಾಗಿ ಕೂಡಿಟ್ಟ ಪದಾರ್ಥಗಳು ಬಹಳಷ್ಟು ಬಾರಿ ದುಷ್ಟ ಉಪಯೋಗಗಳಿಗೆ ಒದಗುತ್ತವೆ; ಇನ್ನೊಬ್ಬರ ಅಗತ್ಯಕ್ಕೆ ಒದಗದೇ ನಿರರ್ಥಕವೆನಿಸುತ್ತವೆ. ಪದಾರ್ಥಗಳು ದೊರೆಯದೇ, ಅವುಗಳ ಅಗತ್ಯವಿದ್ದವರು ಅನಿವಾರ್ಯವಾಗಿ ತೊಂದರೆಗೆ ಒಳಗಾಗುತ್ತಾರೆ. ಅಪರಿಗ್ರಹ ವ್ರತಿಯಾದವನು ತಾನೂ ಬದುಕಿ, ಇತರರೂ ಬದುಕಲು ಅವಕಾಶ ಮಾಡಿಕೊಡುತ್ತಾನೆ.

ಛಾಂದೋಗ್ಯ ಉಪನಿಷತ್ತಿನಲ್ಲಿ ಹೀಗೊಂದು ಕಥೆ ಇದೆ: ಉಷಸ್ತಿಯೆಂಬ ಕಡು ಬಡವನಿದ್ದ. ಆತ ಬದುಕಿದ್ದ ಕುರುಪಾಂಚಾಲದಲ್ಲಿ ಒಮ್ಮೆ ತೀವ್ರ ಬರಗಾಲ ಕಾಣಿಸಿಕೊಂಡಿತು. ಒಮ್ಮೆ ಉಷಸ್ತಿ ಹಸಿವು ತಾಳಲಾರದೇ ಆಹಾರವನ್ನು ಅರಸುತ್ತ ಹೊರಟ. ಒಬ್ಬ ಮಾವುತನಿಂದ ಒಂದಿಷ್ಟು ಬೇಯಿಸಿದ ಕಾಳನ್ನು ಪಡೆದು, ಅವು ಎಂಜಲಾಗಿದ್ದರೂ ಅವನ್ನು ತಿಂದು ಹಸಿವನ್ನು ತಣಿಸಿಕೊಂಡ. ಮಾವುತ ಕುಡಿಯಲು

ನೀರು ಕೊಟ್ಟಾಗ ಬೇಡವೆಂದ. "ಕ್ಷಾಮ ಬಂದಿರುವುದು ನೀರಿಗಲ್ಲ, ಆಹಾರಕ್ಕೆ. ನೀರು ಕೆರೆ ಭಾವಿಗಳಲ್ಲಿ ಸಿಕ್ಕುತ್ತದೆ. ನನಗೆ ಅವಶ್ಯವಾಗಿರುವ ವಸ್ತು ಬೇರೆಡೆ ಸಿಗುವಾಗ, ಅದನ್ನು ನಿನ್ನಿಂದ ತೆಗೆದುಕೊಳ್ಳಲಾರೆ" ಎಂದು ತಾನು ನೀರನ್ನು ನಿರಾಕರಿಸಿದುದಕ್ಕೆ ಆತ ಕಾರಣ ಹೇಳಿದ. ಹೀಗೆ ಯಾವುದು ಅತೀ ಅಗತ್ಯವೋ ಅದನ್ನು ಮಾತ್ರ ಪಡೆದು, ಅನಗತ್ಯವಾದುದಕ್ಕೆ ಆಸೆ ಪಡದಿರುವುದೇ ನಿಜವಾದ ಅಪರಿಗ್ರಹ.

ಲೋಕಜೀವನದಲ್ಲಿ ಪಡೆಯುವುದು, ಕೊಡುವುದು – ಎರಡೂ ನಿರಂತರವಾಗಿ ನಡೆಯುತ್ತಲೇ ಇರುತ್ತವೆ. ನಾವೆಲ್ಲರೂ ಪ್ರಕೃತಿಯಿಂದಲೋ, ಸಹಜೀವಿಗಳಿಂದಲೋ ಏನನ್ನಾದರೂ ಪಡೆಯುತ್ತಲೇ ಇರುತ್ತೇವೆ. ಪ್ರತಿಯಾಗಿ ಅರಿವಿದ್ದೋ, ಇಲ್ಲದೆಯೋ ಕೊಡುತ್ತಲೂ ಇರುತ್ತೇವೆ. ನಾವು ನೀರು, ಮಣ್ಣು, ಗೊಬ್ಬರ ಹಾಕಿ ಬೆಳೆಸಿದ ಸಸ್ಯಗಳು ನಮಗೆ ಹೂ ಹಣ್ಣು ಧಾನ್ಯ ಇತ್ಯಾದಿಗಳ ರೂಪದಲ್ಲಿ ಸಂತೋಷ ಸಮಾಧಾನಗಳನ್ನು ಕೊಡುತ್ತವೆಯಲ್ಲವೇ? ತಾಯಿ ತನ್ನ ಮಗುವಿಗೆ ಪ್ರೀತಿ ನೀಡಿ, ಮಗುವಿನಿಂದ ಆನಂದವನ್ನು ಪಡೆಯುತ್ತಾಳೆ. ನಾವು ಉಸಿರಾಡುವಾಗ ವಾತಾವರಣದಿಂದ ಆಮ್ಲಜನಕವನ್ನು ಪಡೆದು, ಇಂಗಾಲಾಮ್ಲವನ್ನು ಕೊಡುತ್ತೇವೆ. ಇಂಥ ವಿನಿಮಯಕ್ರಿಯೆ ಸಹಜ ಮಾತ್ರವಲ್ಲ, ಅನಿವಾರ್ಯವೂ ಕೂಡ. ಸ್ವಾರ್ಥ ಪರಾರ್ಥಗಳು ಹಿತಮಿತ ಪ್ರಮಾಣದಲ್ಲಿ ಹೆಣೆದುಕೊಂಡಿದ್ದಾಗಲೇ ಲೋಕಜೀವನ ಸಹ್ಯವಾಗುತ್ತದೆ. ತನಗೊಬ್ಬನಿಗೇ ಇಲ್ಲಿನ ಎಲ್ಲವೂ ದಕ್ಕಬೇಕೆಂಬ ದುರಾಶೆ ಬದುಕಿನ ಸಮತೋಲನವನ್ನು ಕೆಡಿಸುತ್ತದೆ. ಆಗಲೇ ಜಗತ್ತು 'ಕುರುಕ್ಷೇತ್ರ'ವೆನಿಸಿಕೊಳ್ಳುವುದು. ಸ್ವಾರ್ಥವನ್ನು ಮಿತಿಗೊಳಿಸಿಕೊಂಡು, ಪರಹಿತವನ್ನು ಗಮನದಲ್ಲಿಟ್ಟುಕೊಂಡು ಬದುಕುವಾತ ಅಪರಿಗ್ರಹ ವ್ರತವನ್ನು ಸ್ವೀಕರಿಸುತ್ತಾನೆ. ಆಧುನಿಕ ಮನುಷ್ಯ ಅಪರಿಗ್ರಹದಿಂದ ದೂರವಾಗಿರುವುದೇ ಎಲ್ಲ ಕ್ಷೋಭೆಗಳಿಗೆ ಕಾರಣವಾಗಿದೆ.

ಅಸಂಗ್ರಹ

ಗಾಂಧೀಜೀ ಅತ್ಯಂತ ಮೌಲಿಕವೆಂದು ಭಾವಿಸಿದ್ದ ಸತ್ಯ, ಅಹಿಂಸೆ, ಅಸ್ತೇಯ – ಇತ್ಯಾದಿ ವ್ರತಗಳಲ್ಲಿ ಅಸಂಗ್ರಹವ್ರತವೂ ಒಂದು. ಅನುಚಿತವಾಗಿ, ಅನಗತ್ಯವಾಗಿ ಯಾವುದನ್ನೇ ಆದರೂ ಸಂಗ್ರಹಿಸಿಡುವ ಪ್ರವೃತ್ತಿಯನ್ನು ಕೈಬಿಡುವುದೇ ಅಸಂಗ್ರಹ ವ್ರತ. ಸಂಗ್ರಹ ಪ್ರವೃತ್ತಿ ಎಂಬುದು ಮಾನವ ಪ್ರಾಣಿಗೆ ಹುಟ್ಟಿನಿಂದಲೇ ಬಂದ ಗುಣ. ಆದರೆ ಅದಕ್ಕೊಂದು ಮಿತಿಯಿರಿಸಿಕೊಳ್ಳುವುದನ್ನು ಪ್ರಜ್ಞಾಪೂರ್ವಕವಾಗಿ ರೂಢಿಸಿಕೊಳ್ಳದಿದ್ದರೆ ವ್ಯಷ್ಟಿ ಸಮಷ್ಟಿಗಳೆರಡಕ್ಕೂ ಹಾನಿ. ಈ ದಿನ ಬದುಕಲು ಎಷ್ಟು ಬೇಕೋ ಅಷ್ಟನ್ನು ಉಳಿಸಿಕೊಳ್ಳುವುದು, ನಾಳಿನ ಚಿಂತೆ ಮಾಡದಿರುವುದು – ಅಸಂಗ್ರಹವೃತ್ತಿಯ 'ಪರಮ' ಲಕ್ಷಣ. ಇದೊಂದು ಅವಧೂತ ಸ್ಥಿತಿ, ವ್ಯಾವಹಾರಿಕವಾಗಿ ಅಸಾಧ್ಯ – ಎನ್ನಿಸುವುದು ಸಹಜ. ಹೊಲಗದ್ದೆಗಳಲ್ಲಿ ಬಿದ್ದ ಧಾನ್ಯದ ಕಾಳುಗಳನ್ನು

ಅಂದಂದಿಗೆ ಬೇಕಾದಷ್ಟೇ ಸಂಗ್ರಹಿಸಿ, ಅಸಂಗ್ರಹ ವ್ರತ ಪಾಲಿಸುತ್ತಿದ್ದ ಹೊಯ್ದಕ್ಕಿ ಮಾರಯ್ಯನಂಥವರನ್ನು ಈ ಕಾಲದಲ್ಲಿ ಕಾಣುವುದು ಅಸಾಧ್ಯ.

ನಾಗರಿಕ ಪೂರ್ವಯುಗದಲ್ಲಿ ಜೀವಿಸಿದ್ದ ಮನುಷ್ಯನಿಗೆ ಭವಿಷ್ಯದ ಕುರಿತು ಚಿಂತೆಯಿರಲಿಲ್ಲ. ಕೈಗೆ ಸಿಕ್ಕ ಗೆಡ್ಡೆಗೆಣಸುಗಳಿಂದಲೋ, ಆಯುಧಗಳಿಗೆ ಒದಗಿದ ಪ್ರಾಣಿಗಳಿಂದಲೋ ಆ ಕ್ಷಣದ ಹಸಿವು ತೀರಿದರೆ ಆತ ನಿಶ್ಚಿಂತನಾಗಿರುತ್ತಿದ್ದ. ನಾಳೆಗಾಗಿ ಕೂಡಿಡಬೇಕೆಂಬ ಯೋಚನೆ ಆತನಿಗಿರಲಿಲ್ಲ. ಆದರೆ ಮನುಷ್ಯ ನಾಗರಿಕನಾಗುತ್ತಾ ಬಂದಂತೆ ಭವಿಷ್ಯವನ್ನು ಕುರಿತು ಚಿಂತಿಸತೊಡಗಿದ. ಆತನ ಅಗತ್ಯಗಳು ಹೆಚ್ಚಿದಂತೆ, ಸಂಗ್ರಹ ಪ್ರವೃತ್ತಿಯೂ ಬಲಿಯತೊಡಗಿತು. ಇರುವೆ, ಗೆದ್ದಲು, ಇಲಿ – ಇಂಥ ಜೀವಿಗಳೂ ಅಲ್ಪಸ್ವಲ್ಪ ಆಹಾರ ಪದಾರ್ಥಗಳನ್ನು ಶೇಖರಿಸಿಡುತ್ತವೆ. ಆದರೆ ಅವುಗಳಿಗೆ ಮನುಷ್ಯನಂತೆ ಸ್ವತಃ ತಮ್ಮ ಅನ್ನವನ್ನು ತಾವೇ ಉತ್ಪಾದಿಸಲು ಸಾಧ್ಯವಿಲ್ಲ. ಮನುಷ್ಯನಿಗೆ ಈ ಉತ್ಪಾದನಾ ಸಾಮರ್ಥ್ಯದ ಜೊತೆಜೊತೆಗೇ ನಾಳಿನ ಕುರಿತಾದ ಭಯವೂ ಇದೆ. ಆದ್ದರಿಂದಲೇ ಹೆಚ್ಚು ಹೆಚ್ಚು ಕೂಡಿಡಬೇಕೆಂಬ ಆತುರ ಅವನಲ್ಲಿ ಕಾಣಿಸಿಕೊಳ್ಳುವುದು. ಕೇವಲ ತನ್ನೊಬ್ಬನ ಭವಿಷ್ಯಕ್ಕಾಗಿಯಲ್ಲ, ತನ್ನ ಮುಂದಿನ ಪೀಳಿಗೆಯ ಮುಂದಿನ ದಿನಗಳಿಗಾಗಿ ಎಷ್ಟೆಷ್ಟು ಸಾಧ್ಯವೋ, ಅಷ್ಟು ಕೂಡಿಹಾಕಬೇಕೆಂಬ 'ಗೀಳು' ಸಂಗ್ರಹ ಪ್ರವೃತ್ತಿಯ ಶೃಂಗಸ್ಥಿತಿ. ಇದರಿಂದಾಗಿ ನಮ್ಮ ದುಡಿಮೆಯಿಂದ ನಾವು ಪಡೆಯುವುದರ ಜೊತೆಗೆ, ಇನ್ನೊಬ್ಬರ ಗಳಿಕೆಯತ್ತಲೂ ನಮ್ಮ ಕಣ್ಣು ಹೊರಳುತ್ತವೆ. "ಇಷ್ಟು ದೊರಕಿದರು ಮತ್ತಷ್ಟು ಬೇಕೆಂಬಾಸೆ, ಅಷ್ಟು ದೊರಕಿದರು, ಮತ್ತಷ್ಟರಾಸೆ" – ಎಂದು ದಾಸರು ಹಾಡಿದ್ದು ಇಂಥ ಭವತೃಷ್ಣೆಯನ್ನು ಕುರಿತೇ.

ವ್ಯಕ್ತಿಯೊಬ್ಬ ತನ್ನ ಆವಶ್ಯಕತೆಗಳನ್ನು ಮೀರಿ ಕೂಡಿಹಾಕುತ್ತಾ ಬರುವುದು ಒಂದು ಸಾಮಾಜಿಕ ಪಾಪ. ಇನ್ನೊಬ್ಬನಿಗೆ ಸಲ್ಲಬೇಕಾಗಿರುವುದನ್ನು ನಾವು ಉಳಿಸಿಕೊಂಡರೆ ಆ ಇನ್ನೊಬ್ಬ ಹೊಟ್ಟೆಗಿಲ್ಲದೇ ನರಳುವಂತಾಗುತ್ತದೆ. ಅನಗತ್ಯ ಸಂಗ್ರಹ ಕಳ್ಳತನಕ್ಕೆ ಸಮಾನವಾದುದು ಎನ್ನುತ್ತಾರೆ ಗಾಂಧೀಜೀ. ಈ ಅನಗತ್ಯ ಸಂಗ್ರಹ ಪ್ರವೃತ್ತಿಯನ್ನು ಈಶಾವಾಸ್ಯ ಉಪನಿಷತ್ತು 'ಗೃಧ' (greed) ಎನ್ನುತ್ತದೆ. "ಮಾ ಗೃಧಃ ಕಸ್ಯಸ್ವಿದ್ ಧನಮ್" (ಇತರರ ಧನಕ್ಕೆ ಆಸೆ ಪಡಬೇಡ) – ಎಂಬುದು ಉಪನಿಷತ್ತಿನ ಮಹಾವಾಕ್ಯಗಳಲ್ಲಿ ಒಂದು. "ಔಷಧವತ್ ಅಶನಮಾಚರೇತ್" (ಆಹಾರವನ್ನು ಕೂಡಾ ಔಷಧಿಯಂತೆ ಬಳಸಬೇಕು) ಎಂಬ ಆರುಣೀಯ ಉಪನಿಷತ್ತಿನ ಮಾತಿನಲ್ಲೂ ಅಸಂಗ್ರಹ ವ್ರತದ ಮಹತ್ವ ಕಾಣಿಸಿಕೊಳ್ಳುತ್ತದೆ. ಆಚಾರ್ಯ ಶಂಕರರು ಇದನ್ನೇ ಅತ್ಯಂತ ಸ್ಪಷ್ಟ ಮಾತುಗಳಲ್ಲಿ ಹೇಳಿದ್ದಾರೆ:

ಮೂಢ ಜಹೀಹಿ ಧನಾಗಮತೃಷ್ಣಾಂ
ಕುರು ಸದ್ಬುದ್ಧಿಂ ಮನಸಿ ವಿತೃಷ್ಣಾಮ್ ।
ಯಲ್ಲಭಸೇ ನಿಜಕರ್ಮೋಪಾತ್ತಂ
ವಿತ್ತಂ ತೇನ ವಿನೋದಯ ಚಿತ್ತಮ್ ॥

(ಎಲೈ ಮೂಢನೆ, ಧನ ಸಂಚಯದ ತೃಷ್ಣೆಯನ್ನು ತೊರೆ; ಮನಸ್ಸಿನಲ್ಲಿ ಸದ್ಬುದ್ಧಿಯನ್ನೂ ವೈರಾಗ್ಯವನ್ನೂ ಬೆಳೆಸು; ನಿನ್ನ ಕರ್ಮದಿಂದ ಬರುವ ದ್ರವ್ಯದಿಂದ ಮನಸ್ಸನ್ನು ತೃಪ್ತಿಗೊಳಿಸು)

ಅಸ್ತೇಯ

ಸ್ತೇಯ ಎಂದರೆ ಕಳ್ಳತನ. ಅಸ್ತೇಯವೆಂದರೆ ಕಳ್ಳತನ ಮಾಡದಿರುವುದು. ಗಾಂಧೀಜೀ ಪ್ರತಿಪಾದಿಸುವ ಹನ್ನೊಂದು ವ್ರತಗಳಲ್ಲಿ ಸತ್ಯ, ಅಹಿಂಸೆಗಳಿಗೆ ಮೊದಲ ಎರಡು ಸ್ಥಾನಗಳಾದರೆ ಅಸ್ತೇಯ ವ್ರತಕ್ಕೆ – ಮೂರನೇ ಸ್ಥಾನ. ಸತ್ಯ ಮತ್ತು ಅಹಿಂಸೆಗಳನ್ನು ಅನುಷ್ಠಾನದಲ್ಲಿರಿಸಿಕೊಂಡಾತ ಅಸ್ತೇಯ ವ್ರತಕ್ಕೆ ಸಹಜವಾಗಿ ಒಗ್ಗಿಕೊಳ್ಳುತ್ತಾನೆ. ಏಕೆಂದರೆ ಕಳ್ಳತನದಲ್ಲಿ ಅಸತ್ಯ, ಹಿಂಸೆ – ಎರಡೂ ಅಂತರ್ಗತವಾಗಿವೆ. ಹೀಗಾಗಿ ಸತ್ಯವ್ರತಿಗೆ, ಅಹಿಂಸಾಧರ್ಮಿಗೆ ಕಳ್ಳತನ ಅಸಾಧ್ಯ.

ಪರರ ಪದಾರ್ಥವನ್ನು ಅದರ ಮಾಲೀಕರಿಗೆ ಗೊತ್ತಾಗದಂತೆ ತೆಗೆದುಕೊಳ್ಳುವುದೇ ಕಳ್ಳತನ. ಇದು ಕಳ್ಳತನವನ್ನು ಕುರಿತಾದ ಒಂದು ಸರಳ ವ್ಯಾಖ್ಯೆ. ಕಳ್ಳತನಕ್ಕೆ ಕಾರಣವೇನು – ಎಂಬ ಮೂಲಭೂತ ಪ್ರಶ್ನೆಗೆ ಉತ್ತರಿಸುವುದು ಅಷ್ಟು ಸುಲಭವಲ್ಲ. ಈ ಪ್ರಶ್ನೆಯಲ್ಲಿ ಆರ್ಥಿಕ, ಸಾಮಾಜಿಕ, ನೈತಿಕ ಅಂಶಗಳೆಲ್ಲವೂ ಸೇರಿಕೊಂಡಿವೆ. ಸಮಾಜದಲ್ಲಿನ ಉಳ್ಳವರು, ಇಲ್ಲದವರು ಎಂಬ ಅಸಮಾನತೆ, ವ್ಯಕ್ತಿಯಲ್ಲಿನ ನೈತಿಕ ದೌರ್ಬಲ್ಯ – ಇಂಥ ಹಲವು ಸಂಗತಿಗಳು ಕಳ್ಳತನಕ್ಕೆ ಪ್ರಚೋದನೆ ನೀಡುತ್ತವೆ. ಮನುಷ್ಯನಲ್ಲಿ ಪ್ರಾಕೃತಿಕವಾಗಿರುವ ಕೆಲಸಗಳ್ಳ ಪ್ರವೃತ್ತಿಯಿಂದಾಗಿ ಪರರ ಸ್ವತ್ತನ್ನು, ಇನ್ನೊಬ್ಬರ ದುಡಿಮೆಯನ್ನು ಅಪಹರಿಸಿ ಅನುಭವಿಸುವ ಚಾಪಲ್ಯ ಕಾಣಿಸಿಕೊಳ್ಳುತ್ತದೆ. ಕಳ್ಳತನಕ್ಕೆ ಮತ್ತೊಂದು ಕಾರಣವೆಂದರೆ ತನ್ನ ಮಿತಿಯಿಂದಾಚೆಗೆ ಹೋಗಿ ಸುಖಿಸುವ ತುಡಿತವೆನ್ನಬಹುದು.

ಗಾಂಧೀಜೀಯ ಪ್ರಕಾರ ನಮ್ಮದೆನ್ನಿಸಿಕೊಂಡಿರುವ ಪದಾರ್ಥದ ಮೇಲೆ ಸಮಷ್ಟಿಯ ಹಿತ ಅವಲಂಬಿಸಿರುವ ಸಂದರ್ಭದಲ್ಲಿ ನಾವು ಮಾತ್ರ ಆ ವಸ್ತುವನ್ನು ಬಳಸಿಕೊಳ್ಳುವ ಕ್ರಿಯೆಯೂ ಕಳ್ಳತನಕ್ಕೆ ಸಮಾನವಾದುದು. ಇಡಿಯ ಸಮಾಜಕ್ಕೆ ಸೇರಿರುವ ಪದಾರ್ಥವನ್ನು – ನಾವೂ ಆ ಸಮಾಜಕ್ಕೆ ಸೇರಿದವರಾದರೂ – ಇತರರ ಹೊರತಾಗಿ ನಾವಷ್ಟೇ ಉಪಭೋಗಿಸುವುದು ಕಳ್ಳತನ. ಸರಳವಾಗಿ ಹೇಳುವುದಾದರೆ ಮನೆಯಲ್ಲಿರುವ ತಿನಿಸೊಂದನ್ನು ಬೇರೆಯವರಿಗೆ ಕಾಣದಂತೆ

ಬಚ್ಚಿಟ್ಟು ನಾನೊಬ್ಬನೇ ತಿಂದರೆ, ನಾನೂ ಒಬ್ಬ ಕಳ್ಳನೇ. ಇಷ್ಟು ಮಾತ್ರವಲ್ಲದೆ, ನಮಗೆ ಅಗತ್ಯವಿಲ್ಲದ ಯಾವುದೇ ಪದಾರ್ಥವನ್ನು – ಅದನ್ನು ಇನ್ನೊಬ್ಬರಿಂದ ಕೇಳಿ ಪಡೆದಿದ್ದರೂ – ಉಪಯೋಗಿಸಿ ಸುಖಿಸುವುದೂ ಒಂದು ಬಗೆಯ ಕಳ್ಳತನವೇ. ಈ ಮಾತನ್ನು ನಾವು ತಿನ್ನುವ ಆಹಾರಕ್ಕೂ ಅನ್ವಯಿಸಬಹುದು. ಹಸಿವನ್ನು ತೃಪ್ತಿಪಡಿಸಿಕೊಂಡ ನಂತರ ಸೇವಿಸುವ ಆಹಾರ ಇನ್ನೊಬ್ಬನ ತುತ್ತನ್ನು ಅಪಹರಿಸಿದಂತೆ. "ಅಸ್ತೇಯ ವ್ರತವನ್ನು ಪಾಲಿಸುವ ವ್ಯಕ್ತಿ ಕ್ರಮೇಣ ತನ್ನ ಆವಶ್ಯಕತೆಗಳನ್ನು ತಗ್ಗಿಸುತ್ತಾನೆ. ಜಗತ್ತಿನಲ್ಲಿರುವ ಬಡತನದ ಹೆಚ್ಚಿನ ಭಾಗ ಅಸ್ತೇಯ ವ್ರತದ ಭಂಗದಿಂದಲೇ ಬಂದಿದೆ" ಎನ್ನುತ್ತಾರೆ ಗಾಂಧೀಜೀ. ಅವರ ದೃಷ್ಟಿಯಲ್ಲಿ ಅಸ್ತೇಯ ವ್ರತವೆಂಬುದು ಅಪರಿಗ್ರಹ ವ್ರತದ ತಾಯಿಯಿದ್ದಂತೆ.

ಶಾರೀರಿಕ ಕಳ್ಳತನವೆಂಬುದು ಸ್ಥೂಲ ರೂಪದ್ದು. ಮಾನಸಿಕವಾದ ಸೂಕ್ಷ್ಮರೂಪದ ಅನೇಕ ಕಳ್ಳತನಗಳಲ್ಲಿ ತಿಳಿದೋ, ತಿಳಿಯದೆಯೋ ನಾವು ಪಾಲುದಾರರಾಗುತ್ತೇವೆ. ಇನ್ನೊಬ್ಬರಿಗೆ ಸೇರಿರುವ ವಸ್ತುಗಳನ್ನು ಮಾನಸಿಕವಾಗಿ ಬಯಸುವುದೂ ಸ್ತೇಯವೇ. ಆದ್ದರಿಂದಲೇ ಉಪನಿಷತ್ತು "ಮಾ ಗೃಧಃ ಕಸ್ಯಸ್ವಿದ್ಧನಮ್" (ಯಾರ ಧನಕ್ಕೂ ಆಶೆಪಡಬೇಡಿ) ಎಂದು ಆದೇಶಿಸುತ್ತದೆ.

ಹಣ, ಪದಾರ್ಥಗಳನ್ನು ಕದಿಯುವಂಥ ಕಳ್ಳರ ಮಾತಿರಲಿ; ಇನ್ನೊಬ್ಬರ ಸಂಶೋಧನೆ, ವಿಚಾರ, ಕೃತಿ – ಇತ್ಯಾದಿಗಳನ್ನು ಕಳುವು ಮಾಡುವ 'ಬುದ್ಧಿಜೀವಿ' ಕಳ್ಳರೂ ಸಾಕಷ್ಟಿದ್ದಾರೆ. ಅಸ್ತೇಯ ವ್ರತಿಯಾದ ಮನುಷ್ಯ ಇಂಥ ವೈಚಾರಿಕ ಕಳ್ಳತನ, ಕೃತಿಚೌರ್ಯಗಳಿಂದ ಸದಾ ದೂರವಿರುತ್ತಾನೆ. ಆದ್ದರಿಂದಲೇ ಅಂತರಂಗಶುದ್ಧಿ, ಬಹಿರಂಗಶುದ್ಧಿ – ಎರಡನ್ನೂ ಸಾಧಿಸಿಕೊಳ್ಳಬೇಕೆನ್ನುವಾತನಿಗೆ ಬಸವಣ್ಣನವರು "ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ" – ಎಂಬ ಕಿವಿಮಾತು ಹೇಳಿರುವುದು.

ಅಸ್ವಾದ

ಗಾಂಧೀಜೀ ಪ್ರತಿಪಾದಿಸಿದ ಹನ್ನೊಂದು ವ್ರತಗಳಲ್ಲಿ 'ಅಸ್ವಾದ'ವೂ ಒಂದು. ರುಚಿಯ ಚಾಪಲ್ಯಕ್ಕೆ ಒಳಗಾಗಿ ಆಹಾರವನ್ನು ಸೇವಿಸಬಾರದು – ಎಂಬುದು ಅಸ್ವಾದ ವ್ರತದ ತತ್ತ್ವ. ನಾಲಗೆ ಎಂಬುದು ರುಚಿಯನ್ನು ಗ್ರಹಿಸುವ ಒಂದು ಇಂದ್ರಿಯ. ಅದು ತನಗೆ ಇಷ್ಟವಾಗುವ ಪದಾರ್ಥ, ಪಾನೀಯಗಳನ್ನೇ ಸೇವಿಸುವಂತೆ ಮನಸ್ಸನ್ನು ಪ್ರಚೋದಿಸುತ್ತದೆ. ಎಷ್ಟೋ ಬಾರಿ ನಾಲಗೆಗೆ 'ಇಷ್ಟ'ವಾದುದು ಶರೀರಕ್ಕೆ 'ಹಿತ'ವಾಗಿರುವುದಿಲ್ಲ. ಈ ಪ್ರಾಥಮಿಕ ಸತ್ಯವನ್ನು ನಾವು ಕಡೆಗಣಿಸುತ್ತೇವೆ; ಹಸಿವಿರಲಿ, ಇಲ್ಲದಿರಲಿ, ಅಗತ್ಯವಿರಲಿ, ಇಲ್ಲದಿರಲಿ, ಕರಿದ ತಿನಿಸುಗಳನ್ನೋ, ಮಸಾಲೆ ತುಂಬಿದ ಪದಾರ್ಥಗಳನ್ನೋ, ಬೇಕರಿಯಿಂದ ತಂದ ತಿಂಡಿಗಳನ್ನೋ ಬಾಯಿಯಲ್ಲಿ

ತುರುಕಿಕೊಳ್ಳುತ್ತಾ, ಟಿ.ವಿ. ನೋಡುತ್ತಲೋ, ಹರಟೆ ಹೊಡೆಯುತ್ತಲೋ ಕಾಲ ಕಳೆಯುತ್ತೇವೆ. ಮಕ್ಕಳಿಗೆ ಪ್ರೀತಿ ತೋರಿಸುವ ನೆಪದಲ್ಲಿ ಅವರಿಗೂ ಅನಾರೋಗ್ಯಕರವಾಗಿರುವ ಸಿಹಿತಿನಿಸುಗಳ ರುಚಿ ಹತ್ತಿಸಿ, ಅವರ ದೇಹ ಮನಸ್ಸುಗಳನ್ನು ಕೆಡಿಸುತ್ತೇವೆ. ರೈಲು, ಬಸ್ಸು, ವಿಮಾನಗಳಲ್ಲಿ ಪ್ರಯಾಣಿಸುವಾಗ, ಹಸಿವಾಗಿಲ್ಲದಿದ್ದರೂ, ಕೇವಲ ನಾಲಗೆಯ ತೃಪ್ತಿಗಾಗಿ ಎಡೆಬಿಡದೇ ಏನೇನನ್ನೋ ತಿನ್ನುತ್ತಲೇ ಇರುವವರನ್ನು ನಾವು ನೋಡುತ್ತಲೇ ಇರುತ್ತೇವೆ. ನಾಲಗೆಯ ಚಾಪಲ್ಯದಿಂದಾಗಿ ನಮ್ಮ ದೇಹದ ಹಾಗೂ ಮನಸ್ಸಿನ ಸ್ವಾಸ್ಥ್ಯ ಕೆಡುತ್ತದೆ ಎಂಬುದರ ಕಡೆಗೆ ಗಮನ ಕೊಡದಿರುವವರೇ ಹೆಚ್ಚು ಮಂದಿ.

ಆದ್ದರಿಂದಲೇ ಗಾಂಧೀಜೀ ಅಸ್ವಾದ ವ್ರತಕ್ಕೆ ಮಹತ್ವ ಕೊಟ್ಟಿದ್ದುದು. ಆರೋಗ್ಯದ ಅಗತ್ಯಕ್ಕೆ ಬೇಕಾಗುವಷ್ಟು ಮಾತ್ರ ಆಹಾರದೊಂದಿಗೆ ಉಪ್ಪು, ಹುಳಿ, ಖಾರ, ಸಿಹಿ – ಮುಂತಾದವುಗಳನ್ನು ಬೆರೆಸಬೇಕು; ನಾಲಗೆಯ ರುಚಿಗಾಗಿ ಅಗತ್ಯ ಪ್ರಮಾಣಕ್ಕಿಂತ ಹೆಚ್ಚು ಈ ವಸ್ತುಗಳನ್ನು ಬೆರೆಸಬಾರದು. ಇದು ಗಾಂಧೀಜೀಯವರು ಅಸ್ವಾದ ವ್ರತಕ್ಕೆ ಹಾಕಿಕೊಟ್ಟ ನಿಯಮಗಳಲ್ಲಿ ಒಂದು. ಇಂದ್ರಿಯಗಳನ್ನು ವಶದಲ್ಲಿರಿಸಿಕೊಳ್ಳುವ 'ವಶ್ಯೇಂದ್ರಿಯ'ರಿಗೆ ಯಾವುದೇ ರೋಗ ರುಜಿನಗಳ ಕಾಟವಿರುವುದಿಲ್ಲ. ಸಂಯಮದಿಂದ ಇರುವವರು ಇಂದ್ರಿಯ ಚಾಪಲ್ಯದಿಂದ ದೂರವಿರುತ್ತಾರೆ. ನಾವು ಸೇವಿಸುವ ಆಹಾರ ನಮ್ಮ ಶರೀರದ ಮೇಲೆ ಮಾತ್ರವಲ್ಲ, ಮನಸ್ಸಿನ ಮೇಲೂ ಪರಿಣಾಮ ಬೀರುತ್ತದೆ. ಆದ್ದರಿಂದಲೇ ಅಸ್ವಾದ ವ್ರತಕ್ಕೂ ಬ್ರಹ್ಮಚರ್ಯಕ್ಕೂ ನಿಕಟ ಸಂಬಂಧವಿದೆ ಎನ್ನುತ್ತಾರೆ ಗಾಂಧೀಜೀ. ಆಹಾರ ವಿಚಾರದಲ್ಲಿ 'ಹಿತ' ಮತ್ತು 'ಮಿತ' ಎಂಬೆರಡು ಗುಣವಾಚಕಗಳು ಅತ್ಯಗತ್ಯವೆಂಬುದನ್ನು ವೈದ್ಯಶಾಸ್ತ್ರವು ಹೇಳುತ್ತದೆ.

ಈ ಸಂದರ್ಭದಲ್ಲಿ ಕವಿ ಪು.ತಿ.ನ. ಹೇಳಿದ ಸಂಗತಿಯೊಂದು ನೆನಪಾಗುತ್ತದೆ. (ಇದನ್ನು ಅವರ ಅಳಿಯ ಡಾ. ರಂಗಾಚಾರ್ ತಮ್ಮ ಪ್ರಬಂಧವೊಂದರಲ್ಲಿ ದಾಖಲಿಸಿದ್ದಾರೆ.) ಬಾಹಟ ಎಂಬ ಭಾರತದ ಪ್ರಾಚೀನ ವೈದ್ಯನೊಬ್ಬ ಒಮ್ಮೆ ಒಂದು ಕೊಳದ ಬಳಿ ಬಂದನಂತೆ. ಅಲ್ಲಿದ್ದ ಒಂದು ಬಾತುಕೋಳಿ ಅವನ ಕಡೆ ನೋಡುತ್ತಾ, ಪ್ರಶ್ನೆ ಕೇಳುವ ರೀತಿಯಲ್ಲಿ –

"ಕೋऽ...ರುಕ್?, ಕೋऽ...ರುಕ್?, ಕೋऽ...ರುಕ್?" ಎಂದು ಮೂರು ಬಾರಿ ಕೂಗಿತಂತೆ. ರೋಗವಿಲ್ಲದವನು ಯಾವನು? ಯಾವನು? ಯಾವನು? – ಎಂದು ಅದು ತನ್ನನ್ನು ಕೇಳುತ್ತಿದೆ ಎಂದು ಭಾವಿಸಿದ ವೈದ್ಯ –

"ಹಿತಭುಂಗ್ಮಿತಭುಕ್ಕೃತಚಂಕ್ರಮಣೋ
ಕ್ರಮೇಣ ವಾಮಶಯಾನೋ ಸ್ತ್ರೀಷು ಜಿತಾತ್ಮಾ ।
ಅರುಧಿತಮೂತ್ರಪುರೀಷೋ
ಸೋऽ...ರುಕ್ ಸೋऽ...ರುಕ್ ಸೋऽ...ರುಕ್ ॥" – ಎಂದನಂತೆ.

ಇದರ ಅರ್ಥ, ಹಿತವಾಗಿ, ಮಿತವಾಗಿ ಉಣ್ಣುವವನು, ಎಡ ಮಗ್ಗುಲಲ್ಲಿ ಮಲಗುವವನು, ದಿನವೂ ಸ್ವಲ್ಪ ದೂರ ನಡೆಯುವವನು, ಹೆಣ್ಣಾಸೆ ಗೆದ್ದವನು, ಮಲ ಮೂತ್ರ ವಿಸರ್ಜನೆಯಲ್ಲಿ ತೊಂದರೆಯಿಲ್ಲದವನು ಯಾರೋ ಅವನೇ ರೋಗವಿಲ್ಲದವನು ಎಂದು.

ಇದು ನಮ್ಮ ಪ್ರಾಚೀನರು ಹಿತ ಮಿತ ಆಹಾರ ಸೇವನೆಗೆ ಎಷ್ಟು ಪ್ರಾಮುಖ್ಯ ಕೊಡುತ್ತಿದ್ದರೆಂಬುದನ್ನು ಸೂಚಿಸುತ್ತದೆ. ನಾವು ಉಣ್ಣುವ ಸಲುವಾಗಿ ಬದುಕುತ್ತೇವೆಂದು ಭಾವಿಸುತ್ತೇವೆ; ಬದುಕುವ ಸಲುವಾಗಿ ಉಣ್ಣುವುದೆಂಬುದನ್ನು ಮರೆಯುತ್ತೇವೆ; ದಿನದ ಬಹುಪಾಲು ಭಾಗ ಆಹಾರಕ್ಕಾಗಿ ದುಡಿಯುವುದರಲ್ಲಿ ಆಹಾರದ ಆಲೋಚನೆಯಲ್ಲಿ ವ್ಯರ್ಥವಾಗುತ್ತದೆ. ನಾಲಗೆಗೆ ನಾವು ಗುಲಾಮರಾಗಿರುವುದರಿಂದ, ದೇಹ ಮನಸ್ಸುಗಳ ಮೇಲೆ ನಮ್ಮ ನಿಯಂತ್ರಣ ತಪ್ಪುತ್ತದೆ. ಉಣ್ಣುವುದೊಂದೇ 'ಪುರುಷಾರ್ಥ'ವೆಂದು ಭಾವಿಸುವವರು ಎಷ್ಟೋ ಮಂದಿ ಇದ್ದಾರೆ. 'ಪುರುಷ' ಎಂದರೆ ತಿನ್ನುವ ಮನುಷ್ಯ ಎಂದರ್ಥವಲ್ಲ. 'ಪುರು' ಎಂದರೆ ದೇಹ. ಈ ದೇಹದಲ್ಲಿರುವಾತನೇ 'ಪುರುಷ' ಅರ್ಥಾತ್ ಭಗವಂತ – ಎನ್ನುತ್ತಾರೆ ಹಿರಿಯರು. ಆದ್ದರಿಂದ ನಾವು ಸೇವಿಸುವ ಆಹಾರ ದೇಹದೊಳಗಿರುವ ಭಗವಂತನಿಗೆ ಅರ್ಪಿಸುವ ನೈವೇದ್ಯವಾಯಿತಲ್ಲವೆ? ಜಿಹ್ವಾಚಾಪಲ್ಯಕ್ಕಾಗಿ ತಯಾರಿಸಿ, ಉಪಯೋಗಿಸುವ ಆಹಾರ ನೈವೇದ್ಯವಾಗುವುದಿಲ್ಲ. ಅದರ ಹಿಂದೆ 'ಅಸ್ವಾದ ವ್ರತ'ದಿಂದ ಲಭಿಸುವ ಪಾವಿತ್ರ್ಯಸ್ಪರ್ಶವಿರುವುದಿಲ್ಲ.

– ಎನ್. ಶ್ರೀನಿವಾಸ ಉಡುಪ

ತೀರ್ಥಹಳ್ಳಿ, ಶಿವಮೊಗ್ಗೆಗಳಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ವೃತ್ತಿ ಮಾಡಿದ ಎನ್. ಶ್ರೀನಿವಾಸ ಉಡುಪ ಕವಿತೆ, ಕಾವ್ಯಾಸ್ವಾದನೆ, ಅನುವಾದ, ಮಕ್ಕಳ ಸಾಹಿತ್ಯ, ಅಂಕಣ ಬರಹ – ಹೀಗೆ ಅನೇಕ ಪ್ರಕಾರಗಳಲ್ಲಿ ಬರವಣಿಗೆ ಮಾಡಿದ್ದಾರೆ. 'ವಿಹಾರಿ' ಹಾಗೂ 'ವೈನತೇಯ' ಎಂಬ ಗುಪ್ತನಾಮಗಳಲ್ಲಿ ಅವರು 'ಮಯೂರ' ಮತ್ತು 'ಸುಧಾ' ಪತ್ರಿಕೆಗಳಿಗೆ ದೀರ್ಘ ಕಾಲ ಅಂಕಣ ಬರಹಗಳನ್ನು ಲೇಖಿಸಿದರು. 'ನಾಲ್ಕು ಸಾಲು', 'ಆಸ್ವಾದ', 'ಮಾರ್ದನಿ', 'ಕುಂಭಕರ್ಣನ ನಿದ್ದೆ', 'ಮುಕ್ತಕ ಮಣಿಮಾಲೆ', 'ಪಾಪು ಪದ್ಯಗಳು' – ಪ್ರಕಟವಾಗಿರುವ ಅವರ ಪುಸ್ತಕಗಳಲ್ಲಿ ಕೆಲವು. ಇಲ್ಲಿರುವ ಅವರ 'ಅಪರಿಗ್ರಹ', 'ಅಸಂಗ್ರಹ', 'ಅಸ್ತೇಯ', 'ಅಸ್ವಾದ' ಲೇಖನಗಳು,ಪ್ರಕಟಣೆಗೆ ಸಿದ್ಧವಾಗುತ್ತಿರುವ 'ವ್ಯವಧಾನ' ಮತ್ತು 'ಅಂತರ್ಯಾನ' ಎಂಬ ಚಿಂತನಬರಹಗಳ ಸಂಗ್ರಹಗಳಿಂದ ಆಯ್ದವು.

ನಾಸ್ತಿಕನೊಬ್ಬನ ತಿಳಿವಿನಲ್ಲಿ ಗಾಂಧಿ

– ಜಿ. ಲವಣಂ

೧೯೪೫–೪೬ ರಲ್ಲಿ ನನ್ನ ತಂದೆ ಗೋರಾ (ಗೋಪರಾಜು ರಾಮಚಂದ್ರ ರಾವ್, ನಾಸ್ತಿಕವಾದದ ಒಬ್ಬ ದಣಿವರಿಯದ ಧರ್ಮಯೋಧ) ಅವರು ಗಾಂಧಿಯವರನ್ನು ನಾಸ್ತಿಕವಾದವನ್ನು ಕುರಿತ ಒಂದು ಸರಣಿ ಚರ್ಚೆಯಲ್ಲಿ ತೊಡಗಿಸಿದರು. ಈ ಸಮಯಕ್ಕೆ ಗಾಂಧೀಜಿ ನಮ್ಮ ಕುಟುಂಬದ ಎಲ್ಲಾ ಸದಸ್ಯರನ್ನೂ ಸೇವಾಗ್ರಾಮದ ತಮ್ಮ ಆಶ್ರಮಕ್ಕೆ ಆಹ್ವಾನಿಸಿದರು. ಮೂರು ತಿಂಗಳ ಕಾಲ ಅವರೊಂದಿಗೆ ಇದ್ದು ಅವರನ್ನು ಸಮೀಪದಿಂದ ಗಮನಿಸುವ ಅವಕಾಶ ನನಗೆ ದೊರೆಯಿತು. ನಂತರ ನಾನು ಗಾಂಧೀಜಿಯವರ ನಿಕಟ ಅನುಯಾಯಿಯಾದ ವಿನೋಬಾ ಭಾವೆಯವರ ಸರ್ವೋದಯ (ಸಕಲರ ಉದ್ಧಾರ) ಚಳುವಳಿಯಲ್ಲಿ ಭಾಗವಹಿಸಿದೆ. ಗಾಂಧೀಜಿಯವರ ಅನುಯಾಯಿಗಳು ಅವರನ್ನು ಹೇಗೆ ಮೆಚ್ಚಿಕೊಳ್ಳುತ್ತಿದ್ದರು ಎಂಬುದನ್ನು ವಿಶ್ಲೇಷಣಾತ್ಮಕವಾಗಿ ಅಧ್ಯಯನ ಮಾಡಲು ನಾನು ಈ ಅವಕಾಶವನ್ನು ಬಳಸಿಕೊಂಡೆ. ರಾಧಾಕೃಷ್ಣಮೂರ್ತಿಯವರೇನಾದರೂ ಇಂದು ಬದುಕಿದ್ದರೆ ಅವರು ಬಹುಮಟ್ಟಿಗೆ ನನ್ನ ಅಭಿಪ್ರಾಯವನ್ನು ಒಪ್ಪುತ್ತಿದ್ದರು. ಏಕೆಂದರೆ ಮೂಲಭೂತವಾಗಿ ನಾವಿಬ್ಬರೂ ನಾಸ್ತಿಕರಾಗಿದ್ದೆವು.

ನಾನು ಆಗಾಗ ವಿಶ್ವದಾದ್ಯಂತ ಪ್ರವಾಸ ಮಾಡುತ್ತಿದ್ದ ಸಂದರ್ಭಗಳಲ್ಲಿ, ಅಲ್ಲಲ್ಲಿ ನಾನು ಗಾಂಧೀಜಿಯವರನ್ನು ಕುರಿತು ಭಾಷಣ ಮಾಡಬೇಕಾಗುತ್ತಿತ್ತು. ೧೯೯೪ರಲ್ಲಿ ನಾನು ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಮಾತನಾಡಿದಾಗ, ಸಭೆಯಲ್ಲಿ ಪಾಲ್ಗೊಂಡವರಲ್ಲೊಬ್ಬರು ಹಲವಾರು ಮುಖ್ಯ ಪ್ರಶ್ನೆಗಳನ್ನೆತ್ತಿದರು. ಅವರ ಕುತೂಹಲವನ್ನು ಬಹುಮಟ್ಟಿಗೆ ತೃಪ್ತಿಪಡಿಸಿದ್ದರ ಬಗ್ಗೆ ನನಗೆ ಸಂತೋಷವಿದೆ. "ನೀವು ಹೇಳಿದ ವಿಚಾರಗಳನ್ನು ಹೊಂದಿರುವ ಪುಸ್ತಕ ಯಾವುದೆಂದು ತಿಳಿಸಿದರೆ ನಾನದನ್ನು ಪಡೆಯಬಯಸುತ್ತೇನೆ" ಎಂಬುದಾಗಿ ಅವರು ಹೇಳಿದರು. ನಾನು ಒಂದು ಪುಸ್ತಕವನ್ನು ಬರೆದಾಗ ಮಾತ್ರ ಅದು ಸಾಧ್ಯವೆಂದೂ, ನಾನಿನ್ನೂ ಅದನ್ನು ಬರೆದಿಲ್ಲವೆಂದೂ ನಾನು ತಿಳಿಸಿದೆ. "ಹಾಗಾದರೆ ನೀವೇಕೆ ಅದನ್ನು ಈಗಲೇ ಬರೆಯಬಾರದು?" ಎಂಬುದಾಗಿ ಅವರು ಕೇಳಿದರು. "ಯಾರಾದರೂ ಕೆಲಕಾಲ ನನ್ನೊಂದಿಗಿದ್ದು ಗಾಂಧೀಜಿಯವರ ಕೃತಿಗಳನ್ನು ಹೊಸದಾಗಿ ಅಧ್ಯಯನ ಮಾಡಲು ಸಹಾಯ ಮಾಡುವುದಕ್ಕೆ ಸಿದ್ಧರಿದ್ದರೆ ಪುಸ್ತಕ ಬರೆಯಲು ಖಂಡಿತ ನನಗೆ ಇಷ್ಟವಿದೆ" ಎಂದು ನಾನು

ಹೇಳಿದೆ. ಮರುದಿನ ಆ ವ್ಯಕ್ತಿ ನನ್ನನ್ನು ಭೇಟಿಮಾಡಿ ಅಗತ್ಯವಿರುವಷ್ಟು ಕಾಲ ಅವರು ನನ್ನೊಂದಿಗಿರಲು ಸಿದ್ಧ ಎಂಬುದನ್ನು ತಿಳಿಸಿದರು. ಅವರೇ ಪ್ರೊ. ಮಾರ್ಕ್ ಲಿಂಡ್ಲೆ. ಆ ಸಮಯಕ್ಕೆ ಅವರು ಹಾರ್ವರ್ಡ್ ವಿಶ್ವವಿದ್ಯಾಲಯದ ಮಾನವತಾ ಅಧ್ಯಯನ ವಿಭಾಗದ ಸಹಾಯಕ ಗುರುವಾಗಿದ್ದರು. ಅವರು ಅಮೆರಿಕಾದ ಮಾನವತಾವಾದಿ ಸಂಘದ ಸದಸ್ಯರಾಗಿದ್ದು ಯೂರೋಪ್ ಮತ್ತು ಏಷ್ಯಾಗಳಲ್ಲಿ ವ್ಯಾಪಕವಾಗಿ ಪ್ರವಾಸ ಮಾಡಿದ್ದರು. ಹಾಗೆಯೇ ಅವರು ಸಂಗೀತದ ಪ್ರಾಧ್ಯಾಪಕರಾಗಿ ಹಾಂಕಾಂಗ್, ಇಂಗ್ಲೆಂಡ್, ಇಟಲಿ ಮತ್ತು ಅಮೆರಿಕಾದ ವಿಶ್ವವಿದ್ಯಾಲಯಗಳಲ್ಲಿ ಸಹ ಕೆಲಸಮಾಡುತ್ತಿದ್ದರು. ಈ ಹಿನ್ನೆಲೆಯಲ್ಲಿ ಅವರು ನನ್ನೊಡನೆ ಸಮಯ ಕಳೆಯುವ ಪ್ರಸ್ತಾಪ ಮಾಡಿದಾಗ ನನಗೆ ಅಪಾರವಾದ ಸಂತೋಷವಾಯಿತು. ಆ ನಂತರದಲ್ಲಿ ಅವರು ಪ್ರತಿವರ್ಷಕ್ಕೆ ನಾಲ್ಕು ತಿಂಗಳಿನಂತೆ ಮೂರುವರ್ಷ ನನ್ನೊಂದಿಗೆ ಭಾರತದಲ್ಲಿ ಇರುತ್ತಿದ್ದರು. ನಾವಿಬ್ಬರೂ ಒಟ್ಟಾಗಿ ಭಾರತ ಸರ್ಕಾರವು ಪ್ರಕಟಿಸಿದ ಗಾಂಧೀಜಿಯವರ ಹೆಚ್ಚೂ ಕಡಿಮೆ ನೂರರಷ್ಟು ಸಂಪುಟಗಳನ್ನು ಅಧ್ಯಯನ ಮಾಡಿದೆವು. ನಾವಿಬ್ಬರೂ ಕೂಡಿ "ನಮಗೆ ತಿಳಿದಂತೆ ಗಾಂಧಿ" ಎಂಬ ಪುಸ್ತಕವನ್ನು ಇಂಗ್ಲಿಷ್‌ನಲ್ಲಿ ಬರೆದೆವು. ಅದು ಅಮೆರಿಕದಲ್ಲಿ, ಯೂರೋಪ್‌ನಲ್ಲಿ ಹಾಗೆಯೇ ಭಾರತದಲ್ಲಿಯೂ ಸಹ ಜನಪ್ರಿಯವಾಯಿತು. ಈ ಹಿನ್ನೆಲೆಯಲ್ಲಿ ನಾನು ಗಾಂಧೀಜಿಯವರನ್ನು ಹೇಗೆ ವಿಶ್ಲೇಷಿಸಬೇಕು ಮತ್ತು ಅರ್ಥಮಾಡಿಕೊಳ್ಳಬೇಕು ಎಂಬ ವಿಚಾರದಲ್ಲಿ ನನ್ನ ಕೆಲವು ಚಿಂತನೆಗಳನ್ನು ಹಂಚಿಕೊಳ್ಳಬಯಸುತ್ತೇನೆ.

ದಕ್ಷಿಣ ಆಫ್ರಿಕಾಕ್ಕೆ ಹೋಗುವವರೆಗೂ ಗಾಂಧೀಜಿ ಒಬ್ಬ ಸಂಕೋಚ ಪ್ರವೃತ್ತಿಯ ವ್ಯಕ್ತಿಯಾಗಿದ್ದರು. ಪ್ರತಿಯೊಬ್ಬರೂ ಅವರನ್ನು ಯಾವ ಪ್ರಾಮುಖ್ಯತೆಯೂ ಇಲ್ಲದ ಒಬ್ಬ ಸಾಧಾರಣ ವ್ಯಕ್ತಿಯೆಂದು ಪರಿಗಣಿಸುತ್ತಿದ್ದರು. ಬರೀ ಮೆಟ್ರಿಕ್ಯುಲೇಷನ್‌ನಲ್ಲಿ ತೇರ್ಗಡೆಯಾಗಿ ಕಾಲೇಜಿನಲ್ಲಿ ಇಂಟರ್ ಮೀಡಿಯೇಟ್‌ಗೆ ಸೇರ್ಪಡೆಯಾದರು. ಗಣಿತಶಾಸ್ತ್ರದಲ್ಲಿ ಸ್ವಲ್ಪ ಹಿಂದಿದ್ದ ಅವರು ಅಧ್ಯಾಪಕರ ಬಗ್ಗೆ ವಸ್ತುಶಃ ಎಷ್ಟೊಂದು ಭೀತರಾಗಿದ್ದರೆಂದರೆ ಅವರು ತಮ್ಮ ವಿದ್ಯಾಭ್ಯಾಸವನ್ನೇ ತೊರೆದರು. ನಂತರ ಇಂಗ್ಲೆಂಡ್‌ಗೆ ತೆರಳಿದರು. ಆ ಕಾಲದಲ್ಲಿ ನಿಯಮಿತವಾಗಿ ತರಗತಿಗಳಿಗೆ ಹಾಜರಾಗಿ ಕಾನೂನಿನ ಬಗೆಗಿನ ಉಪನ್ಯಾಸ ಗಳನ್ನು ಕೇಳಿ ಯಾವುದೇ ರೀತಿಯ ಪರೀಕ್ಷೆಯನ್ನೂ ಬರೆಯದೆ ಪದವಿ ಯನ್ನು ಪಡೆಯುವ ಒಂದು ವ್ಯವಸ್ಥೆ ಇತ್ತು. ಗಾಂಧೀಜಿ ಆ ರೀತಿಯಲ್ಲಿ ಬ್ಯಾರಿಸ್ಟರ್ ಆದರು.

ಬಾಲ್ಯದಿಂದಲೂ ಅವರು ಸತ್ಯದ ಬಗೆಗೆ ಉನ್ನತವಾದ ಆದರವನ್ನೂ ಗೌರವವನ್ನೂ ಹೊಂದಿದ್ದರು. ಅವರು ಭಾರತದಲ್ಲಿ ವಕೀಲವೃತ್ತಿ ಪ್ರಾರಂಭಿಸಿದಾಗ

ಪ್ರತಿಯೊಂದು ಮೊಕದ್ದಮೆಯಲ್ಲಿಯೂ ಅಸತ್ಯದ ಅಂಶಗಳಿರುವುದನ್ನು ಕಂಡು ವಕೀಲ ವೃತ್ತಿಯನ್ನು ತೊರೆದರು. ೧೮೯೩ರಲ್ಲಿ ಅವರು ಸೇಟ್ ಅಬ್ದುಲ್ಲಾರ ವ್ಯವಹಾರಗಳಿಗೆ ಕಾನೂನು ಸಲಹೆಗಾರರಾಗಿ ದಕ್ಷಿಣ ಆಫ್ರಿಕಾಕ್ಕೆ ತೆರಳಿದರು. ಜೊಹಾನ್ಸ್‌ಬರ್ಗ್‌ಗೆ ಪ್ರಯಾಣಿಸುವುದಕ್ಕಾಗಿ ಒಂದು ಪ್ರಥಮದರ್ಜೆ ಟಿಕೆಟ್ ಕೊಂಡು ಗಾಂಧೀಜಿ ದರ್ಬಾನ್‌ನಲ್ಲಿ ರೈಲು ಹತ್ತಿದರು. ಪ್ರಥಮದರ್ಜೆಯಲ್ಲಿ ಬಿಳಿಯ ಪ್ರಯಾಣಿಕರಿದ್ದಾಗ ಇತರೆ ಯಾರಾದರೂ ಪ್ರಥಮ ದರ್ಜೆ ಟಿಕೆಟ್ ಕೊಂಡಿದ್ದರೂ ಸಹ ಆ ದರ್ಜೆಯಲ್ಲಿ ಪ್ರಯಾಣಿಸುವಂತಿಲ್ಲ ಎಂಬುದು ಅಂದಿನ ಅಲ್ಲಿನ ನಿಯಮವಾಗಿತ್ತು. ಆದರೆ, ಗಾಂಧಿ ಪ್ರಥಮದರ್ಜೆ ರೈಲ್ವೇ ಭೋಗಿಯಿಂದ ಹೊರ ಹೋಗಲು ನಿರಾಕರಿಸಿದಾಗ ಅವರನ್ನು ಮುಂದಿನ ನಿಲ್ದಾಣದಲ್ಲಿ ಪ್ಲಾಟ್‌ಫಾರಂನ ಮೇಲೆ ದೂಡಲಾಗಿತ್ತು. ಅವರಿಗೆ ಬಹಳ ನೋವಾಯಿತು ಮತ್ತು ಪ್ರತಿಯೊಬ್ಬರೂ ತಮ್ಮ ಘನತೆ ಮತ್ತು ಆತ್ಮಗೌರವವನ್ನು ಎತ್ತಿಹಿಡಿಯಬೇಕಾದ ಅಗತ್ಯ ಅವರಿಗೆ ಮನವರಿಕೆಯಾಯಿತು. ಅಲ್ಲಿ ಬದುಕುತ್ತಿದ್ದ ಎಲ್ಲಾ ಭಾರತೀಯರಿಗೆ ಸಹಾಯ ಮಾಡುವ ದೃಷ್ಟಿಯಿಂದ ಒಂದು ಸಂಘಟಿತ ಪ್ರಯತ್ನ ನಡೆಸಬೇಕೆಂದು ಅಲ್ಲೇ, ಆ ಕ್ಷಣ ಅವರು ನಿರ್ಧರಿಸಿದರು. ಚಳುವಳಿಯು ಸತ್ಯ ಮತ್ತು ಅಹಿಂಸೆಯ ಆಧಾರದ ಮೇಲೆ ನಡೆಯಬೇಕೆಂದೂ ಸಹ ಅವರು ನಿರ್ಧರಿಸಿದರು. ಪ್ರಪಂಚವು ಹಿಂದೆಂದೂ ಕಂಡಿರದಂತಹ ಚಳುವಳಿ ಅದು.

ಆ ಸಮಯದಲ್ಲಿ ಮೂರು ಬಗೆಯ ವ್ಯಕ್ತಿವಿಶೇಷಗಳು ಗಾಂಧೀಜಿಯವರಲ್ಲಿ ಮೂರ್ತೀಭವಿಸಿದ್ದವು– ಒಂದು, ಸಂಪ್ರದಾಯವಾದ; ಎರಡು, ಭವಿಷ್ಯಕ್ಕಾಗಿ ಕಾರ್ಯಾಚರಣೆ ಮತ್ತು ಮೂರನೆಯದು, ಕ್ರಾಂತಿಕಾರಕತೆ. ಗಾಂಧೀಜಿಯವರ ಈ ಮೂರು ವ್ಯಕ್ತಿಗತ ಗುಣಗಳ ಕಡೆಯಿಂದ ಅವರನ್ನು ಅರ್ಥಮಾಡಿ ಕೊಳ್ಳುವುದಕ್ಕಾಗಿ ಮತ್ತೊಂದು ಕೋನದಿಂದಲೂ ಸಹ ನೋಡುವುದು ಅಗತ್ಯವಾಗಿತ್ತು. ಅವರೊಳಗೆ ಸ್ಪಷ್ಟವಾಗಿ ಎರಡು ವಿಭಿನ್ನ ಲೋಕದೃಷ್ಟಿಗಳು ಅಂತರ್ಗತವಾಗಿದ್ದವು– ಒಬ್ಬ ವ್ಯಕ್ತಿಯಾಗಿ ಮತ್ತು ಒಬ್ಬ ಸಮಾಜಜೀವಿಯಾಗಿ. ನಮ್ಮಲ್ಲಿ ಭಿನ್ನಾಭಿಪ್ರಾಯ ಮೂಡಿಸುವ ವಿಚಾರಗಳು ಒಬ್ಬ ವ್ಯಕ್ತಿಯಾಗಿ ಗಾಂಧೀಜಿಗೆ ಸಂಬಂಧಿಸಿದಂತಹವು. ಸತ್ಯ ಮತ್ತು ಅಹಿಂಸೆಯನ್ನು ಅಸ್ತ್ರವಾಗಿ ಬಳಸಿ ಅವರು ನಡೆಸಿದ ಚಳುವಳಿಗಳು ಒಬ್ಬ ಸಮಾಜಜೀವಿಯಾದ ಗಾಂಧೀಜಿಗೆ ಸಂಬಂಧಿಸಿದವು. ತಮ್ಮ ವ್ಯಕ್ತಿಗತ ನಂಬಿಕೆಗಳನ್ನು ತಮ್ಮ ಸಾಮಾಜಿಕ ಚಟುವಟಿಕೆಗಳ ಒಳಗೆ ತರಲು ಪ್ರಯತ್ನಿಸಿದ್ದರಿಂದ ಅವರೊಬ್ಬ ವಿವಾದಾತ್ಮಕ ವ್ಯಕ್ತಿಯಾದರು. ಆದರೆ ಯಾರಾದರೂ ಅವರ ವ್ಯಕ್ತಿಗತ ನಂಬಿಕೆಗಳನ್ನು ಸಾಮಾಜಿಕ ಚಟುವಟಿಕೆಗಳ ಒಳಕ್ಕೆ ತರುವುದನ್ನು ಪ್ರಶ್ನಿಸಿದರೆ ಬದಲಾಗುವುದಕ್ಕೆ ಅವರು ಹಿಂದುಮುಂದು ನೋಡುತ್ತಿರಲಿಲ್ಲ.

ಗೋರಾ ಅವರು ಆಶ್ರಮದಲ್ಲಿ ತಂಗಿದ್ದಾಗ ನಾಸ್ತಿಕತೆಯ ಬಗ್ಗೆ ಗಾಂಧೀಜಿಯುವರು ಅವರ ಜೊತೆ ಹಲವಾರು ಸಲ ಚರ್ಚಿಸಿದ್ದರು. ಈ ಚರ್ಚೆಗಳ ಸಂದರ್ಭದಲ್ಲಿ "ನೀವು ಸತ್ಯವೇ ದೇವರು ಅಥವಾ ದೇವರೇ ಸತ್ಯ ಎಂಬುದಾಗಿ ಹೇಳುವಾಗ ದೇವರಿಲ್ಲದೆ ಸತ್ಯವಿಲ್ಲ ಎಂಬುದನ್ನು ನೀವು ಒಪ್ಪಿಕೊಳ್ಳಬೇಕು" ಎಂದು ಅವರು ಪ್ರತಿಪಾದಿಸುತ್ತಿದ್ದರು. "ಸತ್ಯದಲ್ಲಿ ನಂಬಿಕೆ ಇರುವ, ಆದರೆ ದೇವರನ್ನು ನಂಬದ ಜನರಿದ್ದಾರೆ; ಅವರ ಜೊತೆ ನೀವು ಹೇಗೆ ಸಮನ್ವಯ ಸಾಧಿಸುತ್ತೀರಿ?" ಎಂದು ಅವರನ್ನು ಪ್ರಶ್ನಿಸಲಾಯಿತು. ಒಂದು ಕ್ಷಣ ಆಲೋಚಿಸಿ ಅವರು ಹೇಳಿದರು, "ಸತ್ಯವೆಂಬುದು ದೇವರ ನಂಬಿಕೆಗಿಂತ ಭಿನ್ನವಾದುದು. ದೇವರ ನಂಬಿಕೆ ವ್ಯಕ್ತಿಗತವಾದುದು. ಆದರೆ ಸತ್ಯವೆಂಬುದು ಸಾಮಾಜಿಕ ಸಂಗತಿ". ನಿರೀಶ್ವರ ವಾದವೂ ಕೂಡ ಸತ್ಯದ ಹುಡುಕಾಟದ ಒಂದು ವಿಧಾನವಾಗಿರುವುದು ಸಾಧ್ಯ ಎಂಬುದನ್ನು ಅವರು ಒಪ್ಪಿಕೊಂಡರು. ೧೯೪೪ರಲ್ಲಿ ಅವರು ಇದನ್ನು ಒಪ್ಪಿಕೊಂಡಾಗ ಅವರ ದೃಷ್ಟಿಕೋನದಲ್ಲಿ ಒಂದು ಸ್ಪಷ್ಟ ಬದಲಾವಣೆ ವ್ಯಕ್ತವಾಯಿತು. ಗೋರಾ ಅವರು ಬರೆದ 'ಗಾಂಧೀಜಿಯ ಜೊತೆಗೊಬ್ಬ ನಾಸ್ತಿಕವಾದಿ' ಎಂಬ ಪುಸ್ತಕದಲ್ಲಿ ಈ ವಿವರಗಳಿವೆ. ಗಾಂಧೀಜಿಯವರ ಎಲ್ಲಾ ಕೃತಿಗಳ ಪ್ರಕಾಶಕರಾದ ನವಜೀವನ ಟ್ರಸ್ಟ್‌ನವರು ಈ ಪುಸ್ತಕವನ್ನು ೧೯೫೧ರಲ್ಲಿ ಪ್ರಕಟಿಸಿದ್ದಾರೆ. ಮೂಲದಲ್ಲಿ ಈ ಕೃತಿಯು ಇಂಗ್ಲಿಷ್ ಭಾಷೆಯಲ್ಲಿದೆ. ನಂತರದಲ್ಲಿ ಅವರು ಹಿಂದೀ, ಮರಾಠೀ ಮತ್ತು ಗುಜರಾತಿ ಆವೃತ್ತಿಗಳನ್ನು ಸಹ ಪ್ರಕಟಿಸಿದ್ದಾರೆ. ಗಾಂಧೀ ಸಾಹಿತ್ಯದಲ್ಲಿ ಈ ಪುಸ್ತಕಕ್ಕೆ ಅಪಾರವಾದ ಬೆಲೆಯಿದೆ. ಅವರು ಸತ್ಯವು ದೇವರಿಗಿಂತ ದೊಡ್ಡದು. ದೇವರು ವೈಯಕ್ತಿಕ ನಂಬಿಕೆಯಾದರೆ, ಸತ್ಯವೆಂಬುದು ಒಂದು ಸಾಮಾಜಿಕ ಅಗತ್ಯ ಎಂಬುದಾಗಿ ನಂಬಿದ್ದರಿಂದ ಅವರೊಳಗಿನ ಕ್ರಾಂತಿಕಾರೀ ಅಂಶ ಬಲಗೊಂಡಿತು. ಈ ಹಿನ್ನೆಲೆಯಲ್ಲಿ ನಾವು ಗಾಂಧೀಜಿಯವರನ್ನು ನೋಡಿದಾಗ ಅವರಲ್ಲಿ ಕುರುಡು ನಂಬಿಕೆಗಳಿರಲಿಲ್ಲ ಮತ್ತು ತಾರ್ಕಿಕವಲ್ಲದ ಯಾವುದನ್ನೂ ಅವರು ಒಪ್ಪುತ್ತಿರಲಿಲ್ಲ ಎಂಬುದನ್ನು ನಾವು ಮನಗಾಣಬಹುದು. ಸ್ವತಃ ಅವರೇ ಇದನ್ನು ಹೇಳಿದ್ದಾರೆ. ಕೆಲವು ವಿಚಾರಗಳ ಬಗ್ಗೆ ಅವರ ಪ್ರಾರಂಭದ ಅಭಿಪ್ರಾಯಗಳು ಹೇಗಿದ್ದವು ಮತ್ತು ನಂತರದಲ್ಲಿ ಅವು ಹೇಗೆ ಮತ್ತು ಎಷ್ಟರಮಟ್ಟಿಗೆ ಬದಲಾದವು ಎಂಬುದನ್ನು ತೋರಿಸುವುದಕ್ಕಾಗಿ ನಾನು ಅವರ ಕೆಲವು ಹೇಳಿಕೆಗಳನ್ನು ಮತ್ತು ಉಲ್ಲೇಖಗಳನ್ನು ಅವರ ಬರಹಗಳಿಂದ ಆಯ್ದು ನನ್ನ ಪುಸ್ತಕದಲ್ಲಿ ನೀಡಿದ್ದೇನೆ. ಕಾಲಾನುಕ್ರಮದಲ್ಲಿ ಹಲವಾರು ವಿಚಾರಗಳ ಬಗ್ಗೆ ಅವರು ತಮ್ಮ ಅಭಿಪ್ರಾಯಗಳನ್ನು ಅಮೂಲಾಗ್ರ ಬದಲಾಯಿಸಿಕೊಂಡರು. ಯಾವಾಗಲೂ ಬದಲಾಗಲು ಸಿದ್ಧರಾಗಿದ್ದ ವ್ಯಕ್ತಿ ಗಾಂಧೀಜಿ. ಅವರು

ತತ್ವಾಂಧರಾಗಿರಲಿಲ್ಲ. ಅವರನ್ನು ಮಹಾತ್ಮರನ್ನಾಗಿಸಿದ್ದು ಇದೇನೇ.

ಮತ್ತೂ ಒಂದು ವಿಚಾರವಿದೆ. ಪ್ರಾರಂಭದಿಂದಲೂ ಗಾಂಧೀಜಿಯವರು ತಾವು ಎದುರಿಸಿದ ಪ್ರತಿಯೊಂದು ಸಮಸ್ಯೆಯನ್ನು ಅದು ಪ್ರತಿಯೊಬ್ಬರ ಸಮಸ್ಯೆ ಎಂಬಂತೆ ಪರಿಗಣಿಸುತ್ತಿದ್ದರು. ಆ ಕಾಲದ ದಕ್ಷಿಣ ಆಫ್ರಿಕಾದ ರೈಲ್ವೇ ನಿಯಮದ ಪ್ರಕಾರ ಪ್ರಥಮದರ್ಜೆ ಡಬ್ಬಿಯಲ್ಲಿ ಬಿಳಿಯ ಪ್ರಯಾಣಿಕರಿದ್ದರೆ ಇತರರು ತಮ್ಮ ಬಳಿ ಪ್ರಥಮದರ್ಜೆ ಟಿಕೆಟ್ ಇದ್ದರೂ ಸಹ ಕೆಳಕ್ಕೆ ಇಳಿದುಬಿಡಬೇಕಾಗಿತ್ತು. ಅದು ಬಿಳಿಯರಲ್ಲದ ಪ್ರತಿಯೊಬ್ಬರಿಗೂ ಅವಮಾನ ಎಂಬುದಾಗಿ ಗಾಂಧೀಜಿ ಭಾವಿಸಿದರು. ತಮ್ಮ ಹಾಗೇ ಇತರರ ಆತ್ಮ ಗೌರವವನ್ನು ಎತ್ತಿ ಹಿಡಿಯಲು ಗಾಂಧೀಜಿ ಹೋರಾಟ ಪ್ರಾರಂಭಿಸಿದರು. ಹಾಗೆಯೇ ಸಾಮ್ರಾಜ್ಯಶಾಹಿ ಆಳ್ವಿಕೆಯಿಂದ ಸ್ವಾತಂತ್ರ್ಯ ಪಡೆಯಲು ಹೋರಾಟ ನಡೆಸಲು ಬಯಸಿದಾಗ ಸಾಮ್ರಾಜ್ಯಶಾಹಿ ಆಳ್ವಿಕೆಗೊಳಪಟ್ಟಿದ್ದ ಪ್ರತಿಯೊಂದು ದೇಶಕ್ಕೂ ಸ್ವಾತಂತ್ರ್ಯ ದೊರೆಯಬೇಕೆಂದು ಅವರು ಬಯಸಿದರು. ಆದ್ದರಿಂದಲೇ ಅವರಿಗೆ ಅಮೆರಿಕಾದ ಮಾರ್ಟಿನ್ ಲೂಥರ್ ಕಿಂಗ್‌ರನ್ನು ಪ್ರಭಾವಿಸಲು ಸಾಧ್ಯವಾಯಿತು. ಹಾಗೆಯೇ ಆಫ್ರಿಕಾದಲ್ಲಿ ನೆಲ್ಸನ್ ಮಂಡೇಲಾ ಮತ್ತು ಇತರ ದೇಶಗಳ(ಐರ್ಲೆಂಡ್) ಇತರ ನಾಯಕರೂ ಸಹ ಗಾಂಧೀಜಿಯ ಪ್ರಭಾವಕ್ಕೆ ಒಳಗಾದರು. ಅಲ್ಲಿಯವರೆಗೆ ಬರೀ ಸಿದ್ಧಾಂತವಾಗಿದ್ದ ಅಹಿಂಸೆಯ ಕಲ್ಪನೆಯನ್ನು ಗಾಂಧೀಜಿ ಒಂದು ಅಸ್ತ್ರವನ್ನಾಗಿ ಪರಿವರ್ತಿಸಿ ಕ್ರಾಂತಿಕಾರಕ ಬದಲಾವಣೆಗಳನ್ನು ತಂದರು. ಹಿಂಸೆಗೆ ಪ್ರತಿಯಾಗಿ ಹಿಂಸೆಯನ್ನು ಬಳಸುವುದು ಸುಲಭ. ಆದರೆ ಅಹಿಂಸೆಯ ವಿರುದ್ಧ ಹಿಂಸೆಯನ್ನು ಬಳಸುವುದು ಸುಲಭವಲ್ಲ. ತಾನು ಒಬ್ಬ ಶಾಂತಿಯುತ ಅಹಿಂಸಾತ್ಮಕ ವ್ಯಕ್ತಿಯನ್ನು ಥಳಿಸುತ್ತಿದ್ದೇನೆ ಎಂಬ ಸಂಗತಿಯು ಆಕ್ರಮಣಕಾರನ ಹೃದಯದ ಮೂಲೆಯಲ್ಲೆಲ್ಲೋ ಆತನನ್ನು ಕಾಡುತ್ತದೆ. ಪ್ರಪಂಚದಾದ್ಯಂತ ಜನರು ಈ ದಿಸೆಯಲ್ಲಿ ಯೋಚಿಸುವಂತೆ ಮಾಡಿದ್ದೇ ಗಾಂಧೀಜಿಯವರ ಸಾಧನೆ.

ಗಾಂಧೀಜಿ ಶೋಷಣೆಗೆ, ಅಸಮಾನತೆಗೆ ವಿರುದ್ಧವಾಗಿದ್ದರು. ಅವೆರಡನ್ನೂ ಅವರು ಹಿಂಸೆಯೆಂದು ಪರಿಗಣಿಸುತ್ತಿದ್ದರು. ಸಾಮಾನ್ಯ ಮನುಷ್ಯ ಅಹಿಂಸೆಯನ್ನು ಆಚರಿಸುವ ವಿಚಾರದಲ್ಲಿ ಆಸಕ್ತಿ ತೋರಲಾರ ಎಂಬುದು ಅವರಿಗೆ ತಿಳಿದಿತ್ತು. ಅವರನ್ನು ಉತ್ತೇಜಿಸಲು 'ಅಹಿಂಸೆಯೆಂಬುದು ಹಿಂಸೆಗಿಂತಲೂ ದೊಡ್ಡದು; ಆದರೆ ಪುಕ್ಕಲುತನಕ್ಕಿಂತಲೂ ಹಿಂಸೆ ಉತ್ತಮ' ಎಂಬುದಾಗಿ ಅವರು ಹೇಳುತ್ತಿದ್ದರು. ಶೋಷಣೆ ಮತ್ತು ಅಸಮಾನತೆಯ ವಿರುದ್ಧ ಬಂಡೇಳುವುದಕ್ಕೆ ಅವರು ನೀಡುತ್ತಿದ್ದ ಪ್ರಾಮುಖ್ಯತೆಯು ಇದರಿಂದ ತಿಳಿದುಬರುತ್ತದೆ. ತನ್ನನ್ನು ಯಾರಾದರೂ ಅತಿಕ್ರಮಿಸಲು ಪ್ರಯತ್ನಿಸಿದರೆ ಆಗ ತನ್ನನ್ನು ತಾನು ಹೇಗೆ ರಕ್ಷಿಸಿಕೊಳ್ಳಬೇಕು ಎಂಬುದಾಗಿ ಮಹಿಳೆಯೊಬ್ಬಳು ಅವರನ್ನು ಕೇಳಿದಳು. "ದೇವರು

ನಿನಗೆ ಹಲ್ಲು ಮತ್ತು ಉಗುರುಗಳನ್ನು ನೀಡಿದ್ದಾನೆ" ಎಂಬುದಾಗಿ ಗಾಂಧಿ ಉತ್ತರಿಸಿದರು. ಅಂದರೆ, ದಾಳಿಕೋರನನ್ನು ಹಲ್ಲಿನಿಂದ ಕಚ್ಚಿ, ತನ್ನ ಶಕ್ತಿಯನ್ನೆಲ್ಲಾ ಬಳಸಿ, ಉಗುರಿನಿಂದ ಪರಚಿ ತನ್ನನ್ನು ತಾನು ರಕ್ಷಿಸಿಕೊಳ್ಳಬೇಕೆಂದು ಆಕೆಗೆ ಅವರು ಸೂಚಿಸಿದರು. ಅದನ್ನು ಅವರು ಹಿಂಸೆ ಎಂದು ಪರಿಗಣಿಸಲಿಲ್ಲ. ಅನಿವಾರ್ಯವಾದ ಹಿಂಸೆಯು ಅಹಿಂಸೆಯ ಪ್ರಥಮ ಹೆಜ್ಜೆ ಎಂಬುದಾಗಿ ಅವರು ಹೇಳಿದರು.

ಒಮ್ಮೆ ಒರಿಸ್ಸಾದಲ್ಲಿ ಬೆಳೆ ಬೆಳೆದುನಿಂತಿದ್ದ ಜಮೀನಿಗೆ ಗುಂಪು ಗುಂಪಾಗಿ ಲಕ್ಷಾಂತರ ಮಂಗಗಳು ದಾಳಿಯಿಟ್ಟು ಬೆಳೆಯನ್ನು ನಾಶ ಮಾಡಿದವು. ಆಗ ರೈತನೊಬ್ಬ ಹಿಂಸೆಯಿಲ್ಲದೆ ತನ್ನ ಬೆಳೆಯನ್ನು ರಕ್ಷಿಸಿಕೊಳ್ಳುವುದು ಹೇಗೆ ಸಾಧ್ಯ ಎಂದು ಗಾಂಧೀಜಿಯವರನ್ನು ಕೇಳಿದ. ಮಂಗಗಳನ್ನು ಪವಿತ್ರವೆಂದು ಭಾವಿಸು ವುದರಿಂದ ಅವುಗಳ ವಿರುದ್ಧ ಹಿಂಸೆಯನ್ನು ಬಳಸಲು ಅವನಿಗೆ ಇಚ್ಛೆ ಇರಲಿಲ್ಲ. ಆಗ ಆತನಿಗೆ ತನ್ನ ಬೆಳೆಯನ್ನು ರಕ್ಷಿಸಿಕೊಳ್ಳುವ ಹಕ್ಕಿದೆ ಎಂದು ಗಾಂಧೀಜಿ ಹೇಳಿದರು. "ಮಂಗಗಳನ್ನು ಓಡಿಸುವುದು ಸಾಧ್ಯವಾಗದಿದ್ದಲ್ಲಿ, ಅವುಗಳನ್ನು ನೀನು ಕೊಲ್ಲಬಹುದು" ಎಂಬುದಾಗಿ ಗಾಂಧೀಜಿ ರೈತನಿಗೆ ಹೇಳಿದರು. ಅಹಿಂಸೆಯ ಆಚರಣೆಯಲ್ಲಿ ಮೂರು ಹಂತಗಳನ್ನು ಗಾಂಧೀಜಿ ಗುರುತಿಸುತ್ತಿದ್ದರು. ಸಾರ್ವತ್ರಿಕ ಒಪ್ಪಿಗೆ, ನಿಷ್ಕ್ರಿಯ (ಶಿಭುತಿಜ) ಪ್ರತಿರೋಧ ಮತ್ತು ಸೃಜನಾತ್ಮಕ ನೀತಿ. ಈ ಹಂತಗಳನ್ನು ನಾವು ಅನುಸರಿಸಿದರೆ ಸಮಾನತೆ ಮತ್ತು ಸತ್ಯಗಳು ನಮ್ಮ ಸಮಾಜದಲ್ಲಿ ಖಂಡಿತವಾಗಿಯೂ ಸ್ಥಾಪನೆಗೊಳ್ಳುತ್ತವೆ ಎಂಬುದಾಗಿ ಅವರು ಹೇಳುತ್ತಿದ್ದರು. ದಕ್ಷಿಣ ಆಫ್ರಿಕಾದಲ್ಲಿದ್ದಾಗ ಯಾವುದೇ ಧರ್ಮ, ಭಾಷೆ, ಪ್ರಾಂತ್ಯಗಳ ಹಂಗಿಲ್ಲದೆ ಅವರು ಎಲ್ಲ ಭಾರತೀಯರನ್ನೂ ಒಗ್ಗೂಡಿಸಿದರು. ಆ ಮಟ್ಟಿಗೆ ಅದೊಂದು ಜಾತ್ಯತೀತ ಪ್ರಯತ್ನವಾಗಿತ್ತು. ಅದೇ ರೀತಿಯಲ್ಲಿ ಅವರು ಸ್ವಾತಂತ್ರ್ಯದ ಹೋಗಾಟದಲ್ಲಿ ಪ್ರತಿಯೊಬ್ಬ ಭಾರತೀಯನೂ ಪಾಲ್ಗೊಳ್ಳಬೇಕಾದ ಅಗತ್ಯವಿದೆ ಎಂದು ಭಾವಿಸಿದರು- ಟಾಟಾ ಬಿರ್ಲಾರಿಂದ ಹಿಡಿದು ಒಬ್ಬ ಬಡವನವರೆಗೆ. ಮತೀಯ ಐಕ್ಯತೆ ಮತ್ತು ಅಸ್ಪೃಶ್ಯತೆಯ ನಿವಾರಣೆಗಳು ಎಷ್ಟೇ ಮುಖ್ಯವಾಗಿದ್ದರೂ ಅವನ್ನು ಸ್ವಾತಂತ್ರ್ಯ ಚಳುವಳಿಯ ಒಂದು ಅವಿಭಾಜ್ಯ ಅಂಗವನ್ನಾಗಿ ಮಾಡುವಂತೆ ಒತ್ತಾಯಿಸುವುದು ಅವರಿಗೆ ಸಾಧ್ಯವಾಗಲಿಲ್ಲ. ಆದರೆ ಅವನ್ನು ಅವರು ಮರೆಯಲಿಲ್ಲ. ಸ್ವಾತಂತ್ರ್ಯ ದೊರೆತ ಕೂಡಲೇ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಸಾಧಿಸುವುದು ಅಗತ್ಯವೆಂಬುದಾಗಿ ಅವರು ಹೇಳುತ್ತಿದ್ದರು.

ಭಾರತದ ಜನಸಂಖ್ಯೆಯಲ್ಲಿ ಹಿಂದೂಗಳು ಶೇಕಡಾ ೮೦ರಷ್ಟಿದ್ದಾರೆ. ಅವರನ್ನು ತಮ್ಮ ಆಲೋಚನಾ ರೀತಿಯ ಕಡೆಗೆ ಸೆಳೆಯುವುದು ಅಗತ್ಯವಾಗಿತ್ತು.

ಅವರಿಗಿಂತಲೂ ಮೊದಲೇ ತಿಲಕರು, ಹಿಂದೂಗಳು ತಮ್ಮ ನಾಯಕತ್ವವನ್ನು ಅನುಸರಿಸುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದರು. ಅದೇ ತಂತ್ರವನ್ನು ಅನುಸರಿಸಲು ಗಾಂಧೀಜಿ ನಿರ್ಧರಿಸಿದರು. ಗಣೇಶನ ಆರಾಧನೆಯ ಸಂದರ್ಭದಲ್ಲಿ ತಿಲಕರು ಧರ್ಮವನ್ನು ರಾಜಕೀಯಗೊಳಿಸಿದರು. ಭಾರತಕ್ಕೆ ಬರುವ ಮೊದಲು ಗಾಂಧೀಜಿಯವರು ದಕ್ಷಿಣ ಆಫ್ರಿಕಾದಲ್ಲಿ ಜಾತಿ ಮತ್ತು ಸಮುದಾಯದ ಪರಿಗಣನೆಯಿಲ್ಲದೆ ಭಾರತೀಯರನ್ನೆಲ್ಲಾ ಒಂದುಗೂಡಿಸುವ ಆಲೋಚನೆ ಮಾಡಬೇಕಾಯಿತು. ಭಾರತಕ್ಕೆ ಬಂದ ನಂತರ ಅವರು ಇಡೀ ದೇಶವನ್ನೇ ಮುನ್ನಡೆಸಬೇಕಾಯಿತು. ಭಾರತದಲ್ಲಿ ಬಹುಸಂಖ್ಯಾತ ಜನ ಹಿಂದೂಗಳೇ ಆಗಿದ್ದರು. ತಾವು ರಾಮರಾಜ್ಯವನ್ನು ಸ್ಥಾಪಿಸಬಯಸುವುದಾಗಿ ಹೇಳುತ್ತಾ ಗಾಂಧೀಜಿ ರಾಜ ರಾಮನ ಹೆಸರನ್ನು ಬಳಸಿದರು. ಆದರೆ ಅವರು ತಾವು ಅಯೋಧ್ಯಾ ರಾಮನ ಅಥವಾ ದಶರಥನ ಮಗ್ನನ ಆಳ್ವಿಕೆಯ ಬಗ್ಗೆ ಹೇಳುತ್ತಿಲ್ಲ. ಒಬ್ಬ ಆದರ್ಶ ಆಡಳಿತಗಾರನ ಬಗ್ಗೆ ಮಾತನಾಡುತ್ತಿರುವುದಾಗಿ ಹೇಳಲು ಮರೆಯುತ್ತಿರಲಿಲ್ಲ. ಜಾತ್ಯತೀತ ವಿಚಾರಗಳನ್ನು ಸಾಂಪ್ರದಾಯಿಕ ಭಾಷೆಯಲ್ಲಿ ಅವರು ಸಮಾಜದ ಎದುರು ಇಡಬೇಕಾಗಿತ್ತು. ಹಳೆಯ ಭಾಷೆ ಜನರನ್ನು ಆಕರ್ಷಿಸಿತು. ಆದರೆ ಹಳೆಯ ಪದಗಳಿಗೆ ಗಾಂಧೀಜಿಯವರು ನೀಡಿದ ಹೊಸ ವಿವರಣೆಗಳನ್ನು ಅರ್ಥಮಾಡಿಕೊಳ್ಳುವುದು ಜನರಿಗೆ ಸಾಧ್ಯವಾಗಲಿಲ್ಲ.

ಮಾರ್ಕ್ಸ್‌ಗಾಗಲೀ ಅಥವಾ ಎಂ.ಎನ್.ರಾಯ್ ಅವರಿಗಾಗಲೀ ತಮ್ಮ ಜೀವಿತಾವಧಿಯಲ್ಲಿ ಜನರನ್ನು ಮುನ್ನಡೆಸಬೇಕಾದ ಅಗತ್ಯವಿರಲಿಲ್ಲ. ತಮ್ಮ ಸಿದ್ಧಾಂತಗಳ ಬಗೆಗೆ ತಮಗೆ ಅನಿಸಿದ್ದನ್ನು ಜನರಿಗೆ ವಿವರಿಸಿ ಪ್ರಸಾರಮಾಡಲು ಅವರು ಸ್ವತಂತ್ರರಿದ್ದರು. ನೀವು ಆ ದೃಷ್ಟಿಕೋನದ ವಿಚಾರದಲ್ಲಿ ಜನರನ್ನು ಸಂಘಟಿಸಿ ಸಮನ್ವಯ ಸಾಧಿಸಬೇಕಾದರೆ ತುಸುಮಟ್ಟಿಗೆ ಅವರ ನಂಬಿಕೆಗಳ ಜೊತೆ ರಾಜಿಮಾಡಿಕೊಳ್ಳುವುದು ಅಗತ್ಯವಾಗುತ್ತದೆ. ಮಾರ್ಕ್ಸ್‌ನ ತತ್ವದ ವಿಚಾರದಲ್ಲಿ ಲೆನಿನ್ ಇಂತಹ ಬದಲಾವಣೆಯನ್ನು ಮಾಡಿಕೊಂಡರು. ಸೋವಿಯತ್ ಒಕ್ಕೂಟವನ್ನು ಒಗ್ಗೂಡಿಸುವುದಕ್ಕಾಗಿ ಸ್ಟಾಲಿನ್ ಇನ್ನೂ ಹೆಚ್ಚಿನ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಯಿತು. ಮಾವೋ ಸಹ ಮಾರ್ಕ್ಸ್‌ನ ಸಿದ್ಧಾಂತವನ್ನು ಅಳವಡಿಸಿಕೊಂಡರು. ಆದರೆ ಅವರು ರೈತರ ಜೊತೆ ಕೃಷಿ ಕೂಲಿಕಾರರ ಜೊತೆ ಕೆಲಸ ಮಾಡಬೇಕಾಗಿತ್ತು. ಅವರನ್ನು ಸಮನ್ವಯಗೊಳಿಸುವುದಕ್ಕಾಗಿ ಮಾವೋ ಕೆಲವು ವಿನಾಯಿತಿಗಳನ್ನು ನೀಡಬೇಕಾಯಿತು. ತಮ್ಮ ವೈಯಕ್ತಿಕ ದೃಷ್ಟಿಕೋನಗಳನ್ನು ಜನಪ್ರಿಯ, ಪ್ರಾಯೋಗಿಕ ಚಳುವಳಿಗಳನ್ನಾಗಿ ಪರಿವರ್ತಿಸಬೇಕಾದ ಸಂದರ್ಭಗಳಲ್ಲಿ ಜನರಿಗೆ ಮನವಿ ಮಾಡಿಕೊಳ್ಳಬೇಕಾದಾಗ ಗಾಂಧೀಜಿ ಸಹ ಹಲವಾರು ಹೊಂದಾಣಿಕೆಗಳನ್ನು ಮಾಡಿಕೊಂಡರು. ಆದರೆ ಸ್ವಾತಂತ್ರ್ಯವು

ದೇಶ ವಿಭಜನೆಯ ನಂತರ ಮಾತ್ರ ಬರಲು ಸಾಧ್ಯವೆಂಬುದು ಸ್ಪಷ್ಟವಾದಾಗ ಅವರು ರಾಜಿಯನ್ನು ನಿರಾಕರಿಸಿ ವಿಭಜನೆಯ ವಿರುದ್ಧವಾದ ತಮ್ಮ ಮೂಲ ಅಭಿಪ್ರಾಯಕ್ಕೆ ಅಂಟಿಕೊಂಡರು. ಅವರು ಮತ್ತಷ್ಟು ದಿನ ಬದುಕಿದ್ದರೆ ಈ ಅಂಶವು ಸ್ಪಷ್ಟವಾಗುತ್ತಿತ್ತು.

ಆಶ್ರಮದಲ್ಲಿ ಗಾಂಧೀಜಿಯವರಿಗೆ ಹತ್ತಿರವಾಗಿ ಬದುಕಿದವರಿಗೂ ಸಹ ಅವರ ದೂರದೃಷ್ಟಿ ಅರ್ಥವಾಗದೇ ಮರಣಾನಂತರ ಅವರ ದೃಷ್ಟಿಕೋನವನ್ನು ಎತ್ತಿಹಿಡಿಯುವಲ್ಲಿ ಸೋತರು ಎನಿಸುತ್ತದೆ. ೧೯೪೭ರ ಏಪ್ರಿಲ್ ೨೦ರ ಹರಿಜನ ಪತ್ರಿಕೆಯಲ್ಲಿ ಗಾಂಧಿ, "ನೀವು ನನ್ನನ್ನು ಕೊಂದರೂ ನಾನು ರಾಮರಹೀಮರನ್ನು ಒಂದೇ ಉಸಿರಿನಲ್ಲಿ ಪ್ರಸ್ತಾಪಿಸುವುದನ್ನು ನಿಲ್ಲಿಸುವುದಿಲ್ಲ. ನನ್ನ ದೃಷ್ಟಿಯಲ್ಲಿ ಆ ಎರಡು ಹೆಸರುಗಳು ಒಬ್ಬನೇ ದೇವರನ್ನು ಸೂಚಿಸುತ್ತವೆ. ಆ ಹೆಸರುಗಳನ್ನು ಪುನರುಚ್ಚರಿಸುತ್ತಾ ನಾನು ಸಂತೋಷದಿಂದ ಮರಣಹೊಂದಬಲ್ಲೆ" ಎಂಬುದಾಗಿ ಬರೆದರು. ೧೯೪೮ರ ಜನವರಿಯಲ್ಲಿ ಯಾವ ಕ್ಷಣದಲ್ಲಿ ಬೇಕಾದರೂ ಅವರು ಸಾಯಬಹುದೆಂಬುದು ಸ್ಪಷ್ಟವಾಗಿತ್ತು. ೧೯೪೮ರ ಜನವರಿ ೩೦ರಂದು ಅವರ ಮೇಲೆ ಗುಂಡು ಹಾರಿಸಿದಾಗ ಸಾಯುವ ಕ್ಷಣದಲ್ಲಿ ಅವರು ಆ ಹೆಸರುಗಳನ್ನು ಸ್ಮರಿಸಿರಬೇಕು. ೧೯೪೮ರ ಫೆಬ್ರವರಿ ೧೫ರ ಹರಿಜನ ಪತ್ರಿಕೆಯಲ್ಲಿ ಗಾಂಧೀಜಿಯವರ ಆಪ್ತ ಸಹಾಯಕರಾಗಿದ್ದ ಪ್ಯಾರೇಲಾಲ್‌ರು, ಕೊನೆಯುಸಿರೆಳೆದಾಗ ಗಾಂಧೀಜಿ 'ರಾಮ್ ರಾಮ್' ಎಂದರು ಎಂಬುದಾಗಿ ಬರೆದಿದ್ದಾರೆ. ಮೊದಲನೆಯ ಗುಂಡು ಗಾಂಧೀಜಿಯವರ ದೇಹವನ್ನು ಹೊಕ್ಕಾಗ ಅವರು 'ರಾಮ್' ಎಂಬುದಾಗಿ ಉದ್ಗರಿಸಿರಬಹುದು. ಮುಂದಿನ ರಹೀಮ್ ಎಂಬ ಹೆಸರನ್ನು ಉಚ್ಚರಿಸುವ ಮೊದಲೇ ಎರಡನೆಯ ಗುಂಡು ಅವರ ದೇಹವನ್ನು ಹೊಕ್ಕಿದ್ದರಿಂದ ಉಂಟಾದ ಆಘಾತದಿಂದ ಅವರ ಧ್ವನಿ ಕ್ಷೀಣಿಸಿ ಅವರು ಉಚ್ಚರಿಸಿದ್ದು ಸ್ಪಷ್ಟವಾಗಿ ಕೇಳಿಸದೇ ಹೋಗಿರಬಹುದು. ಆ ಸಮಯಕ್ಕೆ ಅವರ ಸುತ್ತ ಜನರಲ್ಲಿ ಹೆಚ್ಚಿನವರು ಹಿಂದೂಗಳೇ ಆಗಿದ್ದರು. ರಹೀಮ್ ಎಂಬ ಅವರ ಉದ್ಗಾರವನ್ನು ಸುಲಭವಾಗಿ ಅಪಾರ್ಥಮಾಡಿಕೊಂಡಿರಬಹುದು. ಅಥವಾ ರಾಮ್ ಎಂದೂ ತಪ್ಪಾಗಿ ಗ್ರಹಿಸಿರಬಹುದು. ಈ ವಿಷಯದ ಬಗ್ಗೆ ಗಾಂಧೀಜಿಯವರ ಖಚಿತವಾದ ಹೇಳಿಕೆಗಳ ಹಿನ್ನೆಲೆಯಲ್ಲಿ ಅವರು ತಮ್ಮ ನಂಬಿಕೆಯನ್ನು ಉಳಿಸಿಕೊಂಡಿರುವ ಸಾಧ್ಯತೆಯನ್ನು ಒಪ್ಪಲು ನಿರಾಕರಿಸಿದರೆ ನಾವು ಗಾಂಧೀಜಿಯವರಿಗೆ ಘೋರ ಅನ್ಯಾಯ ಮಾಡಿದಂತಾಗುತ್ತದೆ. ಅವರ ಮರಣಾನಂತರದಲ್ಲಿ ಗಾಂಧೀಜಿಯವರಿಗಿಂತ ಹಿಂದೂ ಧರ್ಮವೇ ಹೆಚ್ಚು ಮುಖ್ಯವಾಯಿತು. ನಾವು ಅವರ ಆದರ್ಶಗಳನ್ನು ನಿರ್ಲಕ್ಷಿಸಬಯಸಿದೆವು. 'ರಹೀಮ'ನನ್ನು ತ್ಯಜಿಸಿ ಅವರನ್ನು 'ರಾಮ'ನಿಗೆ ಮಿತಿಗೊಳಿಸಿದೆವು. ನಮ್ಮ

ವಿಶ್ಲೇಷಣೆಯನ್ನು ಧೃಡಪಡಿಸುವ ರೀತಿಯಲ್ಲಿ ರಾಜಘಾಟ್‌ನಲ್ಲಿನ ಅವರ ಸಮಾಧಿಯ ಮೇಲೆ 'ಹೇ ರಾಮ್' ಎಂದು ಮಾತ್ರ ಕೆತ್ತಲಾಗಿದೆ. ಗಾಂಧೀಜಿಯವರು ಇದಕ್ಕೆ ಹೇಗೆ ಪ್ರತಿಕ್ರಿಯಿಸಿರಬಹುದು? ಅವರು ಹೇಳಿದ್ದನ್ನು ಸ್ಪಷ್ಟವಾಗಿ ಕೇಳಿಸಿಕೊಳ್ಳಲು ಸಾಧ್ಯವಾಗದಿದ್ದಾಗ ನಮ್ಮ ಮಾತುಗಳನ್ನು ಅವರ ಬಾಯಲ್ಲಿರಿಸುವುದಕ್ಕೆ ಪ್ರತಿಯಾಗಿ ಅವರು ಆ ಮೊದಲು ಆಡಿದ ಮಾತುಗಳಿಗೆ ಮನ್ನಣೆ ನೀಡಬೇಕಾಗಿತ್ತು. 'ರಾಮ್ ರಹೀಮ್' ಎಂಬ ಹೆಸರುಗಳನ್ನು ಅವರ ಸಮಾಧಿಯ ಮೇಲೆ ಕೆತ್ತಿದ್ದಲ್ಲಿ ರಾಜ್‌ಘಾಟ್‌ಗೆ ಭೇಟಿ ನೀಡುವ ಮುಸ್ಲಿಮರೂ ಹೆಚ್ಚು ಪ್ರಭಾವಿಸಲ್ಪಡುತ್ತಿದ್ದರು ಮತ್ತು ಗಾಂಧೀಜಿಯವರ ಬಗ್ಗೆ ಅವರಲ್ಲಿ ಹೆಚ್ಚು ಗೌರವ ಮೂಡುತ್ತಿತ್ತು. ಹಾಗೆಯೇ ಅದರಿಂದ ಎರಡು ಧರ್ಮಗಳ ನಡುವಿನ ಐಕಮತ್ಯಕ್ಕೆ ಅದು ಸಹಕಾರಿಯಾಗುತ್ತಿತ್ತು. ನೌಖಾಲಿ ಮತ್ತು ಕಲ್ಕತ್ತಾಗಳಲ್ಲಿ ಮುಸ್ಲಿಮರನ್ನು ಹಿಂಸೆಯಿಂದ ದೂರ ಉಳಿಸುವಲ್ಲಿ ಗಾಂಧೀಜಿ ಯಶಸ್ವಿಯಾದರು. ರಾಮರಹೀಮರು ಒಬ್ಬನೇ ದೇವರ ಪ್ರತಿನಿಧಿಗಳು ಎಂಬುದನ್ನು ಅವರು ಅರ್ಥಮಾಡಿಕೊಂಡಿದ್ದರಿಂದ ಇದು ಸಾಧ್ಯವಾಯಿತು. ಅನಿವಾರ್ಯವಾದ ತೀರ್ಮಾನ ಏನೆಂದರೆ, ಗಾಂಧೀ ಅನುಯಾಯಿಗಳೆಂದು ಕರೆಸಿಕೊಂಡ ಜನ ಗಾಂಧೀಜಿಯವರ ಮರಣಾನಂತರ ಅವರ ಜಾತ್ಯತೀತ ದೃಷ್ಟಿಕೋನಕ್ಕೆ ನ್ಯಾಯ ಒದಗಿಸಲಿಲ್ಲ. ಆದ್ದರಿಂದ ಗಾಂಧೀಜಿಯವರ ಅನುಯಾಯಿಗಳೆನಿಸಿಕೊಂಡವರು ಹೇಳಿದ್ದರ ಮೂಲಕ ಗಾಂಧೀಜಿಯವರನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದಕ್ಕೆ ಪ್ರತಿಯಾಗಿ ಸ್ವತಃ ಗಾಂಧೀಜಿಯವರೇ ತಮ್ಮ ಬಗ್ಗೆ ಹೇಳಿದ್ದರ ಮೂಲಕ ಅವರನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದು ಉತ್ತಮ. ಗಾಂಧೀಜಿಯವರು ಹೆಚ್ಚು ಜಾತ್ಯತೀತರೂ, ವೈಚಾರಿಕರೂ ಮತ್ತು ಸಹಿಷ್ಣುವೂ ಆಗಿದ್ದರು ಎಂಬುದನ್ನು ನಾನು ಇಲ್ಲಿ ಒತ್ತಿ ಹೇಳಬಯಸುತ್ತೇನೆ.

– ಅನುವಾದ : ರಾಜು

ಹೊಸ ಮನುಷ್ಯ ಕೃಪೆ

– ಲವಣಂ:

ಜನನ ೧೯೩೦. ಖ್ಯಾತ ನಿರೀಶ್ವರವಾದಿ, ಗಾಂಧೀಜಿಯವರ ಅನುಯಾಯಿ 'ಗೋರಾ' ಅವರ ಪುತ್ರ, ತಂದೆಯ ಮಾರ್ಗದರ್ಶನದಲ್ಲಿ ಸಮಾಜಸೇವೆ. ವಿನೋಬಾ ಅವರ ಭೂದಾನ ಚಳುವಳಿಯ ಕಾಲಕ್ಕೆ ಆಂಧ್ರಾ ಮತ್ತು ಒರಿಸ್ಸಾಗಳಲ್ಲಿ ವಿನೋಬಾ ಅವರಿಗೆ ಭಾಷಾಂತರಕಾರರಾಗಿ ಕೆಲಸ. 'ಸಂಸ್ಕಾರ್' ಎಂಬ ತಮ್ಮ ಸೇವಾಸಂಸ್ಥೆಯ ಮೂಲಕ ಪತ್ನಿಯ ಜೊತೆಗೂಡಿ ಆಂಧ್ರದ ಜೋಗಿನಿ ವ್ಯವಸ್ಥೆಯ ಸುಧಾರಣೆಗಾಗಿ ಕೆಲಸ ಮಾಡಿದ್ದಾರೆ.

ಗಾಂಧಿ ಕುರಿತು

ಓಷೋ : ಕೆಲವು ಆಲೋಚನೆಗಳು

–ಡಿ.ಎಸ್. ನಾಗಭೂಷಣ

(ಓಷೋ ಎಂದೇ ಜನಪ್ರಿಯರಾಗಿರುವ ಆಚಾರ್ಯ ರಜನೀಶ್ ತನ್ನ ಶಿಷ್ಯರನ್ನು ಉದ್ದೇಶಿಸಿ ಗಾಂಧಿ ಕುರಿತು ಮಾಡಿದ ಆಯ್ದ ಕೆಲವು ಪ್ರವಚನಗಳ ಕನ್ನಡ ಅನುವಾದ ಈಗ ಪುಸ್ತಕ ರೂಪದಲ್ಲಿ ಹೊರಬಂದಿದೆ. ಡಾ. ಟಿ.ಎಸ್ ವಾಸುದೇವಮೂರ್ತಿಯವರು ಸೊಗಸಾಗಿ ಕನ್ನಡಕ್ಕೆ ತಂದಿರುವ ಈ ಪುಸ್ತಕದ ಹೆಸರು: 'ಮಹಾತ್ಮ: ಗಾಂಧೀವಾದದ ಗೊತ್ತುಗುರಿಗಳು'. ಪ್ರ: ಸಾಹಿತ್ಯ ಲೋಕ ಪಬ್ಲಿಕೇಷನ್ಸ್, ಬೆಂಗಳೂರು. ಓಷೋ ಇಂದು ಕನ್ನಡ ಓದುಗರ ಮಧ್ಯೆ ಅತ್ಯಂತ ಜನಪ್ರಿಯ ಲೇಖಕ. ಆದರೆ ಈ ಪುಸ್ತಕದಲ್ಲಿನ ಲೇಖನಗಳು ಗಾಂಧಿ ಕುರಿತು ಉದ್ದೇಶಪೂರ್ವಕವಾಗಿ ತಪ್ಪು ಅಭಿಪ್ರಾಯಗಳನ್ನು ಕಲ್ಪಿಸಲೆತ್ನಿಸುತ್ತವೆ ಎಂದು ನನಗನ್ನಿಸಿತು. ಹಾಗಾಗಿ ಈ ಬಗ್ಗೆ ನನ್ನ ಗೆಳೆಯರೇ ಆದ ಇದರ ಅನುವಾದಕ ವಾಸುದೇವಮೂರ್ತಿಯವರಿಗೆ ಪತ್ರ ಬರೆದೆ. ಹಾಗೇ ಇತ್ತೀಚೆಗೆ ಈ ಪುಸ್ತಕದ ವಿಮರ್ಶೆ 'ಪ್ರಜಾವಾಣಿ'ಯಲ್ಲಿ ಪ್ರಕಟವಾದಾಗ, ಅದಕ್ಕೊಂದು ಪ್ರತಿಕ್ರಿಯೆಯನ್ನು ಬರೆದೆ. ಎಂದಿನಂತೆ ಅದನ್ನು ಆ ಪತ್ರಿಕೆ ಪ್ರಕಟಿಸಲಿಲ್ಲ ಎಂಬುದು ಬೇರೆ ವಿಚಾರ. ಆದರೆ ಇದೆಲ್ಲ ಗಾಂಧಿ ಕುರಿತು ಆಸಕ್ತಿ–ಕುತೂಹಲ ಹೊಂದಿರುವ ಸಾರ್ವಜನಿಕರಿಗೆ ಗೊತ್ತಾಗಬೇಕು. ಆ ಕಾರಣಕ್ಕಾಗಿ ಇವೆಲ್ಲವನ್ನೂ–ಗೆಳೆಯ ವಾಸುದೇವ ಮೂರ್ತಿ ಯವರ ಅನುಮತಿ ಪಡೆದು–ಸಂಕಲಿಸಿ ಇಲ್ಲಿ ನಿಮ್ಮ ಮುಂದಿಡುತ್ತಿರುವೆ–ಲೇ.)

ಗಾಂಧಿಯನ್ನು ಪ್ರತಿಸ್ಪರ್ಧಿ ಎಂದು ಭಾವಿಸಿದ ಓಷೋ!

೨೨.೫.೨೦೧೭

ಪ್ರಿಯ ವಾಸುದೇವಮೂರ್ತಿಯವರಲ್ಲಿ,

ನೀವು ವಿಶ್ವಾಸಪೂರ್ವಕವಾಗಿ ಕಳಿಸಿದ ರಜನೀಶರ 'ಮಹಾತ್ಮ' ಪುಸ್ತಕ ಬೆಳಿಗ್ಗೆ ತಲುಪಿತು. ಕೂಡಲೇ ಅದನ್ನು ತೆರೆದು ಓದತೊಡಗಿದವನು ಇದೀಗ ತಾನೇ ಮುಗಿಸಿದೆ. ನಿರಾಶೆಯೂ, ಜಿಗುಪ್ಸೆಯೂ ಒಟ್ಟಿಗೇ ಆಯಿತೆಂದು ಹೇಳದಿದ್ದರೆ ನಾನು ಅಪ್ರಮಾಣಿಕನಾದೇನು. ಓಷೋ ಬಗ್ಗೆ ನನ್ನಲ್ಲಿ ಮೆಚ್ಚುಗೆಯ ಜೊತೆಗೇ ಇದ್ದ ಅನುಮಾನಗಳು ಈ ಪುಸ್ತಕ ಓದಿದಾಗ ನಿಜವೆನ್ನಿಸಿದವು. ಮಹಮ್ಮದನ ಬಗ್ಗೆ ವಿವೇಕಾನಂದರು ಹೇಳಿರುವ, 'ಆತ ಧ್ಯಾನದ ಒಂದು ಹಂತದವರೆಗೆ ಹೋಗಿ ಸ್ಥಗಿತಗೊಂಡವ' ಎಂಬ ಮಾತು ನೆನಪಾಗಿ ಈತನ ಬಗ್ಗೆ 'ಧ್ಯಾನದ ಒಂದು ಹಂತದವರೆಗೆ ಹೋಗಿ ಮತ್ತನಾದವ'

ಎಂದೆನ್ನಬೇಕೆನಿಸುತ್ತದೆ.

ನಾನು ಈ ಮಾತುಗಳನ್ನು ಈತ ಗಾಂಧಿಯನ್ನು ಕಟುವಾಗಿ ಟೀಕಿಸಿದ್ದಾನೆ ಎಂಬ ಕಾರಣಕ್ಕೆ ಖಂಡಿತ ಆಡುತ್ತಿಲ್ಲ. ಅದು ಘನವಾದ ಟೀಕೆಯೂ ಅಲ್ಲ, ವಿಮರ್ಶೆಯೂ ಆಗಿಲ್ಲ ಎಂಬ ಕಾರಣಕ್ಕಷ್ಟೇ ಆಡುತ್ತಿದ್ದೇನೆ. ಯಾರೊಬ್ಬರನ್ನೇ, ಅವರು ತುಂಬ ಚಿಕ್ಕವರಿರಲಿ, ದೊಡ್ಡವರಿರಲಿ, ಅರ್ಥಮಾಡಿಕೊಳ್ಳಲು ಪ್ರೀತಿ ಮತ್ತು ಸಹಾನುಭೂತಿಗಳು ಬೇಕು. ನಂತರದ ತೀರ್ಮಾನಗಳು ಏನೇ ಆಗಿರಬಹುದು, ಅದು ಬೇರೆ ವಿಷಯ. ಆದರೆ ಈ ಓಷೋ ಶೈಲಿಯೇ ಸರ್ವಜ್ಞ ಗರ್ವದ್ದು. ಹಾಗಾಗಿ ಆತ ವಿಮರ್ಶೆಯ ಹೆಸರಲ್ಲಿ ಮಾಡುವುದೆಲ್ಲವೂ ದುರುದ್ದೇಶಪೂರಿತ ವಿಗ್ರಹ ಭಂಜನೆ ಮಾತ್ರ ಆಗಿದೆ.

ನಿಮ್ಮ ಈ ಪುಸ್ತಕದಲ್ಲಿ ಕಾಣುವ ಗಾಂಧಿ 'ವಿಮರ್ಶೆ' ಎಲ್ಲವೂ ಆತ ಗಾಂಧಿಯನ್ನು ಓರ್ವ ಪ್ರತಿಸ್ಪರ್ಧಿ ಎಂದೇ ಭಾವಿಸಿ ಅವರ ಮೇಲೆ ದಾಳಿ ಮಾಡುತ್ತಾ ತಾನು ಆಧುನಿಕ ಜಗತ್ತಿನ ಏಕಮೇವಾದ್ವಿತೀಯ ಗುರು ಎಂದು ಸ್ಥಾಪಿಸಿಕೊಳ್ಳುವ ಘಾತುಕತನದ ಬರವಣಿಗೆಯಂತೆಯೇ ನನಗೆ ತೋರಿದೆ. ಇಲ್ಲದಿದ್ದರೆ ಈ ಓಷೋ, ಅದು ಕಸ್ತೂರ್‌ಬಾ ಅಥವಾ ಹರಿಲಾಲ ಅಥವಾ ಸುಭಾಷ್‌ಚಂದ್ರ ಬೋಸ್ ಅಥವಾ ಪಾಕಿಸ್ತಾನದ ಮೇಲಿನ ದಾಳಿ ಅಥವಾ ರಾಷ್ಟ್ರ ವಿಭಜನೆಯ ಸಂದರ್ಭದ ಹಿಂಸಾಚಾರ ಅಥವಾ ಜಿನ್ನಾರೊಡನೆಯ ಸಂಬಂಧ, –ಹೀಗೆ ಗಾಂಧಿ ಬಗ್ಗೆ ಹೇಳುವ ಪ್ರತಿಯೊಂದು 'ಕಥೆ'ಯನ್ನು ವಿಕೃತಗೊಳಿಸಿ ಹೇಳುತ್ತಿರಲಿಲ್ಲ. ಗಾಂಧಿ ಬದುಕು ಕುರಿತಂತೆ ಸ್ವತಃ ಅವರ ಬರಹಗಳೇ ಅಲ್ಲದೆ, ಹತ್ತಾರು ಆವೃತ್ತಿಯ, ರೂಪಗಳ ಬರಹಗಳು ಇಂದು ಲಭ್ಯವಿವೆ. ಹೀಗಿರುವಾಗ ನಿಮ್ಮ ಓಷೋನ ಆವೃತ್ತಿಯನ್ನೇ ನಾವೇಕೆ ನಂಬಬೇಕು? ಅದೂ ಅನ್ಯರನ್ನು ಅರಿಯಲು ಅಗತ್ಯವಾದ ಪ್ರೀತಿ–ಸಹಾನುಭೂತಿಗಳ ಪಸೆಯೂ ಇಲ್ಲದ ಈ ಬರವಣಿಗೆಯನ್ನು?

ಈ ಓಷೋಗೆ ಇಡೀ ಗಾಂಧಿ ಬದುಕಿನಲ್ಲಿ, ಅವರು ಮಾಡಿದ ಲೈಂಗಿಕ ಪ್ರಯೋಗ ಮಾತ್ರ ಪ್ರಾಮಾಣಿಕವಾಗಿ ಕಾಣುತ್ತದೆ ಎಂದರೆ, ಈತನ ಲೋಕದೃಷ್ಟಿಯ ಸಮಗ್ರತೆಯೇ ಅನುಮಾನಾಸ್ಪದವೆನಿಸುತ್ತದೆಯಲ್ಲವೆ? ತನ್ನೆಲ್ಲ ವ್ಯಕ್ತಿತ್ವ ವಿಶ್ಲೇಷಣೆಗಳಿಗೂ ಫ್ರಾಯ್ಡ್–ಯೂಂಗ್‌ರನ್ನು ಉಲ್ಲೇಖಿಸುವ ಈತ ಆಧುನಿಕ ಮನಃಶಾಸ್ತ್ರವೇ ಮನುಷ್ಯನನ್ನು ಅರ್ಥ ಮಾಡಿಕೊಳ್ಳಲು ಇರುವ ಏಕೈಕ ಸಾಧನ ಎಂದು ನಂಬಿದ ಮೂಢನಂತೆಯೂ ನನಗೆ ಕಂಡಿದ್ದಾನೆ. ನಮ್ಮ ಕಾಲದ ಎಲ್ಲ ಗೌರವಾನ್ವಿತರನ್ನೂ ಕಳ್ಳರು, ಸುಳ್ಳರು, ಸೋಗಲಾಡಿಗಳು, ಆತ್ಮವಂಚಕರು ಎಂದು ದೂಷಿಸುವ ಈತನನ್ನೇ ಒಮ್ಮೆ ಈತನೇ ಧರ್ಮಶಾಸ್ತ್ರದಂತೆ ನಂಬಿರುವ

ಈ ಆಧುನಿಕ ಮನಃಶಾಸ್ತ್ರದ ಪ್ರಮೇಯಗಳ ಅಡಿಯಲ್ಲಿ ಪರಿಶೀಲಿಸಿ/ಪರೀಕ್ಷಿಸಿ ನೋಡಿದಾಗ ದೊರೆಯುವ ತೀರ್ಮಾನಗಳಿರಬಹುದು ಎಂಬುದರ ಬಗ್ಗೆ ನನಗೆ ಕುತೂಹಲವಿದೆ. ಇನ್ನು ಈತನ ನೆಚ್ಚಿನ ರಾಜಕೀಯ ನಾಯಕರೆಂದರೆ ಇಂದಿರಾಗಾಂಧಿ ಇದರಿಂದ ಈತನ ರಾಜಕೀಯ ಅರಿವು ಯಾವ ಮಟ್ಟದ್ದಿರಬೇಕೆಂಬುದು ಗೊತ್ತಾಗುತ್ತದೆ.

ಈತ ಗಾಂಧಿಯನ್ನು ಹಿಟ್ಲರ್‌ಗೆ ಹೋಲಿಸಿ ಆಡಿದ ಮಾತಿಗೆ ಸಂಬಂಧಿಸಿದಂತೆ ಕೇಳಲಾದ ಪ್ರಶ್ನೆಗೆ ಈತ ನೀಡಿರುವ ಉತ್ತರದ ಅತಿ ವಿಸ್ತಾರದ ಹಿಂದೆ ಇರುವುದು ಅದರ ವಿಕ್ಷಿಪ್ತತೆಯೇ. ಸಿಕ್ಕಿಹಾಕಿಕೊಂಡ ಕಳ್ಳ ಕಥೆಗಳನ್ನು ಹೆಣೆಯುತ್ತಾ ಹೋಗುವಂತೆ ಇಲ್ಲಿ ಓಷೋ ಕಥೆಗಳನ್ನು ಹೆಣೆಯುತ್ತಾ ಹೋಗಿರುವುದನ್ನು ಕಂಡು ಒಮ್ಮೊಮ್ಮೆ ಈತನ ಬಗ್ಗೆ ಕನಿಕರವೂ ಉಂಟಾಗುತ್ತದೆ. ಈ ಬರಹದಲ್ಲಿ ಗಾಂಧಿ ಬಗ್ಗೆ ಪ್ರಯೋಗಿಸಿರುವ ಶಬ್ದಗಳನ್ನು ಓದಿದ (೫೯-೬೦ನೇ ಪುಟ ನೋಡಿ.) ಯಾರೂ, ಮೂಲತಃ ಓಷೋಗೆ ಗಾಂಧಿ ಬಗ್ಗೆ ಅಪಾರ ಗೌರವವಿತ್ತು ಎಂಬ ನಿಮ್ಮ ಮಾತನ್ನು ಗಂಭೀರವಾಗಿ ತೆಗೆದುಕೊಳ್ಳಲಾರರು. ಕಷ್ಟದ ಪ್ರಶ್ನೆಗಳನ್ನು ಕೇಳಿದಾಗ ಮಾತ್ರ ಈ ಓಷೋ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡಂತಾಗಿ ಗಾಂಧಿ ಬಗ್ಗೆ ಅನಿವಾರ್ಯವೆಂಬಂತೆ ಒಂದೆರಡು (ಹುಸಿ) ಔದಾರ್ಯದ ಮಾತುಗಳನ್ನಾಡಿದ್ದಾನಷ್ಟೆ. ಹಾಗಾಗಿ ಇಡೀ ಪುಸ್ತಕದ ತುಂಬ ಅಪ್ರಾಮಾಣಿಕತೆ ಹಾವಿನಂತೆ ಹರಿದಾಡಿದೆ. ಗಾಂಧಿ ಬಗೆಗಿನ ಔಪಚಾರಿಕ ಪರಿಚಯದ ಹೊರತಾಗಿ ಇನ್ನೇನನ್ನೂ ಓದಿಕೊಳ್ಳದವರು ಮಾತ್ರ ಈ ಓಷೋ ಮಾತುಗಳನ್ನು ನಂಬಬಹುದಷ್ಟೆ. ಗಾಂಧಿ ಅವಹೇಳನ ಸಮರೋಪಾದಿಯಲ್ಲಿ ನಡೆದಿರುವ ಈ ಹೊತ್ತಿನಲ್ಲಿ ಇಂತಹ ಪುಸ್ತಕಗಳು ಗಾಂಧಿ ವಿರೋಧಿಗಳ ಕೈಗೆ ದುರ್ಬಳಕೆಯ ಒಳ್ಳೆಯ ಅಸ್ತ್ರಗಳಾಗುವುದರಲ್ಲಿ ಸಂಶಯವಿಲ್ಲ.

ಒಂದು ಮಾತು: ನಿಮ್ಮ ಅನುವಾದ ಅತ್ಯುತ್ತಮವಾಗಿದೆ. ಇದು ಕನ್ನಡದಲ್ಲೇ ಬರೆದ ಪುಸ್ತಕವೆಂಬಂತೆ ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ. ಆದರೆ ಈ ಪ್ರತಿಭೆ ಇಂತಹ ವಿಕ್ಷಿಪ್ತ ಬರವಣಿಗೆಯ ಪ್ರಸಾರಕ್ಕೆ ಬಳಕೆಯಾಗಿದೆಯಲ್ಲಾ ಎಂಬ ದುಃಖವೂ ಆಗುತ್ತದೆ. ನೀವು ತಪ್ಪು ತಿಳಿಯದಿದ್ದರೆ ಒಂದು ಮಾತು: ಗಾಂಧಿಯಂತಹ ವ್ಯಕ್ತಿತ್ವ ಕುರಿತ ಪುಸ್ತಕವನ್ನು ಅನುವಾದಿಸುವ ಮುನ್ನ ಗಾಂಧಿಯನ್ನು ಆದಷ್ಟೂ ಓದಿಕೊಂಡಿರಬೇಕಾಗುತ್ತದೆ. 'ನಾನು ಅದನ್ನು ಮಾಡಿದ್ದೇನೆ' ಎಂದು ನೀವು ಹೇಳಿದರೆ ನನ್ನದೇನೂ ಉತ್ತರವಿಲ್ಲ! ಜೊತೆಗೆ, ಈ ಪುಸ್ತಕದ ಬಗ್ಗೆ ನನಗಾದ ಇನ್ನೊಂದು ಬೇಸರವೆಂದರೆ, ಇದರ ರಕ್ಷಾಪುಟದ ವಿನ್ಯಾಸ ಮತ್ತು ಶೀರ್ಷಿಕೆ. ಪುಸ್ತಕದ ಮುಖಪುಟದಲ್ಲಿ ಪ್ರಧಾನವಾಗಿರಬೇಕಾದದ್ದು

ಓಷೋ ಚಿತ್ರ; ಗಾಂಧಿಯದ್ದಲ್ಲ. ಇದು ಮತ್ತು ಶೀರ್ಷಿಕೆ ಪುಸ್ತಕ ಕೊಳ್ಳುವವರನ್ನು, ಓದಬಯಸುವವರನ್ನು ದಾರಿ ತಪ್ಪಿಸುವಂತಿದೆ. ಮಾರುವಂತಿದ್ದರೆ ನೇರವಾಗಿ ಓಷೋರನ್ನು ಮಾರಿರಿ. ಗಾಂಧಿಯನ್ನಲ್ಲ; ಅದೂ ಹೀಗೆ.

ನಿಮ್ಮ ಪರಿಚಯ ನನಗೆ ಹೆಚ್ಚಿಲ್ಲ. ನೀವು ನೀಶೆಯನ್ನು ಅನುವಾದಿಸಿದಾಗಲೇ, ನೀವೊಬ್ಬ ಪ್ರಧಾನ ಲಹರಿಗೆ ಸೆಡ್ಡು ಹೊಡೆಯುವ ವಿಭಿನ್ನ ಚಿಂತನೆ, ಚಿಂತಕರ ಹಿಂದೆ ಹೊರಟ, ಗಂಭೀರವಾಗಿ ಗಮನಿಸಬೇಕಾದ ಲೇಖಕ ಎಂದುಕೊಂಡಿದ್ದೆ. ಆದರೆ ಹೀಗೆ ಗಮನಿಸಬೇಕಾಗುತ್ತದೆ ಎಂದುಕೊಂಡಿರಲಿಲ್ಲ! ಹೊಸತನದ, ವಿಭಿನ್ನ ನೋಟದ ಆಸೆ ಒಳ್ಳೆಯದೇ;ಆದರೆ ಅದು ರೋಚಕತೆಯನ್ನು ಹುಟ್ಟಿಸು ವಷ್ಟಕ್ಕೇ ಸೀಮಿತವಾಗಬಾರದು. ಎಲ್ಲಿ ಉದಾತ್ತತೆಯ ಸುಳಿವಿಲ್ಲವೋ ಅಲ್ಲಿ ಸತ್ಯವಾಗಲೀ, ಸೌಂದರ್ಯವಾಗಲೀ, ಶಿವವಾಗಲೀ ಇರಲು ಸಾಧ್ಯವಿಲ್ಲ. ಈ ಪುಸ್ತಕ ಓದಿ ಮುಗಿಸಿದಾಗ ನನಗೆ ತಾಕಿ ತಲ್ಲಣ ಉಂಟು ಮಾಡಿದ ಒಂದು ಸಂಗತಿ ಎಂದರೆ : ಅನುಭಾವ ಒಳ್ಳೆಯ ರಂಗ-ನಟನೆಗೂ ಒದಗಬಲ್ಲ ಸರಕಿನ ರೂಪವನ್ನೂ ತಳೆಯಬಲ್ಲದೆಂಬುದು.

ದಯವಿಟ್ಟು ನಾನು ಇದನ್ನೆಲ್ಲ ಗಾಂಧಿ ಕುರಿತ ನನ್ನ ಅಭಿಮಾನದಿಂದ ಬರೆದಿದ್ದೇನೆಂದು ಭಾವಿಸಬೇಡಿ. ಗಾಂಧಿ ಬಗೆಗೆ ನನ್ನದೂ ಹಲವು ತಕರಾರು ಗಳಿವೆ. ಹಿಂದೂ ಮೂಲಭೂತವಾದಿಗಳು, ಅಂಬೇಡ್ಕರ್ ಮುಂತಾದವರು ಗಾಂಧಿ ವಿರುದ್ಧ ಮಾಡಿರುವ/ಮಾಡುತ್ತಿರುವ ದಾಳಿಯನ್ನು ನಾನು ಓದಿರುವೆ. ಆದರೆ ಈ ದಾಳಿಗಳ ಹಿಂದೆ ಮೌಢ್ಯ, ಪಟ್ಟಭದ್ರ ಹಿತಾಸಕ್ತಿ, ಅಸಮಗ್ರ ಗ್ರಹಿಕೆ ಮತ್ತು ಚರಿತ್ರೆಯ ಕಹಿ ನೆನಪುಗಳು ಇದ್ದವು; ಅಪ್ರಾಮಾಣಿಕತೆ ಇರಲಿಲ್ಲ.

ನೀವು ದೀಕ್ಷೆ ಪಡೆದ ಓಷೋ ಶಿಷ್ಯರು ಎಂದು ಕೇಳಿರುವೆ. ಹಾಗೆಂದೇ ಇಷ್ಟು ದೀರ್ಘವಾಗಿ ಬರೆದಿರುವೆ. ನನ್ನ ಕೆಲವು ಮಾತುಗಳಿಂದ ನಿಮಗೆ ನೋವುಂಟಾಗಿದ್ದರೆ ಅದು ಉದ್ದೇಶಪೂರ್ವಕವಲ್ಲ ಎಂದು ನೀವು ತಿಳಿದರೆ ಸಾಕು.

ವಂದನೆಗಳೊಂದಿಗೆ,

–ಡಿ.ಎಸ್. ನಾಗಭೂಷಣ

ಮಾನ್ಯ ಶ್ರೀ ನಾಗಭೂಷಣ ಅವರಿಗೆ,

'ಮಹಾತ್ಮ' ಕೃತಿಯ ಮಿತಿಗಳನ್ನು ಹಾಗೂ ದೋಷಗಳನ್ನು ವಿವರಿಸಿ ತಿಳಿಸಿಕೊಟ್ಟಿದ್ದಕ್ಕೆ ಧನ್ಯವಾದಗಳು. ನನ್ನ ಗುರು ಓಶೋ ಸಮಾಜವಾದೀ ಮೌಲ್ಯಗಳನ್ನು ಒಪ್ಪಿ ಆಲೋಚಿಸಬಲ್ಲ ಒಬ್ಬ ಚಿಂತಕನಲ್ಲ ಎಂಬುದು ನನಗೆ

ಸ್ಪಷ್ಟವಾಯಿತು. ವ್ಯಕ್ತಿಯನ್ನು ಪ್ರಸ್ತಾಪಿಸದೆ ಯಾವುದೇ ವಿಚಾರವನ್ನು ಕುರಿತು ಚಿಂತಿಸುವುದು ನಿಜಕ್ಕೂ ಮಹಾ ಕಠಿಣ. ಓಶೋನಂತಹ ಗುರುವಿಗೂ ಅದು ಸಾಧ್ಯವಾಗಲಿಲ್ಲ.

ನಿಮ್ಮ ವಿಶ್ವಾಸವನ್ನು ಬಯಸುವ,

–ಟಿ.ಎನ್ ವಾಸುದೇವಮೂರ್ತಿ

ಅನಿರ್ಬಂಧಿತ ಸುಖದಾಹದ ಪ್ರತಿಪಾದಕ ಓಷೋ!

ಪ್ರಿಯ ಶ್ರೀ ವಾಸುದೇವಮೂರ್ತಿ ಅವರಲ್ಲಿ,

ನಿಮ್ಮ ಪ್ರತಿಕ್ರಿಯೆಗಾಗಿ ವಂದನೆಗಳು. ಯಾರಾದರೂ ಸಮಾಜವಾದಿ ವಿಚಾರಗಳನ್ನು ಒಪ್ಪಿಯೇ ಲೋಕಾಭಿವಕ್ತಿ ಮಾಡಬೇಕೆಂದು ನಾನು ನಿರೀಕ್ಷಿಸುವವನಲ್ಲ. ಜೊತೆಗೆ, ಸಮಾಜವಾದ ಎಂಬ ಪರಿಕಲ್ಪನೆಯೇ ಬಹು ಸ್ಥೂಲವಾಗಿದ್ದು, ಅದರ ನಿರ್ದಿಷ್ಟತೆಯನ್ನು ಅದನ್ನು ಹೇಳುವ ವ್ಯಕ್ತಿಯ ಲೋಕಾಭಿವ್ಯಕ್ತಿಯ ಕ್ರಮದಲ್ಲೇ ಕಂಡುಕೊಳ್ಳಬೇಕಾಗಿದೆ ಎಂದು ನಂಬಿರುವವನು ನಾನು. ಅದೇನೇ ಇದ್ದರೂ, ಓಷೋ ಸಮಾಜವಾದ ಎಂದರೆ ಮೂಲತಃ ವೈಜ್ಞಾನಿಕ ಸಮಾಜವಾದ ಅಥವಾ ಮಾರ್ಕ್ಸ್‌ವಾದ ಎಂದೇ ನಂಬಿದಂತಿದೆ. ಗಾಂಧಿ ಸಮಾಜವಾದ ಅಥವಾ ಲೋಹಿಯಾ ಪ್ರತಿಪಾದಿಸಿದ ಅನಧಿಪತ್ಯವಾದಿ ಎಂದು ಕರೆಯಬಹುದಾದ ಸಮಾಜವಾದದ ಬಗ್ಗೆ ಆತನಿಗೆ ಯಾವುದೇ ತಿಳುವಳಿಕೆ ಇದ್ದಂತಿಲ್ಲ. ಅದರ ಯಾವುದೇ ಸಾಕ್ಷ್ಯಗಳು ಈ ಪುಸ್ತಕದಲ್ಲಿ ದೊರೆಯುವುದಿಲ್ಲ. (ಹಾಗೆ ನೋಡಿದರೆ, ಲೋಹಿಯಾ ಅವರ ವಿಚಾರಗಳನ್ನು ಸಮಾಜವಾದ ಎನ್ನುವುದಕ್ಕಿಂತ ಬೇರೆ ಹೆಸರಿನಿಂದ ಕರೆಯುವುದೇ ಸೂಕ್ತ ಎಂದು ನನಗೆ ಹಲವಾರು ಬಾರಿ ಅನ್ನಿಸಿದೆ.) ಅಷ್ಟೇ ಅಲ್ಲ, ಗಾಂಧಿಯನ್ನೂ ಆತ ಸಮಗ್ರವಾಗಿ ಓದಿಕೊಂಡಿದ್ದನೇ/ಅರಿಯಲು ಪ್ರಯತ್ನಿಸಿದ್ದನೇ ಎಂಬ ಬಗ್ಗೆಯೂ ನನಗೆ ಅನುಮಾನವಿದೆ. ಜೊತೆಗೆ ಆತ ಗಾಂಧಿ ಸೇರಿದಂತೆ ಯಾರ ಬಗ್ಗೆಯಾದರೂ ಸುಳ್ಳು ಹೇಳಲು ಹಿಂಜರಿಯದವನೂ ಎನ್ನಿಸಿದೆ. ನಿಮ್ಮ ಅನುವಾದಕರ ಮಾತುಗಳ ಎರಡನೇ ಪುಟದ ಎರಡನೇ ಪ್ಯಾರಾದಲ್ಲಿನ ಆತನ ಉಲ್ಲೇಖಿತ ಮಾತುಗಳೇ ಇದನ್ನು ಶೃತಪಡಿಸುತ್ತವೆ: 'ಕೃಷ್ಣ, ಬುದ್ಧ, ಮಹಾವೀರ ಮೊದಲಾದ ಹೆಸರುಗಳನ್ನು ಬಳಸಿ ಅವರುಗಳು ಎಂದೂ ಹೇಳದಿದ್ದ ಮಾತುಗಳನ್ನೆಲ್ಲ ಅವರ ಬಾಯಲ್ಲಿ ಹೇಳಿಸಿದೆ. ಇದೆಲ್ಲ ನನಗೆ ಬೇಕಿರಲಿಲ್ಲ. ಆದರೆ ಜನ ಶಬ್ದ ಪ್ರಮಾಣವನ್ನು ನಂಬುತ್ತಾರೆ. ಹೀಗೆ ನಾನು ಯೇಸುವಿನ ಹೆಸರು ಹೇಳಿಕೊಂಡು ಅವರ ಸಮಾಜದಲ್ಲಿ; ಹಾಗೆಯೇ ಕೃಷ್ಣ, ಬುದ್ಧ,

ಮಹಾವೀರರ ಹೆಸರು ಹೇಳಿಕಂಡು ಆಯಾ ಸಮಾಜಗಳಲ್ಲಿ ಪ್ರವೇಶ ಪಡೆದೆ. ಅವರ ಬಂದೂಕುಗಳಲ್ಲಿ ನನ್ನ ಕಾಡತೂಸುಗಳನ್ನು ತುಂಬಿ ಅವರತ್ತಲೇ ಗುರಿ ಇಟ್ಟೆ. ಗುರಿ ತಪ್ಪಲಿಲ್ಲ' ಇತ್ಯಾದಿ) ಪುಸ್ತಕದ ತುಂಬ ಗಾಂಧಿ ಕುರಿತ ಸುಳ್ಳು ಮತ್ತು ವಿರೋಧಾಭಾಸದ ಮಾತುಗಳೇ ತುಂಬಿವೆ.

ಗಾಂಧಿ ಕುರಿತ ಈತನ ಈ ಪುಸ್ತಕ ಓದಿದ ನಂತರ ಈತನ ಬಗ್ಗೆ ನನಗೆ ಅನ್ನಿಸಿದ್ದು: ಈತ ಚತುರ ಮಾತುಗಾರಿಕೆಯ ವರ ಪಡೆದಿರುವ ಮಹಾ ಘಟಿಂಗ. ಮೂಲತಃ ಚಾರ್ವಾಕ ಮನಸ್ಸು. ಈತನ ಕಾಲಕ್ಕಾಗಿಯೇ ಜೀವಪರಿಸರಕ್ಕೆ ಸಂಬಂಧಿಸಿದ ಹಲವು ವಿಷಯಗಳು ಚರ್ಚೆಗೆ ಬಂದಿದ್ದರೂ ಅದರ ನೆದರೇ ಇಲ್ಲದಂತೆ ಈತ ತಂತ್ರಜ್ಞಾನದ ಅವಿಮರ್ಶಕ ಆರಾಧಕನಂತೆ ಮನುಷ್ಯ ಅನಿರ್ಬಂಧಿತ ಸುಖ-ಅನುಭೋಗಗಳ ಸಹಕ ಹಕ್ಕುದಾರ ಎಂಬರ್ಥದ ಮಾತುಗಳನ್ನಾಡಿರುವುದನ್ನು ಕಂಡು ಆಶ್ಚರ್ಯವೂ, ಭೀತಿಯೂ ಆಯಿತು.

ಇರಲಿ. ನಿಮಗೆ ಬಿಡುವಾದಾಗ ಮತ್ತು ಮನಸ್ಸಾದರೆ ಗಾಂಧಿಯನ್ನು ವಿಸ್ತೃತವಾಗಿ ಓದಲು ಪ್ರಯತ್ನಿಸಿರಿ.

ವಂದನೆಗಳೊಂದಿಗೆ,

–ಡಿಎಸ್ಸೆನ್

ಏಕಪಕ್ಷೀಯವೆನ್ನಿಸುವ ಪುಸ್ತಕ ವಿಮರ್ಶೆ

(೧೧.೬. ೨೦೧೭ರ 'ಪ್ರಜಾವಾಣಿ'ಯ 'ಮುಕ್ತ ಛಂದ' ಪುರವಣಿಯಲ್ಲಿ ವಿ.ಎನ್. ಹೆಗಡೆ ಎಂಬುವವರು ಈ ಪುಸ್ತಕದ ಬಗ್ಗೆ ಬರೆದ ವಿಮರ್ಶೆಯ ಬಗ್ಗೆ ಆ ಪತ್ರಿಕೆಗೆ ಬರೆದ; ಆದರೆ ಪ್ರಕಟವಾಗದ ಒಂದು ಪ್ರತಿಕ್ರಿಯೆ)

ಮಾನ್ಯರೇ,

ಇದೇ ಜೂನ್ ೧೧ರ 'ಮುಕ್ತ ಛಂದ' ಪುರವಣಿಯಲ್ಲಿನ ಮಹಾತ್ಮ ಗಾಂಧಿ ಕುರಿತ ಓಷೋರ(ಆಚಾರ್ಯ ರಜನೀಶ) ಆಯ್ದ ವಿಚಾರಗಳ ಅನುವಾದ ಪುಸ್ತಕ 'ಮಹಾತ್ಮ: ಗಾಂಧಿವಾದದ ಗೊತ್ತು ಗುರಿಗಳು' ಕುರಿತ ವಿ.ಎನ್ ಹೆಗಡೆಯವರ ವಿಮರ್ಶೆ ಓದಿದೆ. ಈ ವಿಮರ್ಶೆ ಈ ಪುಸ್ತಕ ಗಾಂಧಿವಾದವನ್ನು ಕುರಿತ ಟೀಕೆಯೆಂದು ಹೇಳುತ್ತಲೇ ಗಾಂಧಿ ವ್ಯಕ್ತಿತ್ವದ ಬಗ್ಗೆ ಅನುಚಿತ ಪ್ರಶ್ನೆಗಳನ್ನೆತ್ತಿದೆ ಎಂದು ನನಗನ್ನಿಸಿದೆ. ಸದರಿ ಪುಸ್ತಕವನ್ನು ಸವಿಸ್ತಾರವಾಗಿ ಓದಿದವನಾಗಿ ಈ ಅನುಚಿತತೆಗಳ ಬಗ್ಗೆ ಈ ಪತ್ರ ಬರೆಯುತ್ತಿರುವೆ.

ಹೆಗಡೆಯವರ ಈ ವಿಮರ್ಶೆ ಹೊರನೋಟಕ್ಕೆ ಸಮತುಲಿತ'ವಾಗಿರುವಂತೆ ಕಂಡರೂ, ಆಂತರಿಕವಾಗಿ ಅದು ರಜನೀಶರ ಅಷ್ಟೇನೂ ನಂಬಲರ್ಹವಲ್ಲದ

ಪ್ರಮಾಣಿಕತೆಯನ್ನು ನೆಚ್ಚಿಕೊಂಡ ದೌರ್ಬಲ್ಯದಿಂದ ಬಳಲಿದೆ ಎನ್ನಿಸುತ್ತದೆ. ಮಹಾತ್ಮರೆನಿಸಿಕೊಂಡ ಐತಿಹಾಸಿಕ ವ್ಯಕ್ತಿಗಳನ್ನು ಕುರಿತ ಟೀಕೆ-ವಿಮರ್ಶೆ ಎಂದರೆ ಸಮಕಾಲೀನ ಚಿಂತಕರಲ್ಲಿ ಹುಟ್ಟುವ ವಿಶೇಷ ಕುತೂಹಲ-ಕಾವುಗಳೂ ಇಲ್ಲಿ ಕೆಲಸ ಮಾಡಿದಂತಿದೆ. ಹಾಗಾಗಿಯೇ ರಜನೀಶರದು ಗಾಂಧಿಯ ನಿಷ್ಪಕ್ಷಪಾತ ಅಥವಾ ವಸ್ತುನಿಷ್ಠ ವಿಮರ್ಶೆ ಮಾಡಬಲ್ಲ ಸಮರ್ಥ ತಾತ್ವಿಕ ವ್ಯಕ್ತಿತ್ವವೇ ಎಂಬ ಪ್ರಾಥಮಿಕ ಯೋಚನೆಯೇ ಹೆಗಡೆಯವರ ಈ ವಿಮರ್ಶೆಯಲ್ಲಿ ಕಾಣದಾಗಿದೆ. ಗಾಂಧಿ ವಿಮರ್ಶಾತೀತರೂ ಅಲ್ಲ, ರಜನೀಶರು ಸುಲಭವಾಗಿ ಉದಾಸೀನ ಕ್ಕೊಳಪಡಬಲ್ಲ ತಾತ್ವಿಕರೂ ಅಲ್ಲ ಎಂಬ ಅರಿವಿನಲ್ಲೇ ನಾನು ಈ ಸಾಲುಗಳನ್ನು ಬರೆಯುತ್ತಿದ್ದೇನೆ.

ಸದರಿ ಪುಸ್ತಕದಲ್ಲಿ ಗಾಂಧಿ ಮತ್ತು ಅವರ ಅನುಯಾಯಿಗಳ ಕುರಿತು ಅನೇಕ ಘಟನೆಗಳ ಉಲ್ಲೇಖವಿದೆ. ಅವೆಲ್ಲವೂ ಗಾಂಧಿ ಮತ್ತು ಅವರ ಅನುಯಾಯಿಗಳ ಬಗ್ಗೆ ಕಟು ಟೀಕೆ, ಅಪಹಾಸ್ಯ, ಗೇಲಿಗಳನ್ನು ಒಳಗೊಂಡಿವೆ. ಆದರೆ ಇವಾವುಕ್ಕೂ ಯಾವುದೇ (ದಿನಾಂಕ, ತಿಂಗಳು, ವರ್ಷ ಅಥವಾ ಆ ಘಟನೆಗಳ ನಡೆದಾಗ ಇದ್ದವರ ಹೆಸರು, ಪರಿಚಯ ಇತ್ಯಾದಿ) ಸಾಕ್ಷ್ಯಗಳಿಲ್ಲ. ಮತ್ತು ಈ ಘಟನೆಗಳಾವುವೂ ಗಾಂಧಿ ಮತ್ತು ಅವರ ಈ ಅನುಯಾಯಿಗಳಿಗೆ ಸಂಬಂಧಿಸಿದ ಯಾವ ಗ್ರಂಥದಲ್ಲೂ ಉಲ್ಲೇಖವಾಗಿಲ್ಲ. ಉದಾಹರಣೆಗೆ, ಲಾಲ್ ಬಹಾದೂರ್ ಶಾಸ್ತ್ರಿಯವರು ರಜನೀಶರ ಅಭಿಮಾನಿಯಾಗಿದ್ದರು ಮತ್ತು ಅವರು ತಮ್ಮ ಮರಣ ಕಾಲದಲ್ಲಿ ಇವರ ಪುಸ್ತಕವನ್ನು ಓದುತ್ತಿದ್ದರು ಎಂದು ನಾವು ಹೇಗೆ ಮತ್ತು ಏಕೆ ನಂಬಬೇಕು? ಹಾಗೇ ಈ ತಥಾಕಥಿತ ಘಟನೆ : ಈತ ಬಾಲಕನಾಗಿದ್ದಾಗ ತನ್ನ ಹಳ್ಳಿಯ ಬಳಿಯ ರೈಲ್ವೇ ನಿಲ್ದಾಣದಲ್ಲಿ ಗಾಂಧಿ ಸ್ವಲ್ಪ ಕಾಲ ತಂಗುವರು ಎಂಬ ಸುದ್ದಿ ತಿಳಿದು ಅಲ್ಲಿಗೆ ಹೋಗಿದ್ದನಂತೆ. ಆದರೆ ಗಾಂಧಿಯವರ ರೈಲು ಬರುವುದು ಬಹು ತಡವಾದ್ದರಿಂದ ನಿಲ್ದಾಣದಲ್ಲಿ ಸ್ಟೇಷನ್ ಮಾಸ್ತರ್ ಮತ್ತು ತನ್ನ ಹೊರತಾಗಿ ಇನ್ನಾರೂ ಇರಲಿಲ್ಲವೆಂದು ಹೇಳುತ್ತಾ, ಆಗ ತಾನು ಕಂಡ ಗಾಂಧಿಯ 'ವೈಶ್ಯ' ವರ್ತನೆಯನ್ನು ವ್ಯಂಗ್ಯ ಶೈಲಿಯಲ್ಲಿ ವಿವರಿಸುತ್ತಾನೆ. ಆದರೆ ಗಾಂಧಿ ರೈಲು ತಡವಾಯಿತೆಂದು ಊರ ಜನವೆಲ್ಲ ಖಾಲಿಯಾಗಿದ್ದರೆಂದು ನಂಬಲು ಸಾಧ್ಯವೇ? ಅಥವಾ ಸಮಾಜವಾದಿಗಳು ಬಿರ್ಲಾರಿಂದ ಹಣ ಪಡೆಯುತ್ತಿದ್ದರು ಎಂಬ ಇವರ ಟೀಕೆಯನ್ನು? ಏನಿದಕ್ಕೆ ಆಧಾರ? ಇನ್ನು, ಜೆಪಿಯವರ ಪತ್ನಿ ಇವರ ಅಭಿಮಾನಿಯಾಗಿದ್ದರೆ, ಜೆಪಿ ಇವರ ಭಾಷಣಗಳನ್ನು ಮರೆಯಲ್ಲಿ (ಕದ್ದು) ಕೂತು ಕೇಳುತ್ತಿದ್ದರಂತೆ! ಇನ್ನು ಗಾಂಧಿ-ವಿನೋಬಾರನ್ನು ಕುರಿತ ಇವರು ನೀಡುವ ಘಟನೆಗಳ ಉದಾಹರಣೆಗಳಂತೂ ಓಷೋ ತನ್ನ ಪ್ರವಚನಗಳ

ಕೇಳುಗರ ಮನರಂಜನೆಗಾಗಿ ಕಲ್ಪಿಸಿಕೊಂಡ ಅಪ್ಪಟ ಕುಚೇಷ್ಟೆಗಳಂತೆಯೇ ಇವೆ. ಯಾರ ಬಗ್ಗೆಯೇ ಆಗಲಿ–ವಿಶೇಷವಾಗಿ ಗಾಂಧಿಯಂತಹ ವ್ಯಕ್ತಿತ್ವಗಳ ಬಗ್ಗೆ–ಮಾಡುವ ವಿಮರ್ಶೆಗೆ ವಿನೀತತೆಯಲ್ಲದಿದ್ದರೂ, ಒಂದು ಘನತೆ–ಗೌರವ ಇರಬೇಕು. ಅಪಹಾಸ್ಯ, ಗೇಲಿ, ಕುಚೇಷ್ಟೆಗಳು ವಿಮರ್ಶಕನ ಉದ್ದೇಶವನ್ನೇ ಅನುಮಾನಾಸ್ಪದಗೊಳಿಸುತ್ತವೆ. ರಜನೀಶರು ಈ ಪುಸ್ತಕದುದ್ದಕ್ಕೂ ಯುಗಪುರುಷನೆಂದು ಜಗತ್ತು ಮಾನ್ಯ ಮಾಡಿರುವ ಮಹಾತ್ಮನೊಬ್ಬನನ್ನು ಸಹಾನುಭೂತಿಯಿಂದ ಅರಿಯಲು ಯತ್ನಿಸುವ ತಾತ್ವಿಕನೊಬ್ಬನ ಯಾವ ಗುಣವನ್ನೂ ತೋರದೆ, ಸರ್ವಜ್ಞ ಗರ್ವ ಮೆರೆಯುವ ದುರಹಂಕಾರಿಯಂತೆ ಕಾಣುತ್ತಾರೆ. ಒಮ್ಮೊಮ್ಮೆ ಈ ಯುಗದ ಮಹಾ ದಾರ್ಶನಿಕನಾಗಬೇಕೆಂಬ ತನ್ನ ಇಚ್ಚೆಗೆ ಗಾಂಧಿ ಎಲ್ಲಿ ಪ್ರತಿಸ್ಪರ್ಧಿಯಾದರೋ ಎಂಬ ಆತಂಕವೂ ಇಲ್ಲಿ ಕೆಲಸ ಮಾಡಿದೆಯೇನೋ ಎನ್ನಿಸಿಬಿಡುತ್ತದೆ.

ಸಮಾನತೆಯ ಕಲ್ಪನೆಗೆ ಭಾರತದ ಸಮಾಜವಾದಿಗಳು ನೀಡಿದ ನವೀನ ಅರ್ಥ ವಿನ್ಯಾಸಗಳನ್ನಾಗಲೀ, ಅದಕ್ಕೆ ತಕ್ಕಂತೆ ಅವರು ಕಟ್ಟಲೆತ್ನಿಸಿದ ರಾಜಕಾರಣದ ನಕ್ಷೆಯನ್ನಾಗಲೀ ತಿಳಿಯಲು ಎಲ್ಲೂ ಯತ್ನಿಸಿದಂತೆ ತೋರದ ಸಂಪೂರ್ಣ, ಅಪ್ಪಟ ಬಂಡವಾಳಶಾಹಿ ಪರನಾಗಿದ್ದ ಈ ತಾತ್ವಿಕನು ಸಹಜವಾಗಿಯೇ ಆಧುನಿಕ ಸುಖ ಸವಲತ್ತುಗಳ ನಿರ್ಲಜ್ಜ ಆರಾಧಕನೂ ಆಗಿದ್ದ. (ಈ ಆರಾಧನೆ ಎಷ್ಟು ಅತಿಗೆ ಹೋಯಿತೆಂದರೆ, ಸ್ವತಃ ಇಂತಹ ಸುಖ–ಸವಲತ್ತುಗಳ ಆರಾಧಕ ದೇಶವಾದ ಅಮೆರಿಕಾದ ಸರ್ಕಾರವೇ ಈತನ್ನು ದೇಶದಿಂದ ಹೊರಕ್ಕೆ ಹಾಕಿತು) ಇಂತಹ ವ್ಯಕ್ತಿ ಆಧುನಿಕ ನಾಗರಿಕ ಬದುಕಿನ ಮಾದರಿಗಳನ್ನು ಕಟು ವಿಮರ್ಶೆಗೆ ಒಳಪಡಿಸಿದ ಗಾಂಧಿಯಂತಹ ವ್ಯಕ್ತಿಯನ್ನು ಸಹಾನುಭೂತಿಯಿಂದ ಅರಿಯುವ ಪ್ರಯತ್ನ ಮಾಡಲಾದರೂ ಹೇಗೆ ಸಾಧ್ಯ? ಈ ಇಡೀ ಪುಸ್ತಕವನ್ನು ಓದಿದಾಗ, ತನ್ನ ವಿಮರ್ಶೆ ಎದ್ದು ಕಾಣುವಷ್ಟು ಏಕಪಕ್ಷೀಯವಾಗಿರಬಾರದೆಂದಷ್ಟೇ ಈತ ಗಾಂಧಿಯ ಬಗ್ಗೆ ಒಂದೆರಡು ಒಳ್ಳೆಯ ಮಾತುಗಳನ್ನಾಡಿದ್ದಾನೆ ಎಂದು ಅನ್ನಿಸದಿರದು. ಈ ಪುಸ್ತಕದಲ್ಲಿ ವ್ಯಕ್ತವಾಗಿರುವ ಒಷೋನ ರಾಜಕೀಯ ನಂಬಿಕೆಗಳನ್ನು ಗಮನಿಸಿದರೆ, ಇಂದು ಈತ ಬದುಕಿದ್ದರೆ ಖಂಡಿತ ಮೋದಿ ಆಸ್ಥಾನದ ವಿದ್ವಾಂಸರಾಗಿ ಮೆರೆಯುತ್ತಿದ್ದರೆನಿಸುತ್ತದೆ.

ಗಾಂಧಿ ಮಾಡಿದ ಲೈಂಗಿಕ ಪ್ರಯೋಗವಷ್ಟೇ ಅವರ ಬದುಕಿನ ಏಕೈಕ ನಿಜ ಪ್ರಯೋಗ ಎನ್ನುವ ಈ ಓಷೋ ಬಗ್ಗೆ ಇನ್ನೇನೂ ಹೇಳಲು ಉಳಿದಿಲ್ಲ.

●

ಗಾಂಧೀ ಮಾದರಿಯ ಸಾಮಾಜಿಕ ವಿಮರ್ಶೆ

– ಸಮರ್ಥೇಶ ಕರ್ಣಾವತಿ

ಕೆಲವು ಸಾಮಾಜಿಕ ಆಚಾರಗಳನ್ನು, ಅದರಲ್ಲೂ ವಿಶೇಷವಾಗಿ ಹಿಂದೂ ಆಚಾರಗಳನ್ನು, ಗಾಂಧಿ ಟೀಕಿಸಿದ್ದಿದೆ. ಉದಾಹರಣೆಗೆ, ಅಸ್ಪೃಶ್ಯತೆ ಮತ್ತು ಪ್ರಾಣಿಹಿಂಸೆ. ಆದರೆ, ವಿಚಿತ್ರವೆಂದರೆ, ಇನ್ನು ಕೆಲವು ಸಾಮಾಜಿಕ ಆಚಾರಗಳನ್ನು, ಅದರಲ್ಲೂ ನಮಗೆ ಇವತ್ತು ವಿಕೃತವೆಂದು ಕಾಣುವಂಥವನ್ನು ಸಮರ್ಥಿಸಿದ್ದೂ ಇದೆ. ಉದಾಹರಣೆಗೆ, ವರ್ಣಾಶ್ರಮಧರ್ಮ ಮತ್ತು ಬ್ರಹ್ಮಚರ್ಯ. ಬಿಹಾರದ ಭೂಕಂಪಕ್ಕೆ ಅಸ್ಪೃಶ್ಯತೆಯ ಆಚರಣೆಯ ಪಾಪವೇ ಕಾರಣ ಎಂದೂ ಹೇಳಿದ್ದಿದೆ. ಗಾಂಧಿಯನ್ನು ಮೆಚ್ಚುವವರು ಇಂತಹ ಆಭಾಸಗಳನ್ನು ದೊಡ್ಡವರ ಸಣ್ಣ ತಪ್ಪುಗಳು ಎನ್ನುವಂತೆ ಸಂಕೋಚದಿಂದ ತೇಲಿಸುತ್ತಾರೆ. ಗಾಂಧಿಯನ್ನು ವಿಮರ್ಶಿಸುವವರು ಇದನ್ನೇ ಮುಂದುಮಾಡಿಕೊಂಡು ಗಾಂಧಿ ಆಳದಲ್ಲಿ ಎಂತಹ ಪಿತೃಪ್ರಧಾನವಾದ, ಮೇಲ್ಜಾತಿಯವರ ಪ್ರಕಾರ ಆದರ್ಶವೆಂದು ಕಾಣುವ ಒಂದು ಊಳಿಗಮಾನ್ಯ ರೀತಿಯ ಸಮಾಜದ ಪ್ರತಿಪಾದಕ ಎಂದೂ ವಾದಿಸುತ್ತಾರೆ. ಗಾಂಧಿಯ ಬಗೆಗಿನ ಗೌರವದಿಂದಲೋ ಏನೋ ಈ ಎರಡೂ ಕಡೆಯವರು ಇಷ್ಟು ಸ್ಫುಟವಾಗಿ, ಒರಟಾಗಿ ತಮ್ಮ ವಿಚಾರಗಳನ್ನು ಹೇಳದೇ ಇರಬಹುದು. ಆದರೆ ಎರಡೂ ಪಕ್ಷಗಳ ಪ್ರತಿಪಾದನೆಯ ಸಾರವಂತೂ ಸುಮಾರು ಹೀಗೆಯೇ ಇರುತ್ತದೆ.

ಈ ಎರಡೂ ಪಕ್ಷಗಳು ಗಾಂಧಿಯ ವಿಚಾರದ ಆಳವನ್ನು ತಿಳಿದು ಕೊಳ್ಳುವಲ್ಲಿ ಸೋತಿವೆ ಎಂದು ನನ್ನ ಅಭಿಪ್ರಾಯ. ಅಷ್ಟೇ ಅಲ್ಲ, ತಮ್ಮ ನಡುವೆ ಕೈಬದಲಾಯಿಸಿಕೊಂಡು, ಇಬ್ಬರೂ ಗಾಂಧಿಯ ವಿಚಾರಗಳನ್ನು ವಿಕೃತವಾಗಿ ವ್ಯಾಖ್ಯಾನ ಮಾಡಿದ್ದಾರೆ ಎಂದೂ ನನ್ನ ಅನಿಸಿಕೆ. ಇದನ್ನು ತೋರಿಸುವುದು ಪ್ರಸ್ತುತ ಲೇಖನದ ಉದ್ದೇಶ. ಅದಕ್ಕೆ ಪೂರಕವಾಗಿ ಗಾಂಧಿಯ ಬಿಡಿಬಿಡಿ ಮಾತುಗಳನ್ನು ವ್ಯಾಖ್ಯಾನ ಮಾಡುವ ಬದಲು, ಗಾಂಧಿ ಚಿಂತನೆಯನ್ನು ಅರಿಯಲು ಬೇಕಾದ ಒಂದು ಚೌಕಟ್ಟನ್ನು ಬೆಳೆಸಲು ಪ್ರಯತ್ನಿಸುತ್ತೇನೆ. ಆ ಚೌಕಟ್ಟು ವಿಶದವಾದರೆ, ಬಹುಶಃ ಗಾಂಧಿ ಚಿಂತನೆಯ ಒಟ್ಟಂದ ತಂತಾನೆ ಕಾಣತೊಡಗುತ್ತದೆ.

ಸಾಮಾಜಿಕ ವಿಮರ್ಶೆಯ ಎರಡು ಮಾದರಿಗಳು: ತಾತ್ವಿಕ ವಿಮರ್ಶೆ ಮತ್ತು ಸಾಧಾರಣ ವಿಮರ್ಶೆ

ಒಂದು ಸಾಮಾಜಿಕ ಆಚಾರ, ಉದಾಹರಣೆಗೆ ಬಾಲ್ಯವಿವಾಹ, ನಮ್ಮ ಪ್ರಕಾರ ಅನುಚಿತವಾದ ಆಚಾರ. ಆದರೆ ಇದು ಏತಕ್ಕೆ ಅನುಚಿತ ಎಂದು ಕೇಳಿದರೆ ಅದಕ್ಕೆ ಉತ್ತರ ಏನು? ಅದರಿಂದ ಉಂಟಾಗುವ ಪರಿಣಾಮಗಳು ಅನುಚಿತವಾದ್ದರಿಂದ ಆ ಆಚಾರವೂ ಅನುಚಿತ ಎಂದು ಹೇಳಬಹುದು. ಅಂದರೆ, ತಾಯಿ ಮಕ್ಕಳ ಆರೋಗ್ಯ, ಚಿಕ್ಕ ವಯಸ್ಸಿನಲ್ಲೇ ಗರ್ಭ ಧರಿಸುವುದರಿಂದ ಆಗುವ ದೈಹಿಕ ಮತ್ತು ಮಾನಸಿಕ ಪರಿಣಾಮಗಳು ಇವುಗಳ ದೃಷ್ಟಿಯಿಂದ ಇದು ಅನುಚಿತ ಎಂದು ಹೇಳಬಹುದು. ಈಗ, ವಾದಕ್ಕೆ. ಇಂತಹ ಅನುಚಿತ ಪರಿಣಾಮಗಳು ಉಂಟಾಗದಂತೆ ನೋಡಿಕೊಂಡರೆ ಬಾಲ್ಯವಿವಾಹ ಒಪ್ಪಿತವೇ ಎಂದು ಕೇಳೋಣ. ಆಗಲೂ ನಾವು ಆಧುನಿಕರಿಗೆ ಬಾಲ್ಯವಿವಾಹ ಅನುಚಿತವೆಂದೇ ಕಾಣುತ್ತಿರುತ್ತದೆ. ಅಂದಮೇಲೆ, ಪರಿಣಾಮಗಳ ದೃಷ್ಟಿಯಿಂದ ಬಾಲ್ಯವಿವಾಹದ ಔಚಿತ್ಯ ಅನೌಚಿತ್ಯಗಳನ್ನು ನಿರ್ಧರಿಸುವುದು ಸಾಲುವುದಿಲ್ಲ. ಹಾಗಾದರೆ ಬಾಲ್ಯವಿವಾಹ ನಿಜಕ್ಕೂ ಏಕೆ ಅನುಚಿತ?

ತಾತ್ವಿಕ ವಿಮರ್ಶೆ

ನಿಮ್ಮ ಸಂಸ್ಕೃತಿಯಲ್ಲಿ ಮನುಷ್ಯರ ಕುರಿತ ಒಂದು ತಾತ್ವಿಕ ಚಿತ್ರಣ ಇದೆ ಎಂದು ಊಹಿಸಿಕೊಳ್ಳಿ. ಆ ಚಿತ್ರಣದ ಪ್ರಕಾರ ಮನುಷ್ಯರ ಲಕ್ಷಣವೇ ಅವರ ಸ್ವಾತಂತ್ರ್ಯ. ಅದರಲ್ಲಿ ಅತೀ ಮುಖ್ಯವಾದ ಸ್ವಾತಂತ್ರ್ಯವೆಂದರೆ ನಮ್ಮ ಸಾಮಾಜಿಕ ಆಯ್ಕೆಗಳನ್ನು ನಾವೇ ಮಾಡಿಕೊಳ್ಳುವ ಸ್ವಾತಂತ್ರ್ಯ. ಮದುವೆಯೂ ಅಂತಹ ಆಯ್ಕೆಗಳಲ್ಲಿ ಒಂದು ಎಂದೂ ಇಟ್ಟುಕೊಳ್ಳಿ. ಬಾಲ್ಯವಿವಾಹ ಎನ್ನುವ ವ್ಯವಸ್ಥೆ ಮನುಷ್ಯನ ಇಂತಹ ಮೂಲಭೂತ ಲಕ್ಷಣವನ್ನೇ ನಿರಾಕರಿಸುವಂಥದ್ದು. ಅಂದರೆ, ಅದು ಮನುಷ್ಯರ ಬಗೆಗಿನ ನಮ್ಮ ತಾತ್ವಿಕ ಚಿತ್ರಣವನ್ನೇ ಅಲ್ಲಗಳೆಯುವಂಥದ್ದು. ಹಾಗಾಗಿ ಬಾಲ್ಯವಿವಾಹದ ಕುರಿತ ನಮ್ಮ ವಿಮರ್ಶೆ ನಿಜಕ್ಕೂ ಒಂದು ತಾತ್ವಿಕವಾದ ವಿಮರ್ಶೆ. ಕೇವಲ ಅದರ ಪರಿಣಾಮಗಳ ಕುರಿತ ವಿಮರ್ಶೆಯಲ್ಲ. ಹಾಗೆಂದು ಪರಿಣಾಮ ಕೇಂದ್ರಿತವಾದ ವಿಮರ್ಶೆ ಸರಿಯಲ್ಲ ಎಂದಲ್ಲ. ಆದರೆ ಅಂತಹ ವಿಮರ್ಶೆಯ ಹರವು ಬಹಳ ಸೀಮಿತವಾದದ್ದು. ಅದರಿಂದ ಬಾಲ್ಯವಿವಾಹದ ವ್ಯವಸ್ಥೆಯನ್ನು ಬದಲಿಸಬಹುದೇ ವಿನಾ ಅದರ ತಾತ್ವಿಕ ನಿರಾಕರಣೆ ಸಾಧ್ಯವಿಲ್ಲ. ಅಂದರೆ, ಪರಿಣಾಮ ಕೇಂದ್ರಿತ ವಿಮರ್ಶೆ ಮಾಡುವವರು, ಯಾವ ಸಂದರ್ಭವೇ ಆದರೂ ಸರಿ ಬಾಲ್ಯವಿವಾಹ ಇರಲೇಬಾರದು ಎನ್ನುವ ರೀತಿಯ ವಾದವನ್ನು ಮಾಡಲಾಗುವುದಿಲ್ಲ. ಆದರೆ, ತಾತ್ವಿಕ ವಿಮರ್ಶೆ ಮಾತ್ರ ಬಾಲ್ಯವಿವಾಹದ ಆಮೂಲಾಗ್ರ ವಿನಾಶಕ್ಕೆ ಒತ್ತಾಯಿಸಲು ಸಾಧ್ಯ.

ಈಗ ಇದೇ ವಿಚಾರದ ಇನ್ನೊಂದು ಆಯಾಮವನ್ನು ಗಮನಿಸಿ. ನಮಗೆ ಚಿಕ್ಕ ಮಕ್ಕಳನ್ನು ದುಡಿಮೆಗೆ ಹಚ್ಚಿರುವುದನ್ನು ಕಂಡಾಗ ನೋವಾಗಬಹುದು. ಹೆಂಗಸರು ಜೀವನವೆಲ್ಲಾ ಮನೆಗೆಲಸದಲ್ಲೇ ಸವೆಯುವಂತಾದಾಗ ದುಃಖವಾಗಬಹುದು. ಇವೆಲ್ಲಾ ಒಂದು ರೀತಿಯಲ್ಲಿ ಸರಿ ತಪ್ಪುಗಳ ಒಂದು ಸಾಧಾರಣ ತಕ್ಕಡಿಯ ಪ್ರಕಾರ ನಮಗೆ ಅನ್ನಿಸುವ ವಿಚಾರಗಳು. ಈ ಸಮಸ್ಯೆಯನ್ನು ನಿವಾರಿಸಲು ಏನು ಮಾಡಬೇಕು? ಬಹುಶಃ ಮಕ್ಕಳನ್ನು ದುಡಿಮೆಗೆ ಹಚ್ಚದಂತೆ ಕಾನೂನು ಮಾಡಬೇಕು. ಮಹಿಳೆಯರಿಗೂ ಸಾರ್ವಜನಿಕ ಜೀವನದಲ್ಲಿ ಮೀಸಲಾತಿ ಕಲ್ಪಿಸಬೇಕು. ಹೀಗೆ ಹತ್ತು ಹಲವು ರೀತಿಗಳಲ್ಲಿ ಇಂತಹ ಸಮಸ್ಯೆಗಳನ್ನು ಪರಿಹರಿಸಬೇಕು. ಆದರೆ, ಇಂತಹ ಅನುಚಿತ ಆಚಾರಗಳಿಗೆ ಕಾರಣವೇನು? ಮಹಿಳೆಯರನ್ನೇ ಏಕೆ ಮನೆಗೆಲಸಕ್ಕೆ ಮೀಸಲಿಡಲಾಗಿದೆ? ಮಕ್ಕಳನ್ನು ಏಕೆ ದುಡಿಮೆಗೆ ಹಚ್ಚಲಾಗಿದೆ? ಎನ್ನುವ ಪ್ರಶ್ನೆಗೆ ನಮ್ಮ ನಿತ್ಯಜೀವನದ ಸರಿತಪ್ಪುಗಳ ತಕ್ಕಡಿಯಲ್ಲಿ ಉತ್ತರವಿಲ್ಲ. ಮನೆಗೆಲಸಕ್ಕೆ ಮಹಿಳೆಯರೇ ಏಕೆ ಎಂದರೆ ಅವರಿಗೆ ದೇಖರೇಖಿಯ ಜವಾಬುದಾರಿಗಳು ಚೆನ್ನಾಗಿ ಬರುತ್ತವೆ ಎಂದೋ ಅಥವಾ ದುಡಿಮೆಗೆ ಮಕ್ಕಳೇ ಏಕೆ ಎಂದರೆ ಅವರಿಂದ ಸಣ್ಣಪುಟ್ಟ ಕೆಲಸಗಳನ್ನು ಸುಲಭದಲ್ಲಿ ತೆಗೆಯಬಹುದು ಎಂದೋ ಬಹಳ ತೆಳುವಾದ ಉತ್ತರಗಳನ್ನು ಕೊಡಬಹುದೇ ಹೊರತೂ, ಒಂದು ತರ್ಕಬದ್ಧವಾದ ಘನವಾದ ಉತ್ತರವನ್ನು ಕೊಡಲು ಬರುವುದಿಲ್ಲ. ಅಷ್ಟೇ ಅಲ್ಲ, ನಮ್ಮ ನಿತ್ಯಜೀವನದ ನೈತಿಕ ಮಸೂರದಿಂದ ನೋಡಿದರೆ ಇಂತಹ ಪ್ರಶ್ನೆಯೇ ಅಧಿಕಪ್ರಸಂಗದ್ದು ಎಂದು ಅನ್ನಿಸಿದರೂ ಆಶ್ಚರ್ಯವಿಲ್ಲ. ಅಂದರೆ ಒಟ್ಟಾರೆಯಾಗಿ, ನಮ್ಮ ದಿನನಿತ್ಯದ ನೈತಿಕ ಅನುಭವಗಳ ಆಧಾರದ ಮೇಲೆ ಸಾಮಾಜಿಕ ಆಚಾರಗಳಲ್ಲಿರುವ ಅನೌಚಿತ್ಯಗಳನ್ನು ತಾತ್ವಿಕವಾಗಿ ವಿಮರ್ಶೆ ಮಾಡಲು ಬರುವುದಿಲ್ಲ.

ಈಗ ಮನುಷ್ಯರ ಕುರಿತ ನಮ್ಮ ತಾತ್ವಿಕ ಚಿತ್ರಣಕ್ಕೆ ಪುನಃ ಹಿಂದಿರುಗೋಣ. ತಾತ್ವಿಕ ವಿಮರ್ಶೆಗೆ ಮಾತ್ರ ಸಾಮಾಜಿಕ ಆಚಾರಗಳಲ್ಲಿರುವ ಅನೌಚಿತ್ಯವನ್ನು ಆಮೂಲಾಗ್ರವಾಗಿ ವಿಮರ್ಶೆ ಮಾಡಲು ಸಾಧ್ಯ ಎಂದು ಹೇಳಿದೆವಲ್ಲ. ಅದು ಹೇಗೆ ಸಾಧ್ಯ? ಬಾಲ್ಯವಿವಾಹ, ಬಾಲಕಾರ್ಮಿಕ ಪದ್ಧತಿ, ಸ್ತ್ರೀಶೋಷಣೆ, ಇವನ್ನೆಲ್ಲಾ ಆಮೂಲಾಗ್ರವಾಗಿ ವಿಮರ್ಶಿಸುವುದು ಹೇಗೆ? ಮೊದಲನೆಯದಾಗಿ, ನಾವು ಇಲ್ಲಿ ಮಾಡುತ್ತಿರುವ ಬದಲಾವಣೆಯನ್ನು ಗಮನಿಸಿ. ನಿತ್ಯದಲ್ಲಿ ಹೇಳುವ ಹಾಗೆ ಬಾಲ್ಯವಿವಾಹ ಒಳ್ಳೆಯದಲ್ಲ ಎಂದಷ್ಟೇ ನಾವು ಹೇಳುತ್ತಿಲ್ಲ. ಅದನ್ನೂ ಮೀರಿ, ಬಾಲ್ಯವಿವಾಹ ಒಂದು ಅತಾರ್ಕಿಕವಾದ ಆಚರಣೆ ಎಂದು ಅದನ್ನು ಪುನಾರಚಿಸುತ್ತಿದ್ದೇವೆ. ಯಾಕೆ ಅತಾರ್ಕಿಕವೆಂದರೆ ಅದು

ಮನುಷ್ಯರ ಕುರಿತ ನಮ್ಮ ತಾತ್ವಿಕ ಚಿತ್ರಣಕ್ಕೇ ವ್ಯತಿರಿಕ್ತವಾದದ್ದು, ಅದಕ್ಕೆ. ಅದು ಅತಾರ್ಕಿಕ ಎಂದಮೇಲೆ, ಅದನ್ನು ಮುಂದುವರೆಸಿಕೊಂಡು ಬಂದಿರುವುದರ ಹಿಂದೆ ಮತ್ತಿನ್ನಾವುದೋ ತರ್ಕ ಇರಲೇಬೇಕು ತಾನೆ? ಆ ತರ್ಕ, ಅಥವಾ ಕುತರ್ಕ, ಯಾವ ರೀತಿಯದ್ದೆಂದರೆ, ಒಂದೋ, ಅದಕ್ಕೆ ನಮ್ಮ ಸರಿಯಾದ ತರ್ಕದ ಪರಿಚಯವಿಲ್ಲ. (ಅಂದರೆ ಬಾಲ್ಯವಿವಾಹವನ್ನು ಆಚರಿಸುವ ಸಂಸ್ಕೃತಿಗಳು ವಿಚಾರಹೀನ ಆಚಾರಗಳನ್ನು ಪಾಲಿಸಿಕೊಂಡು ಬಂದಿರುವ ಸಂಸ್ಕೃತಿಗಳು ಅಥವಾ ಬರ್ಬರ ಸಂಸ್ಕೃತಿಗಳು). ಹಾಗಲ್ಲದಿದ್ದ ಪಕ್ಷದಲ್ಲಿ, ಇಂತಹ ಆಚಾರಗಳನ್ನು ಪಾಲಿಸುವುದಕ್ಕೆ ಆ ಸಂಸ್ಕೃತಿಗಳಲ್ಲಿ ಯಾವುದೋ ಪಟ್ಟಭದ್ರ ಹಿತಾಸಕ್ತಿಗಳ ಕುಮ್ಮಕ್ಕು ಇರಲೇಬೇಕು. ಅಂದಮೇಲೆ, ಇಂತಹ ಸಂಸ್ಕೃತಿಗಳು ಭ್ರಷ್ಟ ಸಂಸ್ಕೃತಿಗಳು.

ಒಟ್ಟಾರೆಯಾಗಿ ಹೇಳಬೇಕೆಂದರೆ, ಅನುಚಿತವಾದ ಸಾಮಾಜಿಕ ಆಚಾರಗಳಿಗೆ ಕಾರಣಗಳನ್ನು ಹುಡುಕಬೇಕು. ಮತ್ತು ಅಂತಹ ಕಾರಣಗಳು ನಮಗೆ ಆಳದಲ್ಲಿ ಒಂದು ಬರ್ಬರ ಅಥವಾ ಭ್ರಷ್ಠ ಸಂಸ್ಕೃತಿಯ ಇರುವಿಕೆಯನ್ನು ತೋರಿಸುತ್ತವೆ. ಸಾಮಾಜಿಕ ಜೀವನದ ಕುರಿತ ಜ್ಞಾನವನ್ನು ಬೆಳೆಸುವುದು ಎಂದರೆ ಸಮಾಜಗಳ ಆಚಾರಗಳನ್ನು ನಮ್ಮ ತಾತ್ವಿಕ ಚಿತ್ರಣದ ಆಧಾರದ ಮೇಲೆ ವಿಮರ್ಶಿಸುವುದು ಮತ್ತು ನಮ್ಮ ತಾತ್ವಿಕ ಚಿತ್ರಣಕ್ಕೆ ಅನುರೂಪವಾಗಿ ಹೊಸ ಸಾಮಾಜಿಕ ಆಚಾರಗಳು ಮತ್ತು ವ್ಯವಸ್ಥೆಗಳನ್ನು ಕಟ್ಟುವುದು. ಇದು ಸಾಮಾಜಿಕ ವಿಮರ್ಶೆಯ ಒಂದು ಬಹಳ ಶಕ್ತಿಯುತವಾದ ಮತ್ತು ಆಧುನಿಕ ಯುಗದಲ್ಲಿ ಬಹಳ ಸರ್ವೇಸಾಮಾನ್ಯವಾದ ಮಾದರಿ. ಈ ವಿಮರ್ಶೆಯ ಒಂದು ವಿಚಿತ್ರ ಪರಿಣಾಮದ ಕುರಿತು ನಂತರ ಗಮನ ಹರಿಸೋಣ. ಸದ್ಯಕ್ಕೆ ತಾತ್ವಿಕವಲ್ಲದ ಇನ್ನೊಂದು ವಿಮರ್ಶೆ, ಸಾಧಾರಣ ವಿಮರ್ಶೆ ಎಂದು ಕರೆಯಬಹುದಾದರೆ, ಅಂತಹ ಮಾದರಿಯ ವಿಮರ್ಶೆಯ ಕುರಿತು ಒಂದೆರಡು ಮಾತುಗಳು.

ಸಾಧಾರಣ ವಿಮರ್ಶೆ

ನಾವು ಯಾವುದೇ ಆಚಾರವನ್ನು ವಿಮರ್ಶಿಸುವುದಕ್ಕೆ ಆಧಾರ ನಮ್ಮ ದಿನನಿತ್ಯದ ಇಷ್ಟಾನಿಷ್ಟಗಳು. ಕಳ್ಳತನ, ಕೊಲೆ, ಸುಳ್ಳು, ಇವುಗಳೆಲ್ಲಾ ನಮಗೆ ಅನಿಷ್ಟವೆಂದು ತೋರುತ್ತದೆ. ಹಾಗೆಯೇ ಮುಂದುವರೆದು, ಮಕ್ಕಳನ್ನು ಜೀತಕ್ಕೆ ದೂಡುವುದೂ ಅನಿಷ್ಟವೆಂದು ತೋರುತ್ತದೆ. ಇಲ್ಲೆಲ್ಲಾ ಅನಿಷ್ಟದ ಅನುಭವ ಮೂಲಭೂತವಾದದ್ದು. ಅಂದರೆ, ಕೊಲೆಯನ್ನು ಇಷ್ಟವೆಂದು ಪರಿಗಣಿಸಲು ಸಾಧ್ಯವಿಲ್ಲ. ಯಾರಾದರೂ ಹಿಂಸೆಯನ್ನು ಅನುಭವಿಸುತ್ತಿದ್ದರೆ ಅದನ್ನು ಇಷ್ಟವೆಂದು ಪರಿಗಣಿಸಲು ಸಾಧ್ಯವಿಲ್ಲ. ಹಾಗೆ ಹಿಂಸೆಯನ್ನು, ಕೊಲೆಯನ್ನು ಇಷ್ಟವೆಂದು

ಪರಿಗಣಿಸುವವರು ವಿಕ್ಷಿಪ್ತ ಮನಸ್ಸಿನ ಜನ. ಆದರೆ, ಕಳ್ಳತನವನ್ನು ಅನಿಷ್ಟವೆಂದು ಏಕೆ ಪರಿಗಣಿಸಬೇಕು ಎನ್ನುವ ಪ್ರಶ್ನೆ ಅರ್ಥವಿಲ್ಲದ್ದು. ಅದು ಅನಿಷ್ಟವೆಂದು ತೋರುವುದೇ ಒಂದು ಮೂಲಭೂತ ಅನುಭವ. ಅಂದರೆ ನಮ್ಮ ನೈತಿಕ ಇಷ್ಟಾನಿಷ್ಟಗಳು ಮೂಲಭೂತ ಸತ್ಯಗಳು. ಅವು ರೂಪಿತವಾಗಿರುವುದು ಕಾಲಾಂತರದ ಕಲಿಕೆಯ ಮೂಲಕ. ಹಾಗಾಗಿ, ಅವುಗಳ ಮೂಲ ಅದೃಷ್ಟವಾದದ್ದು. ಅಂದರೆ, ಅವುಗಳ ಕುರಿತು ಕಾರ್ಯಕಾರಣ ಸಂಬಂಧಗಳನ್ನು ಹುಡುಕುವುದರಿಂದ ಅವುಗಳ ಬಗೆಗಿನ ಜ್ಞಾನವೇನೂ ಹೆಚ್ಚಾಗುವುದಿಲ್ಲ. ಯಾಕೆ ಚದುರಂಗದಲ್ಲಿ ಕುದುರೆಯ ಕಾಯಿ ಮೂರು ಮನೆಗಳಷ್ಟೇ ನೆಗೆಯಬೇಕು ಎಂದು ಕೇಳಿದಂತೆ. ಹಾಗೆ ಕುದುರೆಯ ಕಾಯಿಯನ್ನು ನಡೆಸಲು ಕಲಿಯುವುದು ಅಗತ್ಯವೇ ಹೊರತೂ, ಯಾಕೆ ಅದು ಹಾಗೆ ನಡೆಯಬೇಕು ಎಂದು ಕೇಳುವುದರಿಂದ ಚದುರಂಗದ ಕುರಿತ ಜ್ಞಾನ ಹೆಚ್ಚಾಗುವುದಿಲ್ಲ. ಅಂತಹ ಪ್ರಶ್ನೆಗೆ ಉತ್ತರ ದೊರಕಿದರೂ ಅದಕ್ಕೂ ಚದುರಂಗದ ಆಟಕ್ಕೂ ಯಾವ ಸಂಬಂಧವೂ ಇಲ್ಲ.

ಇದರರ್ಥ, ನಾವು ಸಾಮಾಜಿಕ ಆಚಾರವನ್ನು ವಿಮರ್ಶಿಸುವುದರ ಹಿಂದೆ ಒಂದು ಮಟ್ಟಿಗಿನ ಸಮಾನ ಸಂಸ್ಕಾರ ಕೆಲಸಮಾಡಿದೆ ಎಂದು. ಒಂದು ಸಂಗೀತ ಕಚೇರಿಯಲ್ಲಿ ಜನ ಯಾವುದೋ ರಾಗಾಲಪನೆಯನ್ನು ಕೇಳಿ ಅದು ಚೆನ್ನಾಗಿತ್ತು ಅಥವಾ ಚೆನ್ನಾಗಿರಲಿಲ್ಲ ಎಂದು ಹೇಳುವಾಗ ಒಂದು ಸಮಾನ ಸಂಸ್ಕಾರ ಕೆಲಸಮಾಡಿರುತ್ತದೆ. ಈ ಸಂಸ್ಕಾರದ ಹೊರತಾಗಿ ಸಂಗೀತದ ಕುರಿತ ನಿರ್ಣಯಗಳಿಗೆ ಯಾವುದೇ ಅರ್ಥವಿಲ್ಲ. ಉದಾಹರಣೆಗೆ, ಸಂಗೀತದ ಜ್ಞಾನವೇ ಇರದವನು ಧ್ವನಿಮುದ್ರಿಕೆಗಳ ಮಾರಾಟದ ಮಾಹಿತಿಯನ್ನು ಗಮನಿಸಿ ಇವರ ಸಂಗೀತ ಚೆನ್ನಾಗಿದೆ ಒಂದು ನಿರ್ಣಯಿಸಿದರೆ ಅದಕ್ಕೆ ಯಾವ ಬೆಲೆಯೂ ಇಲ್ಲ. ಧ್ವನಿಮುದ್ರಿಕೆಗಳ ಮಾರಾಟದ ಮಾಹಿತಿಯ ಮೇಲೆ ಇವರ ಸಂಗೀತ ಚೆನ್ನಾಗಿಲ್ಲದಿರಬಹುದು ಎಂದು ಊಹಿಸಬಹುದು. ಆದರೆ, ವಿಮರ್ಶೆ, ಸೌಂದರ್ಯಾಸ್ವಾದನೆ, ಒಂದು ಕಲಾಕೃತಿಯ ಬೆಲೆಕಟ್ಟುವುದು ಇವೆಲ್ಲಾ ಊಹೆಯ ಮೂಲಕ ಮಾಡಬಹುದಾದ ಥಿಯರೆಟಿಕಲ್ ಕೆಲಸವಲ್ಲ. ಅದು ಸಂಸ್ಕಾರದ ಮೂಲಕ ಮಾಡಬೇಕಾದ ಪ್ರಾಕ್ಟಿಕಲ್ ಕೆಲಸ. ಹಾಗೆಯೇ ಸಾಮಾಜಿಕ ವಿಮರ್ಶೆಯೂ ಒಂದು ಪ್ರಾಕ್ಟಿಕಲ್ ಕೆಲಸ. ಅಂದರೆ, ಒಂದು ಸಮಾಜದ ಸಂಸ್ಕಾರಗಳನ್ನು ರೂಢಿಸಿಕೊಂಡಿರುವವನಿಗೆ ಸ್ವಾಭಾವಿಕವಾಗಿ ತೋರುವ ಸರಿತಪ್ಪುಗಳ, ಇಷ್ಟಾನಿಷ್ಟಗಳ ವಿವೇಕವೇ ಸಾಮಾಜಿಕ ವಿಮರ್ಶೆಯ ಮೂಲ.

ಈಗ ತಾತ್ವಿಕ ವಿಮರ್ಶೆಗೂ ಸಾಧಾರಣ ವಿಮರ್ಶೆಗೂ ಇರುವ ಕೆಲವು ವ್ಯತ್ಯಾಸಗಳನ್ನು ಗಮನಿಸಿ. ತಾತ್ವಿಕ ವಿಮರ್ಶೆ ಸಮಾಜ ಎನ್ನುವ ಒಂದು

ಅಮೂರ್ತ ವ್ಯವಸ್ಥೆಯನ್ನು ಕಲ್ಪಿಸಿಕೊಳ್ಳಬೇಕು. ಅಂದರೆ, ತಾತ್ವಿಕ ವಿಮರ್ಶೆ ವಿಮರ್ಶಿಸುತ್ತಿರುವುದು ಕೇವಲ ಯಾವುದೋ ಒಂದು ಆಚಾರವನ್ನೋ ಅಥವಾ ವಿಚಾರವನ್ನೋ ಅಲ್ಲ. ಅದು ವಿಮರ್ಶಿಸುತ್ತಿರುವುದು ಈ ನಿರ್ದಿಷ್ಟ ಆಚಾರವನ್ನು ಆಗುಮಾಡಿದ, ಅಥವಾ ಆ ನಿರ್ದಿಷ್ಟ ವಿಚಾರವನ್ನು ಹುಟ್ಟುಹಾಕಿದ ಒಂದು ವ್ಯವಸ್ಥೆಯನ್ನು, ಅಂದರೆ, ಒಟ್ಟು ಒಂದು ಸಮಾಜವನ್ನು. ಹೀಗೆ ನೋಡಿದರೆ ಸಮಾಜ ಎಂದರೆ ನಿಜಕ್ಕೂ ಆಧುನಿಕ ಚಿಂತನೆಯಲ್ಲಿ ಏನು ಎಂದು ತಿಳಿಯುತ್ತದೆ. ಸಮಾಜ ಎಂದರೆ ಕಣ್ಣಿಗೆ ಕಾಣುವ ಊರು, ಕೇರಿ, ರಸ್ತೆ, ದೇಶ ಇಂತಹದ್ದೇ ಇನ್ನೊಂದು ಜಾಗವಲ್ಲ ತಾನೆ? ಅದು ಮನುಷ್ಯರ ವ್ಯವಹಾರಗಳನ್ನು ವಿವರಿಸಲು ಇರುವ ಒಂದು ಪರಿಕಲ್ಪನೆ. ಯಾವ ರೀತಿಯ ಪರಿಕಲ್ಪನೆ? ಮನುಷ್ಯ ವ್ಯವಹಾರಗಳನ್ನು ನಾವು ಈಗ ಹೇಳಿದಂತಹ ತಾತ್ವಿಕ ವಿಮರ್ಶೆಗೆ ಒಡ್ಡುವುದಕ್ಕೆ ಬೇಕಾದ ಒಂದು ಪರಿಕಲ್ಪನೆ. ಅಂದಮೇಲೆ ಸಮಾಜ ಎನ್ನುವುದು ಒಂದು ವಸುನಿಷ್ಟವಾದ, ಅಂದರೆ ಎಂಪಿರಿಕಲ್ ಆದ, ವೈಜ್ಞಾನಿಕ ಪರಿಕಲ್ಪನೆಯೇ ಅಲ್ಲ. ಅದು ಮೌಲ್ಯಮಾಪಕವಾದ, ಅಂದರೆ ಇವ್ಯಾಲ್ಯುಯೇಟಿವ್ ಆದ ಪರಿಕಲ್ಪನೆ.

ಸಾಧಾರಣ ವಿಮರ್ಶೆಗೆ ಸಮಾಜ ಎನ್ನುವ ರೀತಿಯ ಪರಿಕಲ್ಪನೆ ಬೇಕಿಲ್ಲ. ನಾವು ದಿನನಿತ್ಯದಲ್ಲಿ ಅನಿಷ್ಟಗಳ ಕುರಿತು ವಿಮರ್ಶಿಸುವಾಗ, ನಮ್ಮ ಗುರಿ ಸಮಾಜವಲ್ಲ. ಬದಲಾಗಿ, ನಮ್ಮ ಗುರಿ ಯಾವುದೋ ಒಂದು ನಿರ್ದಿಷ್ಟ ಕ್ರಿಯೆ ಅಥವಾ ಆಚಾರ. ಅದೂ, ನಮ್ಮ ಸಂಸ್ಕಾರಗಳಿಗೆ ವ್ಯತಿರಿಕ್ತವಾದದ್ದು ಎನ್ನುವ ಕಾರಣಕ್ಕೆ ನಾವು ವಿಮರ್ಶಿಸುವ ಆಚಾರ. ಇಂತಹ ವಿಮರ್ಶೆ ನಮ್ಮ ಕಣ್ಣೆದುರಿಗಿರುವ ಅನಿಷ್ಟವನ್ನು ಒಂದು ಪರಿಹರಿಸಬೇಕಾದ ಸಮಸ್ಯೆಯನ್ನಾಗಿ ನೋಡುತ್ತದೆ, ಅಥವಾ ಅನುಭವಿಸಬೇಕಾದ ಗ್ರಹಚಾರದಂತೆ ನೋಡುತ್ತದೆ. ಉದಾಹರಣೆಗೆ, ಹೆಂಗಸರ ವಿರುದ್ಧ ಅತ್ಯಾಚಾರಗಳು ಹೆಚ್ಚಾದಾಗ ಜನ ಪರಿಪರಿಯಾದ ಪರಿಹಾರಗಳನ್ನು ಸೂಚಿಸುವುದನ್ನು ನೋಡಿರುತ್ತೀರಿ. ಅದರಲ್ಲಿ ಹೆಚ್ಚಿನ ಪರಿಹಾರಗಳು ಕೆಲಸಕ್ಕೆ ಬಾರದ ಪರಿಹಾರಗಳಾಗಿರಬಹುದು. ಆದರೆ ಅದು ಮುಖ್ಯವಲ್ಲ. ಮುಖ್ಯವೇನೆಂದರೆ, ಸಾಧಾರಣ ವಿಮರ್ಶೆ ಮಾಡುವ ಜನ ಆ ಸಮಸ್ಯೆಯನ್ನು ಪರಿಹಾರ-ಕೇಂದ್ರಿತವಾಗಿ ನೋಡುತ್ತಿರುತ್ತಾರೆ ಎನ್ನುವುದು. ಆದರೆ, ಅದೇ ತಾತ್ವಿಕ ವಿಮರ್ಶೆ ಒಂದು ಸಾಮಾಜಿಕ ಅನಿಷ್ಟವನ್ನು ಪರಿಹರಿಸಬೇಕಾದ ಸಮಸ್ಯೆ ಎನ್ನುವ ದೃಷ್ಟಿಯಿಂದ ನೋಡುವುದಿಲ್ಲ. ಬದಲಾಗಿ ಸಮಾಜದಲ್ಲಿರುವ ಯಾವುದೋ ಒಂದು ದೋಷದ ಕಾರಣದಿಂದ ಉಂಟಾದ ಒಂದು ವ್ಯವಸ್ಥಿತ ಪರಿಣಾಮ ಎನ್ನುವಂತೆ ನೋಡುತ್ತದೆ. ಉದಾಹರಣೆಗೆ, ಮಹಿಳೆಯರ ಮೇಲಿನ ಅತ್ಯಾಚಾರ ಹೆಚ್ಚಾದರೆ, ಅದು ವರ್ಗಗಳ ನಡುವಿನ

ಬದಲೀ ಸಮರ ಎನ್ನುವಂತೆ, ಅಥವಾ, ಪಿತೃಪ್ರಧಾನ ವ್ಯವಸ್ಥೆಗಳು ಅನುಭವಿಸುತ್ತಿರುವ ಮುಖಭಂಗಕ್ಕೆ ಪ್ರತಿಕ್ರಿಯೆ ಎನ್ನುವಂತೆ ನೋಡುತ್ತವೆ. ದೇಹದಲ್ಲಿ ಉಂಟಾಗುವ ಯಾವುದೋ ದೋಷದ ಕಾರಣದಿಂದ ಕಾಯಿಲೆಯಂತಹ ವ್ಯವಸ್ಥಿತ ಪರಿಣಾಮಗಳು ಉಂಟಾಗುತ್ತವಲ್ಲ ಹಾಗೆ. ಇಂಥದೇ ನಿರ್ದಿಷ್ಟ ಕಾರಣಗಳನ್ನು ತಾತ್ವಿಕ ವಿಮರ್ಶೆ ಸೂಚಿಸುತ್ತದೆ ಎಂದು ನನ್ನ ವಾದವಲ್ಲ. ಆದರೆ, ಅದು ಸೂಚಿಸುವ ಕಾರಣಗಳು ಸುಮಾರು ಈ ರೀತಿ ಇರುತ್ತದೆ ಎನ್ನುವುದಷ್ಟೇ ಇದರ ಅರ್ಥ. ಇಲ್ಲೂ ಪರಿಹಾರವಿದೆ. ಆದರೆ ಇದು ಯಾವುದನ್ನು ಗುರಿಯಾಗಿಸಿಕೊಂಡ ಪರಿಹಾರ ಎಂದು ಕೇಳಿದರೆ, ಒಂದು ಮೂರ್ತವಾದ ನಿಖರವಾದ ಉತ್ತರ ಸಾಧ್ಯವೇ ಇಲ್ಲ.

ಗಾಂಧೀ ಮಾದರಿಯ ಸಾಮಾಜಿಕ ವಿಮರ್ಶೆ

ಈಗ ನಮ್ಮ ಮೂಲಭೂತ ಪ್ರಶ್ನೆಗೆ ಮತ್ತೆ ಹಿಂದಿರುಗೋಣ. ಗಾಂಧಿ ನಡೆಸುತ್ತಿದ್ದ ಸಾಮಾಜಿಕ ವಿಮರ್ಶೆ ಹಿಂದೂ ಸಂಪ್ರದಾಯಗಳ ಸಾಧಾರಣ ವಿಮರ್ಶೆಯೇ ಹೊರತೂ ತಾತ್ವಿಕ ವಿಮರ್ಶೆಯಲ್ಲ. ತಾತ್ವಿಕ ವಿಮರ್ಶೆಗೂ ಹಿಂಸೆಗೂ ಒಂದು ಅವಿನಾಭಾವ ಸಂಬಂಧವಿದೆ. ಈ ಸಂಬಂಧ ಗಾಂಧಿಯನ್ನು ಹೊರತುಪಡಿಸಿ ಇನ್ನು ಹೆಚ್ಚಿನ ಚಿಂತಕರಿಗೇ ಅರ್ಥವೇ ಆಗಿಲ್ಲ ಎಂದರೂ ನಡೆಯುತ್ತದೆ. ತಾತ್ವಿಕ ವಿಮರ್ಶೆ ವ್ಯಕ್ತಿಯ ದೋಷವನ್ನು ಒಂದು ರೋಗದ ರೀತಿಯಲ್ಲಿ ನೋಡುತ್ತದೆ. ಅಂದರೆ ಅಷ್ಟರ ಮಟ್ಟಿಗೆ, ಯಾವ ವ್ಯಕ್ತಿಗಳು ಮತ್ತು ಸಮುದಾಯಗಳನ್ನು ಉದ್ದೇಶಿಸಿ ಈ ವಿಮರ್ಶೆ ಇದೆಯೋ ಅದು ಆ ವ್ಯಕ್ತಿಗಳ ಅನುಭವದ ಭಾಷೆಯಲ್ಲಿಲ್ಲ. ಬದಲಾಗಿ, ಮನುಷ್ಯತ್ವದ ಕುರಿತ, ಆಧುನಿಕ ನಾಗರಿಕ ಸಮಾಜದ ಕುರಿತ ಯಾವುದೋ ಒಂದು ತತ್ವದ ಭಾಷೆಯಲ್ಲಿದೆ. ಕೇವಲ ಬೇರೆ ರೀತಿಯ ಔಪಚಾರಿಕ ಭಾಷೆಯಲ್ಲಿದೆ ಎನ್ನುವುದಷ್ಟೇ ಆಗಿದ್ದರೆ ಅಂತಹ ಕಷ್ಟವಾಗುತ್ತಿರಲಿಲ್ಲ. ಅದಕ್ಕೂ ಮಿಗಿಲಾಗಿ, ಆ ಭಾಷೆ ಅನುಭವವನ್ನೇ ನಿರಾಕರಿಸುವಂತಿದೆ. ಒಬ್ಬ ಹೆಣ್ಣುಮಗಳ ಮೇಲೆ ಅತ್ಯಾಚಾರಕ್ಕೆ ಕಾರಣ ಪುರುಷಪ್ರಧಾನ ವ್ಯವಸ್ಥೆ ಎಂದು ಹೇಳಿದರೆ, ಆ ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ನನ್ನ ಅನುಭವದಲ್ಲಿ ಯಾವ ಸಂಪನ್ಮೂಲಗಳೂ ಇಲ್ಲ. ಅಷ್ಟೇ ಅಲ್ಲ, ಈ ಇಡೀ ವಿಮರ್ಶೆ ನಿಂತಿರುವುದೇ ನನ್ನ ಅನುಭವಕ್ಕೆ ಅತೀತವಾದ ವಿವರಣಾ ಚೌಕಟ್ಟುಗಳ ಮೇಲೆ. ಸಂಗೀತದ ಬಗ್ಗೆ ಮೊದಲೇ ಕೊಟ್ಟ ಉದಾಹರಣೆಯನ್ನು ಇಟ್ಟುಕೊಂಡು ಹೇಳುವುದಾದರೆ, ಅದು ಧ್ವನಿಮುದ್ರಿಕೆಗಳ ಮಾರಾಟದ ಮಾಹಿತಿಯನ್ನು ಮಾತ್ರ ಆಧರಿಸಿ, ಸಂಗೀತಗಾರರ ಯೋಗ್ಯತೆಯನ್ನು ಅಳೆದಂತೆ. ನನ್ನ ಅನುಭವವನ್ನೇ ನಿರಾಕರಿಸುವುದರಿಂದ, ನಿಮ್ಮ ತಾತ್ವಿಕ ವಿಮರ್ಶಾ

ಮಾದರಿಯಲ್ಲಿ ಯಾವನೋ ಒಬ್ಬ ಅತ್ಯಾಚಾರಿಗೂ ಮತ್ತು ಅದೇ ಪುರುಷಪ್ರಧಾನ ವ್ಯವಸ್ಥೆಯ ಪ್ರತಿನಿಧಿಯಾದ ನನಗೂ ವ್ಯತ್ಯಾಸವೇ ಇಲ್ಲ.

ಸ್ವಲ್ಪ ವಿಷಯಾಂತರವಾದರೂ, ಒಂದು ತಮಾಶೆಯ ಕತೆ ಹೇಳುತ್ತೇನೆ. ನನ್ನ ದೂರದ ಅತ್ತೆಯೊಬ್ಬರು ವಯಸ್ಸಾದ ಮೇಲೆ ದೂರಶಿಕ್ಷಣದಲ್ಲಿ ಕನ್ನಡ ಎಂ.ಎ., ಪರೀಕ್ಷೆ ಕಟ್ಟಿದ್ದರು. ಚೋಮನ ದುಡಿ ಕಾದಂಬರಿಯ ಬಗ್ಗೆ ಇದ್ದ ಪರೀಕ್ಷೆಯ ನೋಟ್ಸು ಓದುತ್ತಾ ಒಂದು ದಿನ "ಈ ಪುರೋಹಿತಶಾಹಿಗಳು ಎಷ್ಟು ಕೆಟ್ಟವರು ಅಲ್ವಾ? ಬಡವರನ್ನು ಎಷ್ಟು ಹಿಂಸಿಸಿದ್ದಾರೆ ಪಾಪಿಗಳು" ಎಂದು ಹೇಳಿದರು. ನಾನು, "ಅಲ್ಲಾ ಅತ್ತೆ, ಈ ಪುರೋಹಿತಶಾಹಿಗಳು ಅಂದರೆ ಯಾರು ಅಂದುಕೊಂಡಿರಿ? ನೀವೇ." ಎಂದು ಹೇಳಿದೆ. ಅವರಿಗೆ ಆದ ದಿಗ್ಭ್ರಮೆ ಅಷ್ಟಿಷ್ಟಲ್ಲ. ನನ್ನ ಮಾತು ಅವರಿಗೆ ಅರ್ಥವಾದರೂ ಅದು ಸತ್ಯ ಎಂದು ಅವರಿಗೆ ಅನ್ನಿಸಲೇ ಇಲ್ಲ. ತಾತ್ವಿಕ ವಿಮರ್ಶೆ ನಮ್ಮ ನೈತಿಕ ತಿಳುವಳಿಕೆಯನ್ನು ವಿಕೃತಗೊಳಿಸುವುದು ಹೀಗೆ.

ದಲಿತರಿಗೆ ನಮ್ಮ ಹೋಟೇಲಿನಲ್ಲಿ ಪ್ರವೇಶವಿಲ್ಲ ಎನ್ನುವುದು ಆಧುನಿಕ ಪ್ರಪಂಚದಲ್ಲಿ ಬಹಳ ಖೇದದ ಸಂಗತಿ. ಬಡ ಕೂಲಿಕಾರರಾದ ದಲಿತರನ್ನು ದೊಡ್ಡ ಜಮೀನ್ದಾರರು ಅಮಾನುಷವಾಗಿ ನಡೆಸಿಕೊಳ್ಳುತ್ತಾರೆ ಎನ್ನುವುದು ನೀಚತನದ ಪರಮಾವಧಿ. ಆದರೆ, ಅದಕ್ಕೆ ಕ್ರಮವಾಗಿ ಪುರೋಹಿತಶಾಹಿ ಮತ್ತು ಊಳಿಗಮಾನ್ಯ ಪದ್ಧತಿ ಕಾರಣ ಎನ್ನುವದು ನಮ್ಮ ಅನುಭವವನ್ನೇ ನಾಶ ಮಾಡುವ ಉಪಕ್ರಮ. ದಲಿತರನ್ನು ದ್ವೇಷಿಸುವುದು, ಕಷ್ಟಕ್ಕೆ ಬಿದ್ದ ಅವರ ವಿರುದ್ಧವೇ ಮೇಲಾಟ ಮಾಡುವುದು ಇಂತಹ ಹಿಂಸೆಯೇ ತಾತ್ವಿಕ ವಿಮರ್ಶೆಗೆ ಪ್ರತ್ಯುತ್ತರವಾಗುತ್ತದೆ. ಭಾರತದಲ್ಲಿರುವ ಅನಿಷ್ಟಗಳಲ್ಲಿ ಅಸ್ಪೃಶ್ಯತೆಯೂ ಒಂದು ಎಂದು ಹೇಳುವುದು ಸಾಧಾರಣ ವಿಮರ್ಶೆಯ ಮಾದರಿ. ಆದರೆ, ಅದಕ್ಕೆ ಕಾರಣ ವರ್ಣಾಶ್ರಮ ಧರ್ಮ ಎನ್ನುವದು ತಾತ್ವಿಕ ವಿಮರ್ಶೆಯ ಮಾದರಿ. ಮೊದಲನೆಯದು ನಮ್ಮ ನೈತಿಕ ಬುದ್ಧಿಯನ್ನು ಪ್ರಚೋದಿಸುತ್ತದೆ. ಎರಡನೆಯದ್ದು ಹಿಂಸೆಯನ್ನು ಪ್ರಚೋದಿಸುತ್ತದೆ.

ಗಾಂಧಿ ಒಂದನ್ನು ಹೇಳಿ ಮತ್ತೊಂದನ್ನು ಬಿಟ್ಟದ್ದಲ್ಲ. ನಮ್ಮ ನೈತಿಕ ಬುದ್ಧಿಯನ್ನು ಪ್ರಚೋದಿಸಿ, ಹಿಂಸೆಯನ್ನು ವರ್ಜಿಸಿದ್ದು. ಸಾಧಾರಣ ವಿಮರ್ಶೆಯ ಧರ್ಮವನ್ನು ಪಾಲಿಸಿ, ತಾತ್ವಿಕ ವಿಮರ್ಶೆಯ ಕ್ರಮವನ್ನು ತಿರಸ್ಕರಿಸಿದ್ದು.

ಅನ್ವೇಷಿಯ ಟಿಪ್ಪಣಿ

ಮೀರಕ್ಕನೊಂದಿಗೆ ಒಂದು ದಿನ

–ಸುಘೋಷ್ ಕೌಲಗಿ

ಅನೇಕ ದಿನಗಳಿಂದ ನನ್ನಲ್ಲೊಂದು ಬಯಕೆ ಇತ್ತು. ಎಂದಾದರೊಂದು ದಿನ ಮೀರಕ್ಕನನ್ನು ನೋಡಬೇಕು ಎಂಬುದೇ ಆ ಬಯಕೆ. ಅವರಿರುವುದು ನಮ್ಮೂರಿಗೆ ದೂರದ ಮುಧೋಳದಲ್ಲಿ. ಆಗಾಗ ಅವರ ಸಮಾಚಾರ ಕಿವಿಗೆ ಬೀಳುತ್ತಲೇ ಇರುತ್ತಿತ್ತು. ಅವರು ಯಾವಗಲೊಮ್ಮೆ ದಾದಾನಿಗೆ ಪತ್ರ ಬರೆಯುತ್ತಿದ್ದರು. “ಅಣ್ಣ ಸುರೇಂದ್ರ ಹೇಗಿದ್ದೀರಿ? ನಿಮ್ಮ ಸಂಸ್ಥೆಯ ಚಟುವಟಿಕೆಗಳು ಹೇಗೆ ನಡೆಯುತ್ತಿವೆ?” ಎಂದು ಕೇಳುತ್ತಿದ್ದರು. ಮತ್ತು ತಮ್ಮ ‘ವಾತ್ಸಲ್ಯಧಾಮ’ದ ಇತ್ತಿಚಿನ ಚಟುವಟಿಕೆಗಳ ಬಗ್ಗೆ ಬರೆಯುತ್ತಿದ್ದರು. ಇಡೀ ಪತ್ರದಲ್ಲಿ ಕಾಣುತ್ತಿದ್ದದ್ದು ಅಪಾರವಾದ ಪ್ರೀತಿ ಮತ್ತು ಒಂದೇ ವಿಚಾರಕ್ಕಾಗಿ ಕೆಲಸ ಮಾಡುತ್ತಿರುವವರ ನಡುವಿನ ಬಾಂಧವ್ಯ. ವಾತ್ಸಲ್ಯಧಾಮದ ಹೆಸರೇ ನಮ್ಮನ್ನು ಆಶ್ರಮ ಜೀವನದ ಒಂದು ಕಾಲ್ಪನಿಕ ಲೋಕಕ್ಕೆ ಕರೆದೊಯ್ಯುತ್ತಿತ್ತು. ಇಷ್ಟಾದರೂ ಮೀರಕ್ಕನ ಪೂರ್ಣ ಪರಿಚಯ ಮತ್ತು ಸಾಂಗತ್ಯ ನಮಗೆ ದೊರೆಯಲಿಲ್ಲ.

ಮೊನ್ನೆ ಇದ್ದಕ್ಕಿದ್ದ ಹಾಗೆ ವಾತ್ಸಲ್ಯಧಾಮಕ್ಕೆ ಹೊರಟುಬಿಟ್ಟೆ. ಅಲ್ಲಿಗೆ ಹೋದ ನಂತರ ಎಷ್ಟು ಬೇಗ ಮೀರಕ್ಕನನ್ನು ನೋಡುತ್ತೇನೋ ಎಂಬ ತವಕ. ವರಾಂಡದಲ್ಲಿ ಕುಳಿತಿದ್ದಾಗ, ಮೀರಕ್ಕ ಎನ್ನುವ ಜೀವಿ ಯಾವಾಗ ಕಾಣಿಸಿ ಕೊಳ್ಳುವುದೋ, ಅದು ನನ್ನ ಕಲ್ಪನೆಯ ಮೀರಕ್ಕನಂತೆಯೇ ಇರುತ್ತದೊ ಹೇಗೋ ಎಂಬ ಯೋಚನೆಗಳು ಮನಸ್ಸಿನಲ್ಲಿ ಸುಳಿಯುತ್ತಿದ್ದವು. ನಮ್ಮನ್ನು ಎಂದೂ ನೋಡಿಲ್ಲದ ಮೀರಕ್ಕ ನಮ್ಮನ್ನು ಹೇಗೆ ಕಾಣುವರೋ ಎಂಬ ಆತಂಕದೊಂದಿಗೆ ಅವರು ಹೊರಬರಬಹುದಾದ ಅಡಿಗೆ ಮನೆಯ ಬಾಗಿಲಕಡೆಗೆ ನೋಡುತ್ತಾ ಕುಳಿತಿದ್ದೆ. ಬಾಗಿದ ಬೆನ್ನಿನೊಂದಿಗೆ, ಕೋಲೂರಿಕೊಂಡು ನಿಧಾನವಾಗಿ ನಮ್ಮೆಡೆಗೆ ಮೀರಕ್ಕ ನಡೆದು ಬಂದರು. ಕನ್ನಡಕದೊಳಗಿಂದ ನಮ್ಮನ್ನು ನೋಡಿ ಒಂದು ಮುಗುಳುನಗೆಯನ್ನು ಬೀರಿದರು. ಅದೆಷ್ಟು ಸಹಜವಾದ ನಡುವಳಿಕೆ ಅವರದಾಗಿತ್ತು ಎಂದರೆ ನಮ್ಮ ನಡುವಿನ ಎಲ್ಲ ಬಗೆಯ ದೂರಗಳು ಕ್ಷಣದಲ್ಲಿ ಕರಗಿ ಮೀರಕ್ಕ ನಮ್ಮವರೇ ಆಗಿಬಿಟ್ಟರು. ನಮ್ಮ ದೊಡ್ಡಮ್ಮನೋ, ಚಿಕ್ಕಜ್ಜಿಯೋ ಅಥವಾ ನಮ್ಮೆಲ್ಲ

ಸಿಟ್ಟು, ಸಂತೋಷ, ಅಕ್ಕರೆ, ಮುನಿಸುಗಳನ್ನು ಒಪ್ಪುತ್ತಲೇ ನಮ್ಮನ್ನು ಮುದ್ದಿನಲ್ಲಿ ಅದ್ದುವ ಒಂದು ಹಿರೀ ಜೀವದಂತೆ ಎದ್ದು ಬಂದರು.

ಅಲ್ಲಿಂದ ಮುಂದೆ ವಾತ್ಸಲ್ಯಧಾಮ ನಮ್ಮ ಮನೆಯೇ ಆಯಿತು. ಅಲ್ಲಿಯ ಇಡೀ ವಾತಾವರಣದಲ್ಲಿ ಯಾವುದೂ ನಮಗೆ ಅಪರಿಚಿತ ಎನಿಸಲೇ ಇಲ್ಲ. ಅಲ್ಲಿನ ಯಾವ ಪದಾರ್ಥಗಳೂ ಹೆಚ್ಚಿನ ಕಾಳಜಿಯನ್ನು ಬೇಡದೆ, ನಮ್ರವಾಗಿ ತಮ್ಮ ಅಗತ್ಯವನ್ನು ಸಾರುತ್ತಾ ಹಾಗೂ ಅಲ್ಲಿರುವದರಿಂದ ತಮಗೆ ದಕ್ಕಿರುವ ಧನ್ಯತೆಯನ್ನು ಹೊಳೆಯಿಸುತ್ತಿದ್ದವು. ಇಡೀ ಮನೆಯಲ್ಲಿ ಒಡಾಡಿದಾಗ ಅಕ್ಕಪಕ್ಕದಲ್ಲೆಲ್ಲಾ ನಮ್ಮ ಬಂಧುಗಳೇ ಇದ್ದು ಈಗ ತಾನೆ ಮಾತ–ಮಾತನಾಡುತ್ತಾ ಅಲ್ಲಿ ಇಲ್ಲಿ ಸುತ್ತುಕೆಲಸದಲ್ಲಿ ಮರೆಯಾಗಿದ್ದಾರೇನೋ ಅನಿಸತೊಡಗಿತು. ಅಲ್ಲಿನ ಸಗಣಿ ಸಾರಿಸಿದ, ಅಗತ್ಯವಿರುವಷ್ಟೆ ಪರಿಕರಗಳಿರುವ ಸರಳವಾದ ಅಡಿಗೆಮನೆಯನ್ನು ದಾಟಿ ಹಿತ್ತಲಿಗೆ ಹೋಗಿ ಒಂದು ದೊಡ್ಡ ರಾಮಫಲ ಮರದ ನೆರಳಿನಲ್ಲಿ ತಣ್ಣನೆಯ ನೀರಿನಲ್ಲಿ ಕೈಕಾಲು ತೊಳೆದು ಹಾಗೇ ಕಟ್ಟೆಯ ಮೇಲೆ ಕೂತಾಗ, ಗೌರಿ (ನನ್ನ ಮಗಳು) ಮತ್ತು ಸಮೀಪ(ನನ್ನ ಮಗ) ಇಬ್ಬರೂ ಅಲ್ಲಿದ್ದ ಬೆಕ್ಕಿನ ಮರಿಗಳನ್ನು ಓಡಾಡಿಸುತ್ತಾ ಹಿಡಿದುಕೊಂಡು ಮುದ್ದಿಸಿ ಆಟವಾಡುತ್ತಿದ್ದರು. ಕೊಟ್ಟಿಗೆ ಮನೆಯಲ್ಲಿ ಮೂರು ಹಸುಗಳು ತಣ್ಣನೆಯ ಕಪ್ಪನೆಯ ನೆರಳಿನಲ್ಲಿ ಜೋಳದ ದಿಂಡನ್ನು ಸವಿಯುತ್ತಾ ಮೆಲಕು ಹಾಕುತ್ತಾ ಮಲಗಿದ್ದವು. ಅಲ್ಲಿನ ಒಂದು ಹಸು ಅನೇಕ ವರ್ಷಗಳಿಂದ ಕರುಹಾಕುವುದನ್ನು ನಿಲ್ಲಿಸಿದ್ದರೂ ಬಹುಷಃ ವಾತ್ಸಲ್ಯಧಾಮದ ಆಶ್ರಯದ ಋಣ ಸಂದಾಯಿಸಲೋ ಎಂಬಂತೆ ದಿನಾಲೂ ಒಂದಷ್ಟು ಹಾಲು ಕೊಡುವುದನ್ನು ಮಾತ್ರ ತಪ್ಪಿಸಿಲ್ಲ. ಹಿಂದಿನ ಹೊಲದಲ್ಲಿ ನವಣೆಯ ತೆನೆಗಳು ತಲೆದೂಗುತ್ತಾ ನಿಂತಿದ್ದವು. ಕೆಂಪು ಗುಬ್ಬಿಗಳು ತೆನೆಗಳಿಂದ ಹಾಲು ಭರಿತ ಕಾಳುಗಳನ್ನು ಕಿತ್ತು ತಿನ್ನುತ್ತಾ ಸೂರಿನಲ್ಲಿದ್ದ ಗೂಡಿಗೆ ಆಗಾಗ ಹಾರುತ್ತಿದ್ದವು. ಪಕ್ಕದಲ್ಲಿ ವಿನೋಬಾ ಭಾವೆಯವರ ತಾಯಿಯ ನೆನಪಿನಲ್ಲಿ ಕಟ್ಟಿರುವ ಕೃಷ್ಣನ ದೇವಸ್ಥಾನ, ನಿಃಸ್ವಾರ್ಥ ಕರ್ತವ್ಯದಲ್ಲಿ ಸಂಪೂರ್ಣವಾಗಿ ತೊಡಗಿದವರಿಗೆ ಲಭ್ಯವಾಗುವ ಅಭಯವನ್ನೂ, ಮನಃಶಾಂತಿಯನ್ನೂ ಧಾರಾಳವಾಗಿ ತೊಡಿಸುತ್ತಿತ್ತು.

ಸುತ್ತು ಹಾಕಿ ಪುನಃ ಮೀರಕ್ಕನನ್ನು ಹುಡುಕುತ್ತಾ ಹೋದಾಗ ಅವರು ತೋಟದಲ್ಲಿ ಕುಳಿತು ತರಕಾರಿ ಗಿಡಗಳ ಯೋಗಕ್ಷೇಮವನ್ನು ನೋಡುತ್ತಿದ್ದರು. ಆ ದಿನದ ಊಟಕ್ಕೆ ಅವು ನೀಡಲಿರುವ ಕಾಯಿಪಲ್ಲೆಗಳನ್ನು ಸಂಗ್ರಹಿಸುತ್ತಿದ್ದರು. ಹಾಗೆಯೇ ನಮ್ಮೊಂದಿಗೆ ಬಂದು ತಮ್ಮ ಕೊಠಡಿಗೆ ಕರೆದೊಯ್ದರು. ಅದು ಒಂದು ಸರಳಾತಿಸರಳವಾದ ಕೋಣೆ. ಅಲ್ಲಿನ ಯಾವ ವಸ್ತುಗಳು ತಮ್ಮ

ಕಾರ್ಯನಿರ್ವಹಣೆಗೆ ಅನಗತ್ಯವಾದ ತೋರಿಕೆಯ ಯಾವ ಬಿರಿದು ಬಾವಲಿಗಳನ್ನೂ ಧರಿಸಿರಲಿಲ್ಲ. ಚೀಲ ಚೀಲ ಮಾತ್ರವಾಗಿತ್ತು. ಚಾಪೆ ಚಾಪೆ ಮಾತ್ರವಾಗಿತ್ತು. ಕಿಟಕಿ ಕಿಟಕಿ ಮಾತ್ರವಾಗಿತ್ತು. ಮಂಚ ಮಂಚಮಾತ್ರವಾಗಿತ್ತು. ಜೇಡರಬಲೆ ಬಲೆ ಮಾತ್ರವಾಗಿತ್ತು. ಹಾಗೆ ಎಲ್ಲವೂ ತಮ್ಮಷ್ಟಕ್ಕೆ ತಾವಾಗಿದ್ದವು. ಆದರೆ ಅವೆಲ್ಲಕ್ಕೂ ಒಂದು ನೈಜಾತೀತವಾದ ಇರುವಿಕೆ ಪ್ರಾಪ್ತವಾಗಿತ್ತು. ಹಾಗೆಯೇ ಮೀರಕ್ಕನೂ ಕೂಡ. ಹೇಳುವುದಾದರೆ ಈ ಮೀರಕ್ಕನಿಗೆ ಈಗ ತೊಂಭತ್ತು ವರ್ಷದ ಪ್ರಾಯ. ತನ್ನಷ್ಟಕ್ಕೆ ತಾನು ತನ್ನ ಕೆಲಸಗಳನ್ನು ಮಾಡಿಕೊಂಡು ಬೆಳಗ್ಗೆ ಮೂರುವರೆ-ನಾಲ್ಕು ಗಂಟೆಗೇ ಏಳುತ್ತಾರೆ. ಎದ್ದು ಎಲ್ಲರಿಗೂ ಅಡಿಗೆ ಮಾಡಿ, ಮುಖ್ಯವಾಗಿ ತಮ್ಮಲ್ಲೇ ಬೆಳೆದ ಕಾಳುಗಳಿಂದ ರೊಟ್ಟಿ ಮಾಡುತ್ತಾರೆ. ಉಪ್ಪು, ಖಾರ, ಎಣ್ಣೆ ಇಲ್ಲದ ಸರಳ ಸಾತ್ವಿಕ ಆಹಾರ. ಆಶ್ರಮದಲ್ಲಿರುವವರು ಮತ್ತು ಅತಿಥಿಗಳೂ ಒಟ್ಟಿಗೆ ಊಟ ಮಾಡುತ್ತಾರೆ. ಬೆಳಗ್ಗೆ ಆಶ್ರಮದ ಸ್ವಚ್ಛತೆಯಿಂದ ಪ್ರಾರಂಭವಾಗುವ ಚಟುವಟಿಕೆ, ಎಂಟುಗಂಟೆಗೆ ಉಪಹಾರ, ನಂತರ ಹೊಲದಲ್ಲಿ ದುಡಿಮೆ, ಮಧ್ಯಾಹ್ನದ ಊಟ ಮತ್ತು ವಿಶ್ರಾಂತಿಯ ನಂತರ ಪುನಃ ಕೆಲಸ, ಸಂಜೆ ಪ್ರಾರ್ಥನೆ ಮತ್ತು ಊಟದೊಂದಿಗೆ ಆ ದಿನದ ಕಾರ್ಯಕ್ರಮಗಳಿಗೆ ಶುಭರಾತ್ರಿ. ಈ ನಡುವೆ ಮೀರಕ್ಕ ತನ್ನ ಚರಖಾದಿಂದ ನೂಲನ್ನು ತೆಗೆಯುತ್ತಾರೆ. ಅವರ ಉಡುಪು ಕೇವಲ ಎರಡು ಖಾದಿ ವಸ್ತ್ರಗಳು. ಅವನ್ನು ಸೀರೆ ಎಂದು ಕರೆಯಲಾಗುತ್ತದೋ ಇಲ್ಲವೋ ಗೊತ್ತಿಲ್ಲ. ಆದರೆ ಅದು ಸ್ವತಃ ಮೀರಕ್ಕ ನೂತ ನೂಲಿನಿಂದ ಆದ ಬಟ್ಟೆ. ಕೇವಲ ನಮ್ಮ ಸಭ್ಯತೆಯ ಪ್ರತೀಕವಾದ ಆ ಸರಳ ಬಟ್ಟೆಯ ತುಂಡು ಉಂಟಾಗಿರುವ ಬಗೆಯಿಂದಲೇ ಮನುಷ್ಯನಿಗೆ ಇರುವ ಪದಾರ್ಥಗಳ ಹಂಗನ್ನು ಸಹಜ ವಾಸ್ತವತೆಯಲ್ಲಿ ಇರಿಸುವ ಮೂಲಕ ತನ್ನದೇ ಆದ ಘನತೆಯನ್ನು ಮೆರೆದಿದೆ.

ಮೀರಕ್ಕನ ಕುಟುಂಬದವರು ಒಂದೆರಡು ತಲೆಮಾರುಗಳಿಂದ ಧಾರವಾಡದಲ್ಲಿ ನೆಲಸಿದ್ದಾರೆ. 'ಕೊಪ್ಪೀಕರ' ಎನ್ನುವುರು ಅವರ ಮನೆತನದ ಹೆಸರು. ಧಾರವಾಡದಲ್ಲಿ ಅವರದ್ದು ಸಾಕಷ್ಟು ಸ್ಥಿತಿವಂತ ಕುಟುಂಬ. ಅವರ ತಂದೆಯವರ ವೃತ್ತಿಯಾದ ವ್ಯಾಪಾರ ಜೋರಾಗೇ ನಡೆದಿತ್ತು. ತುಂಬು ಕುಟುಂಬದಲ್ಲಿ ಬಂದ ಮೀರಕ್ಕನಿಗೆ ಯಾಕೋ ಲೌಕಿಕ ಆಕರ್ಷಣೆಗಳು ಮನಸೆಳೆಯುತ್ತಿರಲಿಲ್ಲ. ಹದಿಮೂರು ಹದಿನಾಲ್ಕರ ವಯಸ್ಸಿನಲ್ಲಿ ತಾನು ತನ್ನನ್ನು ಲೋಕಾರ್ಪಣೆ ಮಾಡಿಕೊಳ್ಳಬೇಕು. ಇಡೀ ಸಮಾಜವೇ ನನ್ನ ಕಾರ್ಯಾಗಾರ ಎನಿಸತೊಡಗಿತು. ಮೀರಕ್ಕನ ಆಶೋತ್ತರಗಳಿಗೆ ಪೋಷಕರು ಅಡ್ಡಿಬರಲಿಲ್ಲ. ಅಲ್ಲಿಂದ ಪ್ರಾರಂಭವಾದ ಮೀರಕ್ಕನ ಜೀವನ ಯಾತ್ರೆ ಗಾಂಧೀ-ವಿನೋಬಾರ

ಸರಳ, ಸ್ವಾವಲಂಬಿ ಜೀವನದ ವಿಚಾರಗಳಿಂದ ಪ್ರೇರಿತವಾಗಿ ಮುನ್ನಡೆಯಿತು. ಮೀರಕ್ಕನ ಕೆಲಸಕಾರ್ಯಗಳು ಅಪಾರ. ಅನೇಕವರ್ಷಗಳು ವಿನೋಬಾರವರು ಪವನಾರ್‌ನಲ್ಲಿ ಹೆಣ್ಣುಮಕ್ಕಳಿಗಾಗಿ ಪ್ರಾರಂಭಿಸಿದ ಬ್ರಹ್ಮವಿದ್ಯಾ ಮಂದಿರದ ಬೆನ್ನೆಲುಬಾಗಿ ಕಾರ್ಯನಿರ್ವಹಿಸಿದರು. ಭೂದಾನ ಚಳುವಳಿಯಲ್ಲಿ ಪಾಲ್ಗೊಂಡರು. ಗ್ರಾಮೋದ್ಧಾರದ ಹುಚ್ಚಿನಿಂದ ಕುಗ್ರಾಮಗಳಲ್ಲಿ ನೆಲೆಸಿದರು. ದಲಿತರೊಂದಿಗೆ ಜೀವಿಸುತ್ತಿಯೆ ಎಂದು ಮನೆಯವರಿಂದ ದೂರಲ್ಪಟ್ಟರು. ಬ್ರಹ್ಮಚಾರಿಯಾಗಿ ಊರೂರು ಅಲೆಯುತ್ತಾ ಒಂದೆಡೆ ನೆಲೆನಿಲ್ಲುವ ವಾಂಛಲ್ಯದಿಂದ ಹಲವರ ಸುಳ್ಳು ಆಶ್ವಾಸನೆಗಳಿಗೆ ಒಳಗಾಗಿ ಕೆಲವಾರು ಜಾಗಗಳ ನಂತರ ಈಗ ಮುಧೋಳದಲ್ಲಿ ವಾತ್ಸಲ್ಯಧಾಮವೆಂಬ ನಂಬುಗೆಯ ಸ್ಥಳದಲ್ಲಿ ನೆಲೆಯಾಗಿ ತಮ್ಮ ಕಾರ್ಯಗಳನ್ನು ಮುಂದುವರಿಸುತ್ತಿದ್ದಾರೆ. ಅನೇಕ ಹೆಣ್ಣುಮಕ್ಕಳು ಸ್ವಾಭಿಮಾನಿ ಜೀವನ ನಡೆಸಲು ನೆರವಾಗಿದ್ದಾರೆ. ಇವರೊಂದಿಗೆ ರಾಧಾಬಾಯಿ, ಲಕ್ಷ್ಮೀತಾಯಿ, ಭಾಗೀರಥಿ, ಚೆನ್ನಮ್ಮ ಹಳ್ಳಿಕೇರಿ, ರಮೇಶ್ ಭಯ್ಯಾ ಮುಂತಾದವರು ಆಶ್ರಮದ ಹೊಣೆಹೊತ್ತಿದ್ದಾರೆ. ಶಂಕರ ಉತ್ತೂರ, ತಮ್ಮಣ್ಣ ಬುದ್ನಿ ಮುಂತಾದ ಸರ್ವೋದಯ ಕಾರ್ಯಕರ್ತರು ಆಶ್ರಮಕ್ಕೆ ನೆರವಾಗುತ್ತಿದ್ದಾರೆ. ಅಂದಹಾಗೆ ಮೀರಕ್ಕನಿಗೆ ಬಿಜಾಪುರ ವಿಶ್ವವಿದ್ಯಾನಿಲಯುದವರು ಗೌರವ ಡಾಕ್ಟರೇಟ್ ಮತ್ತು ಸಾವಯವಕೃಷಿಯಲ್ಲಿನ ಸಾಧನೆಗಾಗಿ ಕರ್ನಾಟಕ ಸರ್ಕಾರವು ರಾಜ್ಯಪ್ರಶಸ್ತಿ ನೀಡಿರುತ್ತಾರೆ. ಅಕ್ಕ ಪಕ್ಕದ ಊರಿನ ರೈತರು ಆಗಾಗ ಆಶ್ರಮಕ್ಕೆ ಬರುತ್ತಿರುತ್ತಾರೆ. ರೈತರು ತಾವು ಬೆಳದಿದ್ದರಲ್ಲಿ ಸ್ವಲ್ಪ ಆಶ್ರಮಕ್ಕೆ ಕೊಡುತ್ತಾರೆ ಹಾಗೆಯೇ ಆಶ್ರಮವೂ ತಾನು ಬೆಳೆದಿದ್ದನ್ನು ರೈತರಿಗೆ ಕೊಡುತ್ತದೆ. ಇಲ್ಲಿ ಅಕ್ಷರಶಃ ಹಣದ ಚಲಾವಣೆಯ ಅಗತ್ಯವೇ ಕಾಣುವುದಿಲ್ಲ. ಮೀರಕ್ಕ, "ಖಂಡಿತಾ ನಮಗೆ ಏನೂ ಬೇಕಿಲ್ಲ. ಜನರು ಏನು ಬೇಕು ಎಂದು ಕೇಳುತ್ತಾರೆ, ಏನೇನೋ ಕೊಡುತ್ತಾರೆ, ಆದರೆ ನಮ್ಮ ಜೀವನಕ್ಕೆ ಅದ್ಯಾವುದರ ಅಗತ್ಯವೂ ಇಲ್ಲ" ಎನ್ನುತ್ತಾರೆ. ಬಹುಷಃ ಮೀರಕ್ಕನಿಗೆ ನಾವು ಏನೇ ಕಾಣಿಕೆ ಕೊಟ್ಟರೂ ಅದು ನಾವು ನಮ್ಮ ಕೀಳರಿಮೆಯನ್ನು ಮರೆಮಾಚಿಕೊಳ್ಳುವ ಯತ್ನವಾಗಿ ಮಾತ್ರ ಕಾಣಬಹುದೇನೋ.

ಮೀರಕ್ಕನನ್ನು ನೋಡಿದಾಗ ಒಂದು ಗಾಜನ್ನು ನೋಡಿದ ಅನುಭವವಾಗುತ್ತದೆ. ಯಾವುದನ್ನೇ ತೋರಿಕೆ ಮಾಡದೆ ಜೀವನದ ಸರಳ ಸತ್ಯಗಳನ್ನು ಹಾಗೇ ಹಾದು ಹೋಗಲು ಬಿಟ್ಟು ಅವುಗಳನ್ನೇ ಅಪ್ಪಿಕೊಂಡು ಸುಮ್ಮನೆ, ಬೇಸರವಿಲ್ಲದೆ ದಿನ ನಿತ್ಯದ ಬದುಕಿನಲ್ಲಿ ತೊಡಗಿಕೊಳ್ಳುವುದು ಒಂದು ಸಿದ್ಧಿಯೇ ಸರಿ ಎನಿಸುತ್ತದೆ. ಆ ಸಿದ್ಧಿ ಮೀರಕ್ಕನಿಗೆ ಒಲಿದಿದೆ. ಮೀರಕ್ಕ ನಿಜಕ್ಕೂ ಭವದ ಭೇದಗಳನ್ನು ಮೀರಿದ ಒಂದು ಚೇತನ ಮಾತ್ರ. ಆಧ್ಯಾತ್ಮದಲ್ಲಿದ್ದೂ

ಪ್ರಚಾರಕ್ಕೆ ಎಣಿಸುವ, ಲಿಂಗ ಸಮಾನತೆ, ಮೂಲಭೂತ ಹಕ್ಕು, ಪರಿಸರ, ಇನ್ನೂ ಏನೇನೋ ಸಂಗತಿಗಳನ್ನು ತಮ್ಮ ಅಸ್ತಿತ್ವದ ಅಗತ್ಯವನ್ನಾಗಿ ಮಾಡಿಕೊಂಡು ಮಾಧ್ಯಮಗಳಲ್ಲಿ ಕಿರಿಚಾಡುವ ಹಾಗೂ ಪರಿಸರ ಸ್ನೇಹಿ, ಸರಳ ಜೀವನ ಇಂಥ ದೊಡ್ಡ ಪದಗಳನ್ನು ಉಚ್ಚರಿಸುತ್ತಲೇ ತಾಂತ್ರಿಕ ಆವಿಷ್ಕಾರಗಳ ಹಿತವನ್ನು ಅನಿವಾರ್ಯವೆಂಬಂತೆ ಮೆಲ್ಲಗೆ ಒಪ್ಪಿಕೊಳ್ಳುತ್ತಿರುವ ನಮ್ಮಂಥವರಿಗೆ ಕೊಡಲು ಮೀರಕ್ಕನ ಬಳಿ ಬೇಕಾದಷ್ಟಿದೆ. ಆದರೆ ಅದರ ಅಗತ್ಯ ನಮಗಿದ್ದಂತೆ ಕಾಣುವುದಿಲ್ಲ. ಏಕೆಂದರೆ ಮೀರಕ್ಕನ ಜೀವನ ಒಂದು ನಿಜವಾದ ಕಲಾಕೃತಿ. ನಮ್ಮದು ಎರವಲು ತಂದ ಚಿತ್ರಪಟ.

ಇದೊಂದು ಅಪೂರ್ಣ ಲೇಖನ. ಬಹುಷಃ ಕೊನೆಯಿಲ್ಲದ್ದು. ಏಕೆಂದರೆ ದಿನದ ಕೊನೆಯಲ್ಲಿ ನಮಗೆ ಎದ್ದು ಕಂಡಿದ್ದು ಸಮಯದ ಅಭಾವ. ಮೀರಕ್ಕನ ಬಗ್ಗೆ ಏನೂ ಗೊತ್ತಿಲ್ಲದ ಶರ್ಮಿಳಾ (ನನ್ನ ಹೆಂಡತಿ) ಕೂಡ ಅವರ ಸಾಮಿಪ್ಯದ ಆಪ್ಯತೆಯನ್ನು ಬಹುವಾಗಿ ಅನುಭವಿಸಿದಳು. ಮೀರಕ್ಕನೊಂದಿಗೆ ಮಾತನಾಡುವುದು ಎಷ್ಟಿದೆಯೋ ಗೊತ್ತಿಲ್ಲ. ಇನ್ನೊಂದಷ್ಟು ದಿನ ಮೀರಕ್ಕನೊಂದಿಗೆ ಇದ್ದು, ಅವರ ಹಿಂದೆ ಮುಂದೆ ಓಡಾಡುತ್ತಾ, ಮಾತನಾಡುತ್ತಾ, ಅವರ ದಿನದಲ್ಲಿ-ತೊಡಗುವಿಕೆಗಳಲ್ಲಿ ಭಾಗಿಯಾಗುತ್ತಾ ಕಾಲ ಕಳೆಯುವುದು ಎಷ್ಟು ಮಜಾ ಮತ್ತು ಧನ್ಯ ಎನಿಸಿತು. ಹಾಗೆಯೇ ನಾವು ನಮ್ಮ ನಿತ್ಯ ಜೀವನದಲ್ಲಿ ಪ್ರಯತ್ನಪೂರ್ವಕವಾಗಿ ಸರಳತೆ, ಅಸಂಗ್ರಹ, ಶರೀರಶ್ರಮ ಈ ವಿಚಾರಗಳನ್ನು ಜಾರಿಗೆ ತಂದಾಗ ಮಾತ್ರ ಮೀರಕ್ಕನಂಥವರ ಸಾಲಿನಲ್ಲಿ ನಿಲ್ಲಲು ಮತ್ತು ಅವರಿಗೆ ನಮ್ಮ ನಿಜವಾದ ಕಾಣಿಕೆ, ಪ್ರೀತಿ ಮತ್ತು ಗೌರವ ಸಲ್ಲಿಸಲು ಸಾಧ್ಯ.

(ಇಲ್ಲಿ ಕಾಣಿಸಿರುವ ಅಂತರ್ಜಾಲ ಕೊಂಡಿಯನ್ನು ಬಳಸಿ ಮೀರಕ್ಕನ ಭಾವಚಿತ್ರಗಳು ಮತ್ತು ಇತರ ವಿವರಗಳನ್ನು ನೋಡಿ

(http://goo.gl/duqr46)

ಮಹಿಳೆಯರ ನಡೆ ಮದ್ಯ ನಿಷೇಧದೆಡೆಗೆ...

– ಸ್ವರ್ಣಾ ಭಟ್

ಗುಲ್ಬರ್ಗಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು 'ಸರ್ಕಾರಕ್ಕೆ ಹಾಳು' ಎಂಬ ಕಿರುಚಿತ್ರ ರೂಪಿಸಿ ಸುದ್ದಿಯಾಗಿದ್ದಾರೆ. ಮದ್ಯ ಮಾರಾಟದ ಆದಾಯದಿಂದ ಸರ್ಕಾರ ನಡೆಯುತ್ತದೆಯೆಂದು ನಂಬಿಸುತ್ತಲೇ ಬಂದ ರಾಜಕೀಯ ಪಕ್ಷಗಳಿಗೆ ಖಡಕ್ ಸಂದೇಶ ರವಾನಿಸಿದ್ದಾರೆ. ಲಾಭದ ಲೆಕ್ಕಾಚಾರವಲ್ಲ, ನಷ್ಟದ ಲೆಕ್ಕಾಚಾರವೆಂದು ನಿರೂಪಿಸುವ ಕಿರುಚಿತ್ರವಿದು.. ಗಾಂಧಿ ಜಯಂತಿಯ ಸಮಯದಲ್ಲೇ ಇದು ಹೊರ ಬಂದಿದ್ದು ಪ್ರಸ್ತುತ. ಮದ್ಯ ವಿರೋಧಿ ಹೋರಾಟದಲ್ಲಿ ಯುವ ಜನತೆ ಭಾಗವಹಿಸುವುದಿಲ್ಲ ಅನ್ನೋ ಅಪಪ್ರಚಾರಕ್ಕೆ ಸವಾಲು ಹಾಕಿದೆ ಈ ಹುಡುಗರ ತಂಡ. ಮದ್ಯಪಾನ ಗ್ರಾಮ-ನಗರ, ಬಡವ-ಶ್ರೀಮಂತ, ಅಕ್ಷರಸ್ಥ-ಅನಕ್ಷರಸ್ಥ ಎಂಬ ಪಕ್ಷಪಾತವಿಲ್ಲದೆ ವಯಸ್ಸಿನ ಗೆರೆಯನ್ನೂ ದಾಟಿ ವಕ್ಕರಿಸಿದ್ದು ಇವರ ಈ ನಡೆಗೆ ಕಾರಣವಾಗಿರಲೂಬಹುದು. ಇಡೀ ಸಾಮಾಜಿಕ ಸ್ವಾಸ್ಥ್ಯವನ್ನು ಹಾಳು ಮಾಡುತ್ತಿರುವುದನ್ನೂ ಗಮನಿಸಿರಬಹುದು. ಆರೋಗ್ಯ, ಶಿಕ್ಷಣ, ಇಷ್ಟೇ ಏಕೆ ಚುನಾವಣೆಗೂ ಮದ್ಯದ ವಾಸನೆ ಬಡಿದಿದೆ. ಹತಾಶರಾಗಿ "ಮದ್ಯದ ಲಾಬಿಯ ಮುಂದೆ ನಮ್ಮದೇನು ನಡೆಯುತ್ತೆ, ಸರಕಾರಕ್ಕೆ ವರ್ಷಕ್ಕೆ ೧೬,೦೦೦ ದಿಂದ ೧೭,೦೦೦ ಕೋಟಿ ರೂಪಾಯಿ ಆದಾಯವಿದೆ, ಜಿಎಸ್‌ಟಿ ಬಂದ ಮೇಲೆ ಆದಾಯ ದುಪ್ಪಟ್ಟು ಅಂದಾಗ ಸರಕಾರ ನಿಷೇಧ ಮಾಡುತ್ತಾ" ಅಂತ ಗೊಣಗುವ ಬಹುಪಾಲು ಜನರಿಗಿಂತ ಸಾಮಾಜಿಕ ಕಾಳಜಿ ಇರುವ ಸಕಾರಾತ್ಮಕವಾಗಿ ಯೋಚಿಸುವ, ಒಳ್ಳೆಯ ಮೌಲ್ಯ ಎತ್ತಿ ಹಿಡಿವ ಜನರ ಒಂದೆರಡು ಪ್ರಯೋಗಗಳೇ ಬಿಹಾರದಲ್ಲಿ ಆದಂತಹ ಕ್ರಾಂತಿಕಾರಿ ಬದಲಾವಣೆಗೆ ಕಾರಣವಾಗಬಹುದು. ಕುಡುಕ ಗಂಡಂದಿರಿಂದ, ಕುಡುಕ ಮಕ್ಕಳಿಂದ ಬೇಸತ್ತ ಮಹಿಳೆಯರೆಲ್ಲಾ ಸೇರಿ ಮದ್ಯ ವಿರೋಧಿ ಹೋರಾಟ ಆರಂಭಿಸಿದ್ದು ಒಂದು ಪ್ರಯೋಗವೇ.

ಸಾರಾಯಿ ಪ್ರತಿರೋಧ ದಿಢೀರ್ ಆಗಿ ಹುಟ್ಟಿಕೊಂಡಿಲ್ಲ. ಎರಡು ದಶಕಗಳ ಹಿಂದೆ ಮಹಿಳೆಯರ ದು:ಖ ದುಮ್ಮಾನವೆಲ್ಲಾ ದೂರ ಮಾಡುವ, ಸಬಲರನ್ನಾಗಿ ಮಾಡುವ ಹೊಸ ಕನಸು ಬಿತ್ತಿದ ಸ್ವ ಸಹಾಯ ಸಂಘಗಳ ಪರಿಕಲ್ಪನೆ ಲಾಗು ಆದಾಗ ಮಹಿಳೆಯರು ಕಣ್ಣಗಲಿಸಿ, ಕಿವಿಯರಳಿಸಿ ಸ್ವ ಸಹಾಯ ಸಂಘಗಳ ಹರಿಕಾರರ ಮಾತನ್ನು ಖುಷಿಯಿಂದಲೇ ಕೇಳಿದರು. ಸಂಘವನ್ನೂ ಕಟ್ಟಿದರು.

ನೂರಲ್ಲ, ಸಾವಿರವಲ್ಲ, ಲಕ್ಷಕ್ಕೂ ಮೀರಿ ಸಂಘಗಳು, ನೂರಾರು ಒಕ್ಕೂಟಗಳು ರಚನೆಯಾದವು . ಮಹಿಳೆಯರ ಉದ್ಧಾರಕ್ಕಾಗಿ ಸಾವಿರಾರು ಕೋಟಿ ಸಾಲ ಹರಿದು ಬಂತು. ಗ್ರಾಮೀಣ ಭಾಗದ ಮಹಿಳೆಯರಿಗೆ ಉಚ್ಚರಿಸಲೂ ಬಾರದ ಹೆಸರಿನ ಕಂಪನಿಗಳು, ಧಾರ್ಮಿಕ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು "ನಿಮ್ಮ ಕಷ್ಟ ಎಲ್ಲಾ ಚಿಟಿಕಿ ಹೊಡೆಯೋದ್ರಲ್ಲಿ ಪರಿಹಾರ, ನಿಮ್ಮೊಂದಿಗೆ ನಾವಿದ್ದೇವೆ" ಅಂದು ಕಿರುಸಾಲ ಯೋಜನೆ ಹೆಸರಲ್ಲಿ ಹಳ್ಳಿ ಹಳ್ಳಿಗೆ, ಮನೆ ಮನೆಗೆ ನುಗ್ಗಿದವು. ಸರಕಾರವೇ ಬೆನ್ನಿಗೆ ನಿಂತಾಗ ಇನ್ನೇನು ಭಯ! ಆದರೆ ವರ್ಷಗಳು ಕಳೆದರೂ ಗ್ರಾಮೀಣ ಮಹಿಳೆಯರ ಸಬಲರಾಗುವ ಕನಸೂ ನನಸಾಗಿಲ್ಲ, ಬದುಕೂ ಬದಲಾಗಲಿಲ್ಲ. ಸಾಲಕ್ಕೆ ಬಡ್ಡಿ-ಚಕ್ರಬಡ್ಡಿ ಕಟ್ಟುವ ಧಾವಂತದಲ್ಲಿ ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ಉದ್ಯೋಗ ಖಾತರಿ ಕೆಲಸ, ಮಧ್ಯಾಹ್ನದ ಮೇಲೆ ಗದ್ದೆ ಕೆಲಸ, ರಾತ್ರಿ ಮನೆಗೆಲಸದಲ್ಲಿ ಮುಳುಗಿ ಹೋದರು. ಇತ್ತ ಸರಕಾರ ಉಚಿತ ರೇಶನ್, ಆರೋಗ್ಯ ವಿಮೆ, ಪಿಂಚಣಿ ಅನ್ನುತ್ತಾ ಕಲ್ಯಾಣ ಕಾರ್ಯಕ್ರಮಗಳ ಹೆಸರಲ್ಲಿ ಚಿಟಿಕೆಯಲ್ಲಿ ಅಷ್ಟೋ ಇಷ್ಟೋ ಜೀವನಕ್ಕೆ ಪರಿಹಾರ ಕೊಡುತ್ತಿತ್ತು. ಹಾಗೋ ಹೀಗೋ ಜೀವನ ನಡೀತಿತ್ತು. ನರೇಗಾ ಕೆಲಸದ ಸಮಯದಲ್ಲಿ, ಸಂಘಟನೆಯ ಪ್ರತಿಭಟನೆಗಳಲ್ಲಿ, ಸಾಲಮರುಪಾವತಿಯ ಸಭೆಗಳಲ್ಲಿ ಒಟ್ಟು ಸೇರುತ್ತಿರುವಾಗ ಮಹಿಳೆಯರೂ ಚಿಂತಿಸಲು ಆರಂಭಿಸಿದ್ದಾರೆ. "ಸ್ವಸಹಾಯ ಸಂಘ ಕಟ್ಟಿ, ಸ್ವಾಭಿಮಾನದ ಬದುಕು ಕಟ್ಟಿ ಕೊಡುತ್ತೇವೆಂದ ಸರಕಾರ ಮತ್ತೆ ಮತ್ತೆ ಕೈಯೊಡ್ಡುವ ಸ್ಥಿತಿಗೆ ಯಾಕೆ ನಮ್ಮನ್ನು ತಂದು ನಿಲ್ಲಿಸಿದೆ? "ಯಾಕೆ ನಮ್ಮ ಜೀವನ ಬದಲಾಗಲಿಲ್ಲ. ನಾನೂ ಸ್ವ ಸಹಾಯ ಸಂಘದಲ್ಲಿದ್ದೆ, ನನ್ನ ಮಗಳೂ ಹಣ ಉಳಿತಾಯ ಸಾಲ ಅಂತ ಓಡಾಡುತಿದ್ದಾಳೆ. ಅತ್ತ ಸೊಸೆಯದೂ ಇದೇ ಹಾದಿ, ಬಾಜೂ ಮನೆ ನಿಂಗಮ್ಮಂದೂ ಪರಿಸ್ಥಿತಿ ಬೇರೆ ಇಲ್ಲ." ಸೋತು ಸುಣ್ಣಾದ ರಕ್ತಹೀನತೆಯ ಸೊರಗಿದ ಮಹಿಳೆಯರಿಗೆ ಸುಲಭವಾಗಿ ಉತ್ತರ ಸಿಕ್ಕಿತ್ತು. ನಮ್ಮ ಪರಿಸ್ಥಿತಿ ಸುಧಾರಣೆ ಆಗದೇ ಇರಲು ಸರಾಯಿಯೇ ಮೂಲ ಕಾರಣ ಅನ್ನೋದನ್ನ ತಡವಾಗಿಯಾದರೂ ಮನಗಂಡರು. ಗಂಡ, ಮಗ, ಅಳಿಯ ಹೀಗೆ ವಯಸ್ಸಿನ, ಹಿರಿತನದ ಬೇಧವಿಲ್ಲದೆ ಕುಡಿದು ಕುಕ್ಕರಿಸುವ ಇವರ ಸಾಲ ತೀರಿಸುವ, ಮನೆತನ ನಡೆಸುವ ದೊಡ್ಡ ಜವಾಬ್ದಾರಿ ಮಹಿಳೆಯರ ಹೆಗಲೇರಿಯಾಗಿತ್ತು. ಅಂಗೈಯಲ್ಲಿ ಆಕಾಶ ತೋರಿಸುವ ಕಿರು ಸಾಲದಲ್ಲಿ ಇದು ಗಮನಕ್ಕೇ ಬರಲಿಲ್ಲ. ಆದರೂ ನಮ್ಮ ಹೆಣ್ಣುಮಕ್ಕಳು ಧೃತಿಗೆಡುವವರು ಅಲ್ಲವೇ ಅಲ್ಲ. ಇದೇ ಸಂಘಗಳನ್ನ, ಸಂಘಟನೆಗಳನ್ನು ಮುಂದಿಟ್ಟುಕೊಂಡೇ ಸರಾಯಿ ಕೊಟ್ಟು ಮನೆ ಹಾಳು ಮಾಡುವ ಸರಕಾರಕ್ಕೆ ಬುದ್ಧಿ ಕಲಿಸುವ, ತಿರುಗೇಟು ನೀಡುವ ನಿರ್ಧಾರ ಮಾಡಿದರು. ಹಳ್ಳಿ ಹಳ್ಳಿಗೆ

ಹೋಗಿ ತಮ್ಮೂರಿನ ಉಳಿದ ಹೆಣ್ಣುಮಕ್ಕಳೊಂದಿಗೆ ಸರಾಯಿ ಮತ್ತದರ ಪರಿಣಾಮದ ಸಂವಾದ ನಡೆಸಿದರು. ಕೂತು ಅವರ ಕಥೆ ಆಲಿಸಿದರು. ರಾಯಚೂರಿನ ಲಿಂಗಸುಗೂರು ಸಮೀಪದ ಹುನ್ನೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ನಂಜಲದಿನೆ ಗ್ರಾಮದ, ಉಲಿಗಮ್ಮ "ನನ್ನ ಗಂಡ ದೊಡ್ಡ ಕುಡುಕ. ದುಡಿದ ಹಣವನ್ನೆಲ್ಲಾ ಸಾರಾಯಿಗಾಗಿ ಖರ್ಚು ಮಾಡುತ್ತಾನೆ. ನನಗೆ ಸ್ತನ ಕ್ಯಾನ್ಸರ್ ಇದ್ದು ವಿಪರೀತ ನೋವು ಅನುಭವಿಸುತ್ತಿದ್ದೇನೆ. ಆದರೆ ಚಿಕಿತ್ಸೆಗೆ ಹಣವಿಲ್ಲ. ನನಗೆ ನಾಲ್ಕು ಜನ ಮಕ್ಕಳು. ಸಣ್ಣವನು ಅಂಗನವಾಡಿಗೆ ಹೋಗುತ್ತಿದ್ದಾನೆ. ನಾನು ಸತ್ತರೆ ಮಕ್ಕಳ ಗತಿಯೇನು? ೧೫,೦೦೦ ಸಾಲವೂ ಇದೆ" ಅಂಥ ತನ್ನ ಕಥೆ ಹೇಳಿದರೆ ಸಮೀಪದ ಹಳ್ಳಿಯ,'ತಾಲೇಕಟ್ಟು ಗ್ರಾಮದ ಬಸಮ್ಮ ಚೆಲುವಾದಿಯದು ಇನ್ನೊಂದು ಕಥೆ. "ಸಿಕ್ಕಾಪಟ್ಟೆ ಕುಡುಕನಾದ ನನ್ನಗಂಡ ಲಕ್ವ ಹೊಡೆದು ೬ ವರ್ಷಗಳಿಂದ ಹಾಸಿಗೆ ಹಿಡಿದಿದ್ದಾನೆ. ನಾನು ೯೦,೦೦೦ ರೂಪಾಯಿ ಹಣವನ್ನು ಆತನ ಚಿಕಿತ್ಸೆಗಾಗಿ ಖರ್ಚು ಮಾಡಿದ್ದೇನೆ. ಆದರೆ ಪ್ರಯೋಜನವಾಗಿಲ್ಲ. ಆತ ಪ್ರತಿದಿನ ೨೦೦ ರೂಪಾಯಿಯಷ್ಟು ಸರಾಯಿಗಾಗಿ ಖರ್ಚು ಮಾಡುತ್ತಿದ್ದ. ಕುಡಿದು ಬಾರು ಕೋಲಿನಿಂದ ನನ್ನ ಹೊಡೆಯುತ್ತಿದ್ದ. ಈಗಲೂ ಅಶ್ಲೀಲ ಬೈಗುಳ ನನ್ನ ಬಿಟ್ಟಿಲ್ಲ. ಮಗಳ ಮದುವೆಗೆಂದು ೨೦,೦೦೦ ಸಾಲ ಮಾಡಿದ್ದೇನೆ. ಇನ್ನೂ ತೀರಿಸಬೇಕಾಗಿದೆ. ಮದ್ಯದಿಂದಾಗಿ ನನ್ನ ಜೀವನವೇ ಬರ್ಬಾದಗಿದೆ." ಅಳುತ್ತಿದ್ದ ಬಸಮ್ಮನ್ನು "ಅಳುತ್ತಾ ಕೂತ್ರೆ ಏನೂ ಆಗೋದಿಲ್ಲ ಬಿಡವ್ವಾ, ಹೋರಾಟಕ್ಕೆ ಬರ್ತೀಯೋ ಇಲ್ಲೋ ಹೇಳು ನೀ" ಎಂದು ಪ್ರೀತಿಯಿಂದ ಬೈದು, ಸಮಾಧಾನ ಹೇಳಿ ಮುಂದಿನ ಹಳ್ಳಿಗೆ ಹೆಜ್ಜೆ ಹಾಕಿ ಅಲ್ಲಿ ಬಸಮ್ಮನಂಥ ನೂರಾರು ಮಂದಿಯನ್ನು ಸಜ್ಜು ಮಾಡುತ್ತಾ ಹೋಗುವುದು ಸುಲಭದ ಮಾತಾಗಿರಲಿಲ್ಲ. ಆದರೆ ಇದು ಮಹಿಳೆಯರ ಸ್ವಾಭಿಮಾನದ ಪ್ರಶ್ನೆಯಾಗಿತ್ತು. ಒಂದಲ್ಲ ಒಂದು ದಿನ ಸಂಕಷ್ಟಕ್ಕೆ ತೆರೆ ಎಳೆಯಲೇಬೇಕಲ್ಲ.. ಒಂದೊಂದು ಕುಟುಂಬದ್ದೂ ಒಂದೊಂದು ಸಂಕಷ್ಟ. ಸಮಾನ ದು:ಖಿಗಳು. ಅವರೊಂದಿಗೆ ತಾವೂ ಕಣ್ಣೀರಿಟ್ಟರು. ಧೈರ್ಯ ತುಂಬಿದರು. ಮನೆಯಿಂದ ಎಳೆ ತಂದರು. ಹೋರಾಟಕ್ಕೆ ತಯಾರು ಮಾಡಿದರು. ಈ ಸಂಘರ್ಷದ ಫಲ ರಾಯಚೂರಿನ ಮದ್ಯ ನಿಷೇಧ ಚಳುವಳಿಯ ಹುಟ್ಟು..

ಸರಿಯಾಗಿ ಒಂದು ವರುಷಕ್ಕೆ ಹಿಂದೆ ಅಕ್ಟೋಬರ್ ೨, ೨೦೧೬, ಗಾಂಧಿ ಜಯಂತಿಯಂದು ರಾಯಚೂರಿನಲ್ಲಿ ಒಂದೇ ವೇದಿಕೆಯಲಿ ಮದ್ಯ ನಿಷೇಧ ಆಂದೋಲನವೆಂಬ ಬ್ಯಾನರಿನ ಅಡಿಯಲ್ಲಿ ೪೦,೦೦೦ ಗ್ರಾಮೀಣ ಮಹಿಳೆಯರು ಒಟ್ಟು ಸೇರಿದ್ದರು. ಒಂದೇ ಅಜೆಂಡಾ 'ಮದ್ಯ ನಿಷೇಧ ಮಾಡಿ, ಇಲ್ಲ ಕುರ್ಚಿ ಬಿಡಿ'. 'ನಮಗೆ ಬೀರು ಬೇಡ-ನೀರು ಕೊಡಿ, ಬಾರು ಬೇಡ-ಆರೋಗ್ಯ

ಕೊಡಿ, ಸಾರಾಯಿ ಬೇಡ–ಉದ್ಯೋಗ, ಶಿಕ್ಷಣ ಕೊಡಿ. ಸಾಧ್ಯ ಇಲ್ವೇ ನಮ್ಮನ್ನು ನಮ್ಮಷ್ಟಕ್ಕೇ ಬದುಕಲು ಬಿಡಿ' ಎಂದು ಸರಕಾರವನ್ನು ಒತ್ತಾಯಿಸಿದ್ದರು. ಅದೇ ದಿನ ೮–೧೦ ಜಿಲ್ಲೆಗಳಲ್ಲಿ ಸಮಾನ ಮನಸ್ಕರೆಲ್ಲಾ ಸೇರಿಕೊಂಡು ಮದ್ಯ ನಿಷೇಧಕ್ಕಾಗಿ ಸರಕಾರವನ್ನು ಆಗ್ರಹಿಸಿದ್ದರು. ಆದರೆ ಅಬಕಾರಿ ಆದಾಯವೇ ಸರಕಾರದ ಖಜಾನೆ ತುಂಬಿಸುವ ಸುಲಭ ಸಾಧನ ಅಂದುಕೊಂಡ ಸರಕಾರ ಮಹಿಳೆಯರ ಪ್ರತಿರೋಧದ ಮಧ್ಯೆಯೂ ಇನ್ನಷ್ಟು ಮದ್ಯದಂಗಡಿಗಳಿಗೆ ಪರವಾನಿಗೆ ಕೊಟ್ಟು ಬೀಗಿತ್ತು. ಸರಕಾರ ಈ ಮಹಿಳೆಯರನ್ನು ಕೆಣಕಿದಷ್ಟೂ ಮಹಿಳೆಯರೂ ಗಟ್ಟಿಯಾಗುತ್ತಾ ಹೋದರು. ಅದೇ ಸಮಯದಲ್ಲಿ ರಾಯಚೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು, ಮಹಿಳಾ ಲೇಖಕಿಯರನ್ನು ಕಂಡು "ಸರಕಾರ ಮಹಿಳೆಯರನ್ನು ಲೇವಡಿ ಮಾಡಲೆಂದೇ ಹೊಸ ಮದ್ಯದಂಗಡಿಗಳಿಗೆ ಪರವಾನಿಗೆ ಕೊಡುತ್ತಿದೆ, ತಕ್ಷಣವೇ ಪರವಾನಿಗೆ ರದ್ದು ಮಾಡುವಂತೆ ಒತ್ತಾಯಿಸಿ" ಎಂದು ಕೇಳಿಕೊಂಡರು. ಜನಪರ ಸಾಹಿತಿಗಳೂ ಒಪ್ಪಿ ಸಮ್ಮೇಳನದ ಎಲ್ಲಾ ಗೋಷ್ಠಿಗಳಲ್ಲಿ ವಿಷಯ ಹೈಲೈಟ್ ಆಗುವಂತೆಯೂ ಮಾಡಿದರು. ಆಗಲೇ ಬಿಡಿ ಬಿಡಿಯಾಗಿ ಮದ್ಯ ನಿಷೇಧಕ್ಕಾಗಿ ಪ್ರತಿಭಟನೆ ಮಾಡುತ್ತಲೇ ಬಂದಿದ್ದ ಹತ್ತು ಹಲವು ಸಂಘಟನೆಗಳು, ವ್ಯಕ್ತಿಗಳು ಒಂದೆಡೆ ಸೇರಿದಾಗ ಮದ್ಯ ನಿಷೇಧದ ಪ್ರತಿರೋಧ ಒಂದು ಚಳುವಳಿಯಾಗಿ ರೂಪುಗೊಂಡಿತು.

ರಾಜ್ಯಾದ್ಯಂತ ಈ ಚಳುವಳಿ ಹಬ್ಬಲು ಕೆಲವೇ ದಿನ ಸಾಕಾಯ್ತು. ವಿವಿಧ, ವಿಶಿಷ್ಟ ರೀತಿಯಲ್ಲಿ ಹೋರಾಟಗಳು. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮದ್ಯದಂಗಡಿಗಳು ಇರಬಾರದು, ಬರಬಾರದು,ಪರವಾನಿಗೆ ನೀಡಬಾರದೆಂದು ಒತ್ತಾಯಿಸಿ ಗ್ರಾಮ ಪಂಚಾಯತಿಗಳಲ್ಲಿ ಠರಾವು ಪಾಸಾಗಬೇಕೆಂದು ಹಠ ಹಿಡಿದು ಗೆಲ್ಲುತ್ತಿದ್ದಾರೆ ಮದ್ಯ ವಿರೋಧಿ ಹೋರಾಟಗಾರರು. ಗೆಲುವಿನ ಹಾದಿಯೂ ಸುಗಮವಾಗಿಲ್ಲ. ಯುದ್ಧ... ಠರಾವು ಹೇಗೆ ಪಾಸು ಮಾಡಿಸುತ್ತೀರೆಂದು ಸವಾಲೆಸದ ಗ್ರಾಮ ಪಂಚಾಯತಿಗೆ ವಿಶೇಷ ಗ್ರಾಮ ಸಭೆಯನ್ನೂ ಪಿಡಿಒನೇ ಕರೆಯುವಂತೆ ಮಾಡಿ, ಗ್ರಾಮ ಪಂಚಾಯತಿ ಸದಸ್ಯರೇ ಠರಾವು ಪಾಸು ಮಾಡುವಂತೆ ಮಾಡಿ ಬುದ್ಧಿ ಕಲಿಸಿದ ಬೆಳಗಾವಿಯ ಖಾನಾಪುರದ ಬೀಡಿ ಗ್ರಾಮದ ಮಹಿಳೆಯರು ಒಂದೆಡೆಯಾದರೆ ಹೆಗ್ಗೋಡಿನ ಮಹಿಳೆಯರು ಜಿಲ್ಲಾಧಿಕಾರಿಯ ಮುಂದೆ ಪ್ರತಿಭಟಿಸಿ ಸಾರಾಯಿ ಅಂಗಡಿಗಳ ಲೈಸೆನ್ಸ್ ರದ್ದು ಪಡಿಸಿದ ಕಥೆ ಇನ್ನೊಂದೆಡೆ. ಇನ್ನೊಂದಿಷ್ಟು ಮಿತ್ರರು ಗುಲ್ಬರ್ಗಾದಿಂದ ಬೆಂಗಳೂರುವರೆಗೆ ಪಾದಯಾತ್ರೆ ಮಾಡಿದ್ದು. ಸ್ಥಳೀಯ ಸ್ವಾಮೀಜಿಗಳನ್ನೂ ಸೇರಿಸಿಕೊಂಡು ಪಾದಯಾತ್ರೆ ಮೂಲಕ ಜಾಗೃತಿ ಮೂಡಿಸುತ್ತಲೇ ಮಹಿಳೆಯರ ಬೆನ್ನಿಗೆ ನಿಂತು ಮದ್ಯದಂಗಡಿಗಳು ಮುಚ್ಚುವಂತೆ

ಮಾಡಿದ್ದು. ರಾಯಚೂರಿನಲ್ಲಿ ಅನಧಿಕೃತವಾಗಿ ಚಹಾದಂಗಡಿಗಳಲ್ಲಿ, ಧಾಬಾಗಳಲ್ಲಿ, ಮನೆಗಳಲ್ಲಿ ಮಾರಾಟವಾಗುತ್ತಿರುವ ಮದ್ಯದ ಸುಳಿವನ್ನು ಅಬಕಾರಿ ಇಲಾಖೆಗೆ ತಿಳಿಸಿ ನಡು ರಸ್ತೆಯಲ್ಲಿ ಅಬಕಾರಿ ಅಧಿಕಾರಿಗಳ ಬೆವರಿಳಿಸಿ, ನಿದ್ದೆ ಕೆಡಿಸಿದ್ದು.. ಹೀಗೆ ವರದಿಯಾದ, ವರದಿಯಾಗದ ನೂರಾರು ಪ್ರತಿಭಟನೆಗಳೂ ಗೆಲುವು ಸಾಧಿಸಿದ್ದಿದೆ. ಸ್ತ್ರೀ ಶಕ್ತಿ ಸಂಘದ ಮಹಿಳೆಯರೆಂದರೆ ರಾಜಕೀಯ ಪಕ್ಷಗಳ ಸಭೆಯಲ್ಲಿ ಪೆಂಡಾಲು ತುಂಬಿಸುವ ಸಭಿಕರೆಂದು ಅಪಹಾಸ್ಯ ಮಾಡುತ್ತಿದ್ದವರೆಲ್ಲಾ "ಮದ್ಯ ನಿಷೇಧ ಮಾಡುವವರಿಗೇ ನಮ್ಮ ಓಟು" ಎಂದು ತಮ್ಮ ನಿರ್ಧಾರ ಘೋಷಿಸಿದ ಮಹಿಳೆಯರನ್ನು 'ಇವರೇನಾ ಅವರು' ಎಷ್ಟೊಂದು ಬದಲಾಗಿದ್ದಾರೆ' ಎಂದು ಅಸಹನೆಯಿಂದ ನೋಡಲಾರಂಭಿಸಿದ್ದಾರೆ. ಎಲ್ಲಾ ರಾಜಕೀಯ ಪಕ್ಷಗಳನ್ನೂ ಜವಾಬ್ದಾರರನ್ನಾಗಿಸಿ, ಆಯಾ ಪಕ್ಷಗಳು ತಮ್ಮ ತಮ್ಮ ನಿಲುವನ್ನು ಸ್ಪಷ್ಟವಾಗಿ, ಗಟ್ಟಿಯಾಗಿ ಜನರ ಮುಂದಿಡುವಂತೆ ಒತ್ತಾಯಿಸಲು ಚುನಾವಣಾ ಸಮಯವೇ ಸರಿಯಾದ ಸಮಯವೆಂದು ಕಾಯುತ್ತಿರುವ ಈ ಗಟ್ಟಿಗಿತ್ತಿಯರ ಹೋರಾಟದ ಕಿಚ್ಚಿಗೆ ಹ್ಯಾಟ್ಸ್ ಆಫ್ ಅನ್ನಲೇಬೇಕು.

ಸರಕಾರಕ್ಕೆ ಬಿಸಿ ಮುಟ್ಟಿದೆ. ತಿಂಗಳ ಹಿಂದೆ ಪತ್ರಿಕೆಗಳಲ್ಲಿ ವರದಿಯಾದಂತೆ ಮುಖ್ಯಮಂತ್ರಿಗಳು ನಡೆಸಿದ ಎಲ್ಲಾ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಬಕಾರಿ ಇಲಾಖೆಯಿಂದ ಆದಾಯ ಕಡಿಮೆಯಾದ ಬಗ್ಗೆ ವಿವರಣೆ ಕೇಳಿದ್ದಾರಂತೆ. ಇದಕ್ಕೂ ಮೊದಲು ಗರಿಷ್ಟ ಆದಾಯ ತರುತ್ತಿದ್ದ ರಾಯಚೂರಿನಂತಹ ಜಿಲ್ಲೆಗಳಲ್ಲಿ ಏಕಾಏಕಿ ಇಳಿದ ಆದಾಯವನ್ನು ಹೆಚ್ಚಿಸುವಂತೆ ಖಡಕ್ ಆದೇಶ ಜಿಲ್ಲಾಧಿಕಾರಿಗಳ ಕೈ ಸೇರಿತ್ತು. ಹೆದ್ದಾರಿಗಳ ಮದ್ಯದಂಗಡಿಗಳನ್ನು ಮುಚ್ಚುವಂತೆ ಸುಪ್ರೀಂಕೋರ್ಟ್ ನೀಡಿದ ತೀರ್ಪಿನ ಪರಿಣಾಮವೂ ಆಗಿತ್ತು. ಡಿನೋಟಿಫಿಕೆಶನ್ ಮೂಲಕ ಹೆದ್ದಾರಿ ಬಾರ್‌ಗಳೆಲ್ಲಾ ಮತ್ತೆ ತೆರೆದಿವೆ. ಜನ ಸಂಜೆಯಾದಂತೆ ಮದ್ಯದಂಗಡಿಗಳಿಗೆ ಬಾರ್‌ಗಳಿಗೆ ಮುಗಿ ಬೀಳುವ ದೃಶ್ಯ ಸಾಮಾನ್ಯವಾಗಿದೆ. ಆದರೆ ಮಹಿಳೆಯರು ಹೆದರಿಲ್ಲ. ಸೋತೆವು ಅಂದುಕೊಂಡಿಲ್ಲ. "ಬರಲಿ ಚುನಾವಣೆ. ಕಲಿಸುತ್ತೇವೆ ಬುದ್ಧಿ! ಈಗ ನಾವು ಮಾತ್ರವಲ್ಲ, ನಮ್ಮೊಂದಿಗೆ ಪುರುಷರು, ಯುವಕರು, ವೃದ್ಧರು, ಸ್ವಾತಂತ್ರ್ಯ ಹೋರಾಟಗಾರರು, ಸಮಾಜಸೇವಕರು, ಎಲ್ಲರೂ...ಇದ್ದಾರೆ..ನೋಡೇ ಬಿಡೋಣ.." ಅನ್ನುತ್ತಾ ಗಟ್ಟಿಗಿತ್ತಿಯರ ಪಡೆ ನಡೆದಿದೆ ಮುಂದಿನ ಹಳ್ಳಿಗೆ..

ಶ್ರೀಮತಿ ಸ್ವರ್ಣಾ ಭಟ್, ರಾಜ್ಯದ ಸಶಕ್ತ ಗ್ರಾಮೀಣ ಕಾರ್ಮಿಕ, ಮಹಿಳಾ ಸಂಘಟನೆಯಾದ ಗ್ರಾಮೀಣ ಕೂಲಿ ಕಾರ್ಮಿಕರ ಸಂಘಟನೆ (ಗ್ರಾಕೂಸ್) ಇದರ ರಾಜ್ಯ ಪ್ರಧಾನ ಕಾರ್ಯದರ್ಶಿ. ಮಹಿಳೆಯರ ನ್ನು ಸಂಘಟಿಸುವಲ್ಲಿ ಸಕ್ರಿಯರಾಗಿರುವ ಸ್ವರ್ಣಾ ರಾಜ್ಯದ ಬಹುತೇಕ ಜನಪರ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದಾರೆ. ●

ಗಾಂಧಿ ಮತ್ತು ಗೋರಾ ಎಂಬ ಗುರುಶಿಷ್ಯರ ಧರ್ಮ ಹಾಗೂ ದೇವರು ಕುರಿತ ಜಿಜ್ಞಾಸೆ.

– ಜಗದೀಶ ಕೊಪ್ಪ

ಕನ್ನಡ ಪ್ರಖ್ಯಾತ ಸಂಶೋಧಕರು ಮತ್ತು ವಿದ್ವಾಂಸರಾಗಿದ್ದ ಡಾ॥ ಕಲ್ಬುರ್ಗಿಯವರ ಹತ್ಯೆಯಾದ ನಂತರ ಕನ್ನಡದ ಸಾಂಸ್ಕೃತಿಕ ಜಗತ್ತು ತಲುಪಿರುವ ಅಧೋಗತಿಯನ್ನು ನೆನದಾಗ ಮನಸ್ಸು ಅಪಮಾನದಿಂದ ಮುದುಡಿಹೋಗುತ್ತಿದೆ. ಸೈದ್ಧಾಂತಿಕ ಭಿನ್ನಾಭಿಪ್ರಾಯಗಳನ್ನು ಮಾತು ಮತ್ತು ಚರ್ಚೆಗಳ ಮೂಲಕ ಈವರೆಗೆ ಬಗೆ ಹರಿಸಿಕೊಳ್ಳುತ್ತಿದ್ದ ಕನ್ನಡದ ಸಾಂಸ್ಕೃತಿಕ ಜಗತ್ತಿಗೆ ಇದೀಗ ಹೊಡಿ, ಬಡಿ ಮತ್ತು ಕೊಲ್ಲು, ಎಂಬ ಮಾತುಗಳು ಆವರಿಸಿಕೊಂಡಿವೆ.ಇತ್ತೀಚೆಗಿನ ದಿನಗಳಲ್ಲಿ ವಿದ್ವಾಂಸರ ಕುರಿತು ಸಾಹಿತ್ಯ, ಸಂಸ್ಕೃತಿಗಳ ಗಂಧ ಗಾಳಿಯಿಲ್ಲದ ತಲೆ ತಿರುಕರು ಆಡುತ್ತಿರುವ ಮಾತುಗಳು ಅವರು ಪ್ರತಿನಿಧಿಸುವ ಧರ್ಮ ಮತ್ತು ಸಂಸ್ಕೃತಿಯ ಪ್ರತಿಬಿಂಬಗಳಂತೆ ಗೋಚರಿಸುತ್ತಿವೆ. ಈ ಸಂದರ್ಭದಲ್ಲಿ ದೇವರು ಮತ್ತು ಧರ್ಮ ಕುರಿತು ಅಪಾರ ಶ್ರದ್ಧೆ ಹೊಂದಿದ್ದ ಗಾಂಧೀಜಿಯವರು ತಮ್ಮ ಶಿಷ್ಯ ಹಾಗೂ ನಾಸ್ತಿಕ ಗೋಪರಾಜು ರಾಮಚಂದ್ರರಾವ್ (ಗೋರಾ)ಎಂಬುವರೊಡನೆ ನಿರಂತರ ಹದಿನೇಳು ವರ್ಷಗಳ ಕಾಲ ನಡೆಸಿದ ಸಂವಾದ ನೆನಪಾಗುತ್ತಿದೆ.

ಗೋರಾರವರು ೧೯೦೨ರಲ್ಲಿ ಆ ಕಾಲದಲ್ಲಿ ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿದ್ದ ಒರಿಸ್ಸಾದ ಗಂಜಾಂ ಜಿಲ್ಲೆಯ ಛತ್ರಪುರ ಎಂಬಲ್ಲಿ ಜನಿಸಿದವರು. ಅವರ ತಂದೆ ಅಂದಿನ ಸರ್ಕಾರದಲ್ಲಿ ಆಂಧ್ರದ ಕಾಕಿನಾಡದಲ್ಲಿ ಸೇವೆಯಲ್ಲಿದ್ದರು. ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪರಿಸರ ವಿಜ್ಞಾನದಲ್ಲಿ ಎಂ.ಎ. ಆನರ್ಸ್ ಪದವಿ ಪಡೆದಿದ್ದ ಗೋರಾರವರು ಬಾಲ್ಯದಿಂದ ದೇವರು, ಧರ್ಮ ಮತ್ತು ಅಂಧಶ್ರದ್ಧೆಗಳ ವಿರುದ್ಧ ತಿರುಗಿ ಬಿದ್ದವರು. ತಾವು ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದ ಮಧುರೈ ಕಾಲೇಜಿನ ಮತಾಂತರ ಕುರಿತ ಒಲವು ಹಾಗೂ ಕಾಕಿನಾಡ ಕಾಲೇಜಿನಲ್ಲಿ ಧರ್ಮ ಕುರಿತಾದ ಅಂಧ ಶ್ರದ್ಧೆಗಳನ್ನು ತಿರಸ್ಕರಿಸಿ, ಉದ್ಯೋಗಕ್ಕೆ ರಾಜಿನಾಮೆ ನೀಡಿ ಸ್ವತಂತ್ರವಾಗಿ ಬದುಕಲು ಇಚ್ಚಿಸಿದವರು. ಇದಕ್ಕಾಗಿ ವಿಜಯವಾಡ ಸಮೀಪ ನಿರೀಶ್ವರವಾದ ಕೇಂದ್ರ ಎಂಬ ಸಂಸ್ಥೆಯನ್ನು ಪ್ರಾರಂಭಿಸಿ, ಧರ್ಮ ಮತ್ತು ಧರ್ಮ ಗ್ರಂಥಗಳ ಕುರಿತಂತೆ ಧಾರ್ಮಿಕ ಮುಖಂಡರೊಡನೆ ನಿರಂತರ ಚರ್ಚೆಯಲ್ಲಿ ಇದ್ದವರು.

೧೯೩೦ರಲ್ಲಿ ಮಹಾತ್ಮ ಗಾಂಧಿಯವರು ಪ್ರಥಮವಾಗಿ ಆಂಧ್ರದ ಗೋದಾವರಿ, ಕಾಕಿನಾಡ, ಶ್ರೀ ಶೈಲಂ ಜಿಲ್ಲೆಗಳಿಗೆ ಬಂದು ಹೋದ ನಂತರ ಗಾಂಧಿ ಚಿಂತನೆಗಳಿಗೆ ಮಾರು ಹೋದರು. (ಗಾಂಧೀಜಿಯವರ ಭೇಟಿ ಕುರಿತು ರಾಮಮೋಹನ ರಾವ್ ಎಂಬುವರು ತಮ್ಮ ಆತ್ಮ ಚರಿತ್ರೆಯನ್ನು ಸ್ವರಾಜ್ಯಂ ಹೆಸರಿನಲ್ಲಿ ಕಾದಂಬರಿ ರೂಪದಲ್ಲಿ

ಬರೆದಿದ್ದು, ಆಕ್ಸ್ ಪರ್ಡ್ ಯೂನಿವರ್ಸಿಟಿ ಪ್ರೆಸ್‌ನಿಂದ ಅದೇ ಹೆಸರಿನಲ್ಲಿ ಇಂಗ್ಲೀಷ್‌ನಲ್ಲಿ ಪ್ರಕಟವಾಗಿದೆ) ಆನಂತರದ ದಿನಗಳಲ್ಲಿ ಗೋರಾರವರು ಗಾಂಧೀಜಿಯವರ ಜೊತೆ ದೇವರು ಧರ್ಮ ಕುರಿತಂತೆ ನಿರಂತರ ಪತ್ರ ವ್ಯವಹಾರ ನಡೆಸಿದರು. ಅದು ತೃಪ್ತಿಯಾಗದೆ, ವಾರ್ಧಾ ಆಶ್ರಮಕ್ಕೆ ಭೇಟಿ ನೀಡಿ ಗಾಂಧಿ ಜೊತೆ ಸಂವಾದ ನಡೆಸುತ್ತಿದ್ದರು. ಗಾಂಧಿಜಿಯವರನ್ನು ಪ್ರಥಮ ಬಾರಿಗೆ ಭೇಟಿಯಾದಾಗ, ಹೃದಯದೊಳಗೆ ದೇವರೇ ಇಲ್ಲದ ಮನುಷ್ಯನ ಜೊತೆ ನಾನು ಹೇಗೆ ಸಂವಾದ ನಡೆಸಲಿ? ಎಂದು ಹಾಸ್ಯ ಚಟಾಕಿಯನ್ನು ಹಾರಿಸಿದ್ದನ್ನು ಗೋರಾರವರು ತಮ್ಮ ಕೃತಿಯಲ್ಲಿ ದಾಖಲಿಸಿದ್ದಾರೆ. (ಈ ಕೃತಿಯನ್ನು ನನ್ನ ಮಿತ್ರರಾದ, ಹಾಗೂ ನಿವೃತ್ತ ಶಿಕ್ಷಣ ಆಯುಕ್ತರಾದ ಧಾರವಾಡದ ವೆಂಕಟೇಶ್ ಮಾಚಕನೂರು ಅವರು ಗಾಂಧಿಯೊಂದಿಗೆ ಒಬ್ಬ ನಾಸ್ತಿಕ ಹೆಸರಿನಲ್ಲಿ ಕನ್ನಡಕ್ಕೆ ಅನುವಾದ ಮಾಡಿದ್ದು, ಬಳ್ಳಾರಿಯ ಲೋಹಿಯಾ ಪ್ರಕಾಶನ ಈ ಕಿರು ಪುಸ್ತಕವನ್ನು ಪ್ರಕಟಿಸಿದೆ) ಗಾಂಧಿಯವರ ವಾರ್ಧಾ ಆಶ್ರಮಕ್ಕೆ ಭೇಟಿ ನೀಡಿ ಅಲ್ಲಿ ವಾರಗಟ್ಟಲೆ ತಂಗಿದ್ದರೂ ಸಹ ಗೋರಾ ಅವರು ಎಂದೂ ಬೆಳಿಗ್ಗೆ ಮತ್ತು ಸಂಜೆ ನಡೆಯುತ್ತಿದ್ದ ಪ್ರಾರ್ಥನಾ ಸಭೆಗಳಲ್ಲಿ ಪಾಲ್ಗೊಳ್ಳುತ್ತಿರಲಿಲ್ಲ. ನಿರೀಶ್ವರವಾದ ಅಥವಾ ನಾಸ್ತಿಕತೆ ಎನ್ನುವುದು ಮನುಷ್ಯನೊಬ್ಬ ನಡೆಸುವ ದೈನಂದಿಕ ಜೀವನದಲ್ಲಿ ಸಕರಾತ್ಮಕ ಬೆಳವಣಿಗೆಗಳನ್ನು ತಂದು ಕೊಡುವ ಭಾವ ಅಥವಾ ವಿಶ್ವಾಸ ಎಂಬುವುದು ಗೋರಾರವರ ದೃಢ ನಿಲುವಾಗಿತ್ತು. ದೇವರ ಮೇಲಿನ ನಂಬಿಕೆ ಮನುಷ್ಯನನ್ನು ಅಧೀರನನ್ನಾಗಿ ಮಾಡಿ, ಅವನನ್ನು ಧರ್ಮ ಮತ್ತು ಕರ್ಮಗಳ ನಡುವೆ ಜೀತದಾಳುವನ್ನಾಗಿ ಮಾಡುತ್ತದೆ ಎಂದು ಗೋರಾ ಗಾಂಧಿಯವರ ಜೊತೆ ವಾದ ಮಾಡುತ್ತಿದ್ದರು. ಗಾಂಧಿ ಮತ್ತು ಗೋರಾ ಎಂಬ ಈ ಅಪರೂಪದ ಗುರುಶಿಷ್ಯರ ನಡುವೆ ನಿರಂತರ ಹದಿನೇಳು ವರ್ಷಗಳ ಕಾಲ ನಡೆದ ಸಂವಾದದ ಫಲವಾಗಿ ಗಾಂಧಿಯವರು ದೇವರು ಎನ್ನುವ ಶಬ್ಧವನ್ನು ಅಂತಿಮವಾಗಿ ಸತ್ಯ ಎಂದು ಬದಲಾಯಿಸಿಕೊಂಡರು.

ಆಂಧ್ರಪ್ರದೇಶದ ಉತ್ತರ ಭಾಗದ ಗೋದಾವರಿ ಪ್ರಾಂತ್ಯದಲ್ಲಿ ಮೂಲತಃ ಬ್ರಾಹ್ಮಣರಾಗಿದ್ದ ಗೋರಾರವರು ಪ್ರತಿ ಹದಿನೈದು ದಿನಕ್ಕೆ ಹುಣ್ಣಿಮೆಯ ದಿನದಂದು ಬೆಳದಿಂಗಳ ಊಟ ಎಂಬ ಕಾರ್ಯಕ್ರಮವನ್ನು ಹರಿಜನರ ಕೇರಿಗಳಲ್ಲಿ ಏರ್ಪಡಿಸಿ, ಅವರೊಂದಿಗೆ ಸಹಭೋಜನ ನಡೆಸುತ್ತಿದ್ದರು. ಜಾತಿಯ ವಿನಾಶಕ್ಕೆ ಅಂತರ್ಜಾತಿಯ ವಿವಾಹ ಮದ್ದು ಎಂದು ಬಲವಾಗಿ ನಂಬಿದ್ದ ಅವರು ತಮ್ಮ ಪುತ್ರಿಯನ್ನು (ಮನೋರಮಾ) ಹರಿಜನ ಯುವಕನಿಗೆ ವಿವಾಹ ಮಾಡಿಕೊಡಲು ನಿರ್ಧರಿಸಿ, ಈ ವಿವಾಹವನ್ನು ವಾರ್ಧಾ ಆಶ್ರಮದಲ್ಲಿ ನಡೆಸಿಕೊಡುವಂತೆ ಗಾಂಧಿಯವರಿಗೆ ಪತ್ರ ಬರೆದರು. ಗೋರಾ ಅವರ ಪುತ್ರಿಗೆ ಹದಿನೇಳು ವರ್ಷ ಎಂದು ತಿಳಿದ ಗಾಂಧಿಯವರು ಹತ್ತೊಂಬತ್ತು ವರ್ಷ ತುಂಬಿದ ಮೇಲೆ ವಿವಾಹ ಮಾಡೋಣ ಅಕಸ್ಮಾತ್ ಈಗಲೇ ನೆರವೇರಬೇಕು ಎಂಬುದು ನಿನ್ನ ಇಚ್ಛೆಯಾಗಿದ್ದರೆ ಮಾಡೋಣ ಆದರೆ, ನಿನ್ನ

ಪುತ್ರಿಗೆ ಹತ್ತೊಂಬತ್ತು ತುಂಬುವವರೆಗೆ ಆಕೆ ದಾಂಪತ್ಯ ಜೀವನ ನಡೆಸಬಾರದು ಎಂದು ಪತ್ರ ಬರೆದಿದ್ದರು. ಗಾಂಧೀಜಿಯವರ ಸಲಹೆಯನ್ನು ೧೯೪೭ರಲ್ಲಿ ಒಪ್ಪಿದ ಗೋರಾರವರು ತಮ್ಮ ಭಾವಿ ಅಳಿಯನನ್ನು (ಅರ್ಜುನ) ವಾರ್ಧಾ ಆಶ್ರಮಕ್ಕೆ ಕಾರ್ಯಕರ್ತನಾಗಿ ಸೇವೆ ಸಲ್ಲಿಸಲು ಕಳಿಸಿಕೊಟ್ಟರು. ಈ ಸಂದರ್ಭದಲ್ಲಿ ಗಾಂಧೀಜಿಯವರು ಗೋರಾರವರಿಗೆ ಪತ್ರ ಬರೆದು ನಿನ್ನ ಭಾವಿ ಅಳಿಯ ಆಶ್ರಮದಲ್ಲಿ ನಡೆಯುವ ಪ್ರಾರ್ಥನೆಯಲ್ಲಿ ಪಾಲ್ಗೊಳ್ಳಲಿ, ಆದರೆ, ಅವನು ಮಂತ್ರ ಅಥವಾ ಶ್ಲೋಕ ಹೇಳುವುದು ಬೇಡ ಎಂಬ ನಿಲುವನ್ನು ತಾಳಿದ್ದರು.

ದುರದೃಷ್ಟವಶಾತ್ ೧೯೪೯ಕ್ಕೆ ನಡೆಯಬೇಕಿದ್ದ ವಿವಾಹಕ್ಕೆ ನೇತೃತ್ವ ವಹಿಸಬೇಕಿದ್ದ ಗಾಂಧಿಯವರು ೧೯೪೮ರ ಜನವರಿಯಲ್ಲಿ ಮತಾಂಧನೊಬ್ಬನ ಗುಂಡಿಗೆ ಬಲಿಯಾದರು. ಕೊನೆಗೂ ಅವರ ಆಶಯದಂತೆ ೧೯೪೯ರಲ್ಲಿ ವಾರ್ಧಾ ಸಮೀಪದಲ್ಲಿ ಇದ್ದ ಸೇವಾಗ್ರಾಮದಲ್ಲಿ ಗೋರಾ ಅವರ ಪುತ್ರಿಯ ಅಂತರ್ಜಾತಿಯ ವಿವಾಹ ನೆರವೇರಿತು. ತಾವು ನಂಬಿದ್ದ ತತ್ವಗಳಿಗೆ ಬದ್ಧರಾಗಿ ಬಾಳಿದ ಗೋರಾ ೧೯೭೫ರಲ್ಲಿ ನಿಧನರಾದರು. ತತ್ವ ಸಿದ್ಧಾಂತಗಳ ಭಿನ್ನಾಭಿಪ್ರಾಯಗಳ ನಡುವೆ ಮಾನವೀಯತೆ ಮತ್ತು ಮನುಷ್ಯ ಸಂಬಂಧ ಮುಖ್ಯ ಎಂಬುದನ್ನು ಸಾಧಿಸಿ ತೋರಿಸಿದ ಈ ಗುರು-ಶಿಷ್ಯರ ಆದರ್ಶನೀಯವಾದ ಬದುಕು ಇದೀಗ ಕರ್ನಾಟಕದಲ್ಲಿ ತಾಂಡವವಾಡುತ್ತಿರುವ ವಿಕಾರಗಳಿಗೆ ಮದ್ದಾದರೆ ಎಷ್ಟು ಚೆನ್ನ? ಅಲ್ಲವೆ?

ನಿಲುವು

ಗೌರಿ ಹತ್ಯೆ ಮತ್ತು ನಂತರ

ಪತ್ರಕರ್ತೆ ಗೌರಿ ಹತ್ಯೆಯಾಗಿ ಮೂರು ವಾರಗಳು ಕಳೆದು ಹೋದವು. ತನಗನಿಸಿದ್ದನ್ನು ನೇರವಾಗಿ ಸ್ವಲ್ಪ ಚುಚ್ಚುಮಾತಿನಲ್ಲೇ ಹೇಳುತ್ತಿದ್ದ ಗೌರಿಯ ಹತ್ಯೆ ಖಂಡನೀಯ. ಗೌರಿಯ ಹತ್ಯೆಗಿಂತಲೂ ಆ ನಂತರದ ಘಟನೆಗಳು ಅತ್ಯಂತ ಅಪಾಯಕಾರಿಯಾದವು. ಈ ಮುಂದಿನ ಮಾತುಗಳು ಕೇವಲ ಗೌರಿ ಹತ್ಯೆಯನ್ನು ಗಮನದಲ್ಲಿ ಇಟ್ಟುಕೊಂಡು ಬರೆದಿಲ್ಲ. ಬದಲಿಗೆ ಇಂತಹ ಘಟನೆಗಳು ನಡೆದಾಗ ಇತ್ತೀಚಿನ ವರ್ಷಗಳಲ್ಲಿ ಸಮಾಜ ಸ್ಪಂದಿಸುತ್ತಿರುವ ಪರಿಯನ್ನು ಗಮನಿಸಿ ಬರೆಯಲಾಗಿದೆ. ಸಮಾಜದಲ್ಲಿ ಅಭಿಪ್ರಾಯ ಮಂಡನೆಗೆ ಇರುವ ಕನಿಷ್ಟ ಶಿಷ್ಟಾಚಾರಗಳನ್ನೂ ತೂರಿಬಿಟ್ಟು ಅತ್ಯಂತ ಬೇಜವಾಬ್ದಾರಿಯಿಂದ ಸಾರ್ವಜನಿಕರು ವರ್ತಿಸುವುದು ಕಳವಳಕಾರಿಯಾದ ಸಂಗತಿ. ಒಂದು ದುರ್ಘಟನೆ ನಡೆದಾಗ ತಲೆತಗ್ಗಿಸಬೇಕು. ಇಂತಹ ಘಟನೆಯ ಬಗ್ಗೆ ಒಂದಿಷ್ಟು ಕಳವಳ,ಆತಂಕ ಮತ್ತು ಸಾಮಾಜಿಕ ಮೌಲ್ಯಗಳ ಬಗ್ಗೆ ಚರ್ಚೆಯಾಗಿ ಆತ್ಮವಿಮರ್ಶೆ

ಆಗಬೇಕು. ಬದಲಿಗೆ ಇದೊಂದು ಕರ್ಕಷ ಆಪಾದನೆ- ಗೇಲಿ-ಸಮರ್ಥನೆಯ ಆಖಾಡಾ ಆಗುವುದು ಅಪಾಯಕಾರಿ ವಿದ್ಯಾಮಾನ.

ಹತ್ಯೆಯನ್ನು ಸಂಭ್ರಮಿಸಿ ತಮ್ಮ ಅಭಿಪ್ರಾಯಗಳನ್ನು ತೂರಿಬಿಡುವ ಜನ ಒಂದು ಕಡೆಯಾದರೆ ಘಟನೆ ನಡೆದ ಕೂಡಲೆಯೇ ಇಂತಹವರೇ ಇದಕ್ಕೆ ಕಾರಣ ಎಂದು ಆಕ್ರೋಶದಲ್ಲಿ ತೀರ್ಮಾನಿಸುವ ಜನ ಮತ್ತೊಂದೆಡೆ. ತಮ್ಮ ಈ ವರ್ತನೆಗಳು ದೀರ್ಘಾವಧಿಯಲ್ಲಿ ಸಮಾಜದ ಮೇಲೆ ಬೀರುವ ಪರಿಣಾಮದ ಬಗ್ಗೆ ಯಾರೂ ಚಿಂತನೆಯನ್ನೂ ಮಾಡುವುದಿಲ್ಲ. ಭಿನ್ನಾಭಿಪ್ರಾಯ ಇದ್ದ ಮಾತ್ರಕ್ಕೆ ವ್ಯಕ್ತಿಯ ಕೊಲೆಯನ್ನು ಸಂಭ್ರಮಿಸುವ ಗುಣವನ್ನು ಬೆಳೆಸಿಕೊಳ್ಳುವ ಒಂದು ಸಮಾಜ ದುರಂತದ ಹಾದಿಯನ್ನು ಹಿಡಿದಿದೆ ಎಂದು ಅರ್ಥ. ಅಭಿಪ್ರಾಯ ಬೇಧಕ್ಕೆ ಅವಕಾಶವೇ ಇಲ್ಲದ ಸಮಾಜ ಅಥವಾ ರಾಷ್ಟ್ರಕ್ಕೆ ಉಜ್ವಲ ಭವಿಷ್ಯ ಇರಲು ಸಾಧ್ಯವಿಲ್ಲ.

ಹಿಂದಿನ ತಲೆಮಾರಿಗೆ ಹೋಲಿಸಿದರೆ ಇಂದಿನ ತಲೆಮಾರಿನಲ್ಲಿ ಹೆಚ್ಚಿನ ವಿದ್ಯಾವಂತರಿದ್ದಾರೆ, ತಮ್ಮ ಅಭಿಪ್ರಾಯುವನ್ನು ಮಂಡಿಸಲು ವಿವಿಧ ಮಾಧ್ಯಮಗಳಿವೆ. ಆದರೆ ಒಂದು ನಾಗರೀಕ ಸಮಾಜದಲ್ಲಿ ತನ್ನ ಅಭಿಪ್ರಾಯವನ್ನು ಸಜ್ಜನಿಕೆಯಿಂದ ಮಂಡಿಸುವ ಕೌಶಲ್ಯವೇ ಇಲ್ಲದಂತಾಗಿದೆ. ವ್ಯಕ್ತಿಯ ಅಭಿಪ್ರಾಯ ಮಂಡನೆಗೆ ಇಂದು ಸಾಮಾಜಿಕ ಜಾಲತಾಣದಲ್ಲಿ ಮುಕ್ತ ಅವಕಾಶವಿದೆ. ಯಾರು ಬೇಕಾದರೂ ಏನನ್ನಾದರೂ ಅಲ್ಲಿ ತಳ್ಳಬಹುದು. ಸಾಮಾಜಿಕ ಜಾಲತಾಣಕ್ಕೆ ಯಾವುದೇ ವಿಷಯವನ್ನು ಸೇರಿಸುವ ಮೊದಲು ಇರಬೇಕಾದ ವಿವೇಚನೆ ಮಾತ್ರ ಇಲ್ಲ. ಸ್ವಾತಂತ್ರ್ಯವೂ ಕಾಲದ ಸಂದರ್ಭದಲ್ಲಿ ಸ್ವೇಚ್ಛೆಯಾಗುವ ಚಿಹ್ನೆಗಳಿವು.

ಇದು ಮಹಾತ್ಮ ಗಾಂಧಿಯವರು ಜನಿಸಿದ ತಿಂಗಳು. ಈ ದೇಶದಲ್ಲಿ ಗಾಂಧಿಯಷ್ಟು ಸಾರ್ವಜನಿಕವಾದ ವ್ಯಕ್ತಿ ಮತ್ತೊಬ್ಬನಿರಲಿಕ್ಕಿಲ್ಲ. ಹಾಗಾಗಿ ಪ್ರತಿದಿನ ಅವರಿಗೆ ದೇಶದ ಮೂಲೆ ಮೂಲೆಗಳಿಂದ ಅವರ ಅಭಿಪ್ರಾಯವನ್ನು ಮೆಚ್ಚುವ ಮತ್ತು ಅಭಿಪ್ರಾಯವನ್ನು ವಿರೋಧಿಸುವ ನೂರಾರು ಪತ್ರಗಳು ಬರುತ್ತಲೇ ಇದ್ದವು. ಆ ಪತ್ರಗಳಿಗೆ ಗಾಂಧಿಯೇ ಸ್ವತ: ಉತ್ತರಿಸುತ್ತಿದ್ದರು. ಆದರೆ ಅವರು ಉತ್ತರಿಸಿದ ಸಾವಿರಾರು ಪತ್ರಗಳಲ್ಲಿ ಒಮ್ಮೆಯೂ ಅವರ ಸಂಯಮ ಮೀರಿ, ಎದುರಿನ ವ್ಯಕ್ತಿಗೆ ಮನ ನೋಯುವಂತೆ ಉತ್ತರಿಸಿರುವ ಒಂದೇ ಒಂದು ಪತ್ರ ನಮಗೆ ಸಿಗುವುದಿಲ್ಲ. ಕಲುಷಿತ ವಾತಾವರಣದ ಈ ದಿನಗಳಲಿ ಆ ಸಂಯಮವನ್ನು ಗಾಂಧಿ ಮತ್ತು ಆ ತಲೆಮಾರಿನ ಇತರ ಹಿರಿಯರಿಂದ ನಾವು ಕಲಿಯಬೇಕಿದೆ.

"ಜನಪದ ವಿಚಾರ"

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಕರ್ನಾಟಕದಲ್ಲಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ಚಂದಾದಾರರಲ್ಲಿ ವಿನಂತಿ:–

"ಜನಪದ ವಿಚಾರ" ಪ್ರತಿ ತಿಂಗಳು ೩೦ನೇ ತಾರೀಖು ಅಂಚೆಗೆ ಹೋಗುತ್ತದೆ. ತಿಂಗಳ ಒಂದು ವಾರದಲ್ಲಿ ಪತ್ರಿಕೆ ತಲುಪದಿದ್ದರೆ ಕೂಡಲೆ ತಿಳಿಸಿ – ೭೮೯೫೪೮೯೧೫೭

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest
janapada seva Trust Melkote, Dist- Mandya - 571431. Phone : 08236 299854
e-mail : janapada@yahoo.com - Web : janapada.org
Printed at chandragiri printers, Mandya- Mob: 9945651584, 9739743237